ಮೂರು – ನಾಲ್ಕು ಕ್ವಶ್ಚನ್ಸ್‌ಗಳು ಇದ್ದವು, ಅವೆಲ್ಲವನ್ನೂ ಹೆಲ್ಡ್ ಓವರ್ ಎಂದು ಮಾಡಿದೆ. ಆದಷ್ಟು ಜಾಗ್ರತೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು:– ಆ ರೀತಿ ನಾನು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಅದನ್ನು ಹಾಕಿಸೋಣ.

ಉಪಾಧ್ಯಕ್ಷರು:– ಈಗ ಒಂದೊಂದು ಗ್ರೂಪ್ಸ್ ಮಾಡಿರುತ್ತೇವೆ. ಆ ಗ್ರೂಪ್‌ನಲ್ಲಿ ಮತ್ತೆ ಬಂದಾಗ ಆ ಪ್ರಶ್ನೆಯನ್ನು ಹಾಕುತ್ತೇವೆ. ಈಗ ಅಯೋಧ್ಯೆ ಘಟನೆ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಗೆ ಸಂಬಂಧಿಸಿದಂತೆ....

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ ಗ್ರೂಪ್‌ಗೆ ಬರುವುದಿಲ್ಲ. ನಾನು ತಮ್ಮ ಛೇಂಬರ್ಸ್‌ಗೆ ಬಂದಾಗ 64ಕ್ಕೆ ಕನ್‌ವರ್ಟ್ ಮಾಡಿದ್ದೇನೆ, ನೋಟೀಸ್ ಕಳಿಸಿ ಅದನ್ನು ಅಕ್ಸೆಪ್ಟ್ ಮಾಡಿಕೊಂಡಿದ್ದೇನೆ ಎಂದು ಹೇಳಿದಿರಿ. ಈಗ ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೀರಿ.

ಉಪಾಧ್ಯಕ್ಷರು:– ಈಗ ನಿನ್ನೆ ನಾನು ಹೇಳಿದ್ದು ಹೆಲ್ಡ್ ಓವರ್ ಕ್ವಶ್ಚನ್‌ಗೆ ಮಾಡಿದ್ದೇವೆ ಎಂದು. ನಿನ್ನೆ ನೀವು ಬಂದು ಮಾತನಾಡಿದ್ದುದು ನೆರೆಹಾವಳಿ ಬಗ್ಗೆ ಮಾತನಾಡುತ್ತೇನೆ ಎಂದು, ಇದರ ಬಗ್ಗೆ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಇದರ ಬಗ್ಗೆಯೇ ಹೇಳಿದ್ದುದು. ಮಾನ್ಯ ಯಡಿಯೂರಪ್ಪನವರ ಪ್ರಶ್ನೆ ಅಂದ ತಕ್ಷಣ ಅದಕ್ಕೆ ಅಡ್ಡ ದಾರಿ ಹಿಡಿಸುವಂತೆ ಇವರೇ ಪ್ರಯತ್ನ ಮಾಡುತ್ತಾರೇನೋ ಎಂದು, ನನಗೆ ಇದು ಅರ್ಥ ಆಗುವುದಿಲ್ಲ.

ಉಪಾಧ್ಯಕ್ಷರು:– ಇದರ ಬಗ್ಗೆ ಆದರೆ ಅದಲ್ಲ. ನಾನು ನೀವು ಇಬ್ಬರೂ ಕನ್‌ಫ್ಯೂಸ್ ಮಾಡಿಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಾದರೆ ಸರಿ, ನಾಳೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಉಪಾಧ್ಯಕ್ಷರು:– ನಾಳೆ ಎಂದು ಹೇಳುವುದಿಲ್ಲ. ಆ ಗ್ರೂಪ್‌ನಲ್ಲಿ ಬಂದಾಗ ಖಂಡಿತವಾಗಿ ತೆಗೆದುಕೊಳ್ಳೋಣ.

ಶ್ರೀ ಬಿ.ಎಂ. ಇದಿನಬ್ಬ:– ಇವತ್ತು ಕಾಲಿಂಗ್ ಅಟೆನ್‌ಷನ್ಸ್ ಇಲ್ಲವೇ ?

<u>ಅಯೋಧ್ಯೆಯ ಘಟನೆಗೆ ಸಂಭವಿಸಿದಂತೆ ಮುಖ್ಯಮಂತ್ರಿಯವರ ಹೇಳಿಕೆಯ ಮೇಲೆ ಚರ್ಚೆ</u>

ಉಪಾಧ್ಯಕ್ಷರು:– ಇವತ್ತು ಕಾಲಿಂಗ್ ಅಟೆನ್‌ಷನ್ಸ್ ಇಲ್ಲ, 334ರ ನಿಯಮದ ಮೇರೆಗೆ ಚರ್ಚೆಯೂ ಇಲ್ಲ.

''ಅಯೋಧ್ಯೆಯ ಘಟನೆಯ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆಯ ಮೇಲೆ ಮುಂದುವರಿದ ಚರ್ಚೆ''... ಶ್ರೀಯುತ ರಾಮಕೃಷ್ಣ ಹೆಗಡೆಯವರು...

ಶ್ರೀ ರಾಮಕೃಷ್ಣ ಹೆಗಡೆ (ಬಸವನಗುಡಿ):– ಮಾನ್ಯ ಅಧ್ಯಕ್ಷಿಣಿಯವರೆ, ಈ ನಿಲುವಳಿ ಸೂಚನೆಯನ್ನು ತಂದಾಗ ಮಾನ್ಯ ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷದ ನಾಯಕರ ನಡುವೆ ಪ್ರಸ್ತಾವಿಕವಾದ ಚರ್ಚೆ ಆಯಿತು. ಆ ಸಂದರ್ಭದಲ್ಲಿ ನಾನು ಹೇಳಿದೆ, ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದಕ್ಕಿಂತ ಮೊದಲು ವಿರೋಧಿ ಪಕ್ಷದ ನಾಯಕರು ಈ ನಿಲುವಳಿ

ಸೂಚನೆಯನ್ನು ತರತಕ್ಕ ಅಗತ್ಯ ಮತ್ತು ಅದರ ಮಹತ್ವ ಇದರ ಬಗ್ಗೆ ತಮ್ಮ ವಿಚಾರಗಳನ್ನು ಹೇಳುವುದು ಒಳ್ಳೆಯದು ಎಂದು. ಅದರಂತೆ ಈ ಕಡೆ ಇದ್ದಂತಹ ಸದಸ್ಯರಾಗಲೀ ಅಥವಾ ಆ ಕಡೆ ಇದ್ದಂತಹ ಸದಸ್ಯರೇ ಆಗಲೀ ತಮ್ಮ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಒಳ್ಳೆಯದೆಂದು ನಾನು ಹೇಳಿದೆ. ಆದರೆ ಆ ಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಲಿಲ್ಲ. ಅವರು ಆಗ್ರಹ ಮಾಡಿದರು, ನಾನು ಮೊದಲು ಹೇಳಿಕೆಯನ್ನು ಕೊಡುತ್ತೇನೆ. ಅದಾದ ಮೇಲೆ ಇದರ ಬಗ್ಗೆ ಚರ್ಚೆ ಆಗಲಿ ಎಂದು. ಆ ಪ್ರಕಾರ ಅವರು ಹೇಳಿಕೆಯನ್ನು ಕೊಟ್ಟರು.

(ಶ್ರೀ ಡಿ.ಎ. ಚಿನ್ನಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾನು ಒಂದು ಅತ್ಯಂತ ಗಂಭೀರವಾದಂತಹ ವಿಚಾರದ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಅಷ್ಟೇ ಗಂಭೀರವಾದಂಥದ್ದು ಇರುತ್ತದೆಂದು ನಿರೀಕ್ಷೆ ಮಾಡಿದ್ದೆ. ಆದರೆ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಅವರು ಸದನದ ಮುಂದೆ ಇತ್ತಂತಹ ಹೇಳಿಕೆ ನಮ್ಮ ರಾಜ್ಯದಲ್ಲಿ ಗಲಭೆ ಆದಂತಹ ಪ್ರದೇಶದ ಪೊಲೀಸ್ ಅಧಿಕಾರಿಗಳು ತಯಾರು ಮಾಡಿದಂತಹ ಒಂದು ಹೇಳಿಕೆ. ಅದು ಒಂದು ಸಣ್ಣ ಪೊಲೀಸ್ ವರದಿ ಇದ್ದ ಹಾಗೆ. ಇಲ್ಲಿ ಗಲಭೆ ಆದ ಹಿನ್ನೆಲೆ ಏನು ಮತ್ತು ಕೋಮುವಾರು ಸೌಹಾರ್ದತೆಯನ್ನು ಉಂಟು ಮಾಡಲಿಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದಕ್ಕೆ ಬಯಸುತ್ತದೆ ? ಮುಂದೆ ಈ ರೀತಿ ದುರ್ಘಟನೆ ಆಗದಂತೆ ಕ್ರಮವನ್ನು ಯಾವುದಾದರೂ ಅವರು ತೆಗೆದುಕೊಳ್ಳುತ್ತಾರೆಯೇ ? ಈ ವಿಚಾರದ ಬಗ್ಗೆ ಅವರು ಹೇಳುವುದಕ್ಕೆ ಸಂಪೂರ್ಣವಾಗಿ ಮೌನವಾಗಿದ್ದಾರೆ. ಈ ಚರ್ಚೆ ಮುಗಿದ ಮೇಲಾದರೂ ನಾನು ಈ ಬಗ್ಗೆ ನಿರೀಕ್ಷಣೆ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಮಸ್ಯೆಯನ್ನು ಗಂಭೀರವಾದಂತಹ ರೀತಿಯಲ್ಲಿ ವಿಚಾರಣೆ ಮಾಡುತ್ತಾರೆ ಮತ್ತು ಸರ್ಕಾರದ ನಿಲುವನ್ನು ಈ ಸದನದ ಮುಂದೆ ವ್ಯಕ್ತ ಮಾಡುತ್ತಾರೆಂದು ನಾನು ನಿರೀಕ್ಷಣೆ ಮಾಡುತ್ತೇನೆ. ನಿನ್ನೆಯ ದಿವಸ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರು ಇಲ್ಲಿ ತಮ್ಮ ವಿಚಾರವನ್ನು ವ್ಯಕ್ತ ಮಾಡಿದರು. ನನಗೆ ಬೇರೆ ಯಾವುದೋ ಕೆಲಸ ಇತ್ತು, ಅವರು ಈ ಸಭೆಯಲ್ಲಿ ಮಾತನಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ, ಆದ್ದರಿಂದ ನಾನು ಸದನದಲ್ಲಿ ಹಾಜರಿರಲಿಲ್ಲ. ಇವತ್ತು ಪತ್ರಿಕೆಗಳಲ್ಲಿ ಅವರ ಭಾಷಣದ ವರದಿಯನ್ನು ನಾನು ನೋಡಿದ್ದೇನೆ. ಅವರು ಯಾವ ರೀತಿ ಭಾಷಣವನ್ನು ಮಾಡಿದರೋ ಆ ರೀತಿ ಭಾಷಣ ಮಾಡಿದ್ದರಿಂದ ನನ್ನ ಕೆಲಸ ಬಹಳ ಹಗುರವಾಗಿದೆ ಎಂದು ನಾನು ಹೇಳಬೇಕು. ನಾನು ಒಪ್ಪುತ್ತೇನೆ. ಕೆಲವು ಜನರು ಈಗಾಗಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತೆ ಅವರು ಆಳುವ ಪಕ್ಷದ ಒಬ್ಬ ಸದಸ್ಯರಾಗಿ ಮಾತನಾಡಲಿಲ್ಲ. ಅಥವಾ ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಮಾತನಾಡಲಿಲ್ಲ. ಅವರು ಈ ಪಕ್ಷದ ಲೆವೆಲ್‌ಗಿಂತ ಮೇಲೆ ಎದ್ದು ಮಾತನಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಮತ್ತು ಅವರು ಅದೇ ರೀತಿಯ ಅಭಿಪ್ರಾಯವನ್ನು ಹೊಂದಿ ಮಾತನಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಅಥವಾ ಅದರಲ್ಲಿ ಬೇರೆ ಯಾವುದಾದರೂ ಅರ್ಥ ಇದೆಯೋ ನನಗೆ ಗೊತ್ತಿಲ್ಲ. ನಾನು ಅದರ ಲಾಭವನ್ನು ಅವರಿಗೆ ಬಿಡುತ್ತೇನೆ. ಅವರು ಭಾಷಣ ಮಾಡುವಾಗ ಸ್ನೇಹಿತರಾದ ಮಾನ್ಯ ಖರ್ಗೆಯವರು ಮಧ್ಯೆ ಪ್ರವೇಶಿಸಿ ಇದೆಲ್ಲಾ ರಾಷ್ಟ್ರಕ್ಕೆ ಸಂಬಂಧಪಟ್ಟಂಥ ವಿಚಾರ ನೀವು ಈ ಪ್ರಶ್ನೆಯನ್ನು ಇಲ್ಲಿ ಕೇಳಿದರೆ ಅದಕ್ಕೆ ಉತ್ತರ ಕೊಡುವವರು ಯಾರು ? ನಮಗೂ ಅದಕ್ಕೂ ಸಂಬಂಧವಿಲ್ಲ. ನಾವು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂಥ ಇಲ್ಲಿ ಲಾ ಅಂಡ್ ಆರ್ಡರಿಗೆ ಸಂಬಂಧಪಟ್ಟಂಥ ವಿಚಾರಕ್ಕೆ ಮಾತ್ರ ಸೀಮಿತವಾಗಿ, ಎಂದು ಹೇಳತಕ್ಕಂಥ ಸೂಚನೆಯನ್ನು ಮಾನ್ಯ ವೀರೇಂದ್ರ ಪಾಟೀಲರಿಗೆ ಮಾಡಿದರು. ಮಾನ್ಯ ಖರ್ಗೆಯವರು ಇಲ್ಲಿ ಇರಬೇಕಾಗಿತ್ತು, ಆದರೆ ಅವರು ಇಲ್ಲಿ ಈಗ ಇಲ್ಲ. ನನ್ನ ಅಭಿಪ್ರಾಯದಲ್ಲಿ ಆ ತರಹ ಸೂಚನೆ ಮಾಡತಕ್ಕದ್ದು ಅನಗತ್ಯ ಅಷ್ಟೇ ಅಲ್ಲ: ಅದೊಂದು ಅಗೌರವವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯ ಎಲ್ಲಿಯವರೆಗೆ ಭಾರತದ ಒಂದು ಭಾಗವಾಗುತ್ತದೆಯೋ ಅಲ್ಲಿಯವರೆಗೂ ರಾಷ್ಟ್ರಕ್ಕೆ

ಸಂಬಂಧಪಟ್ಟಂತಹ ಗಹನವಾದ ವಿಚಾರವನ್ನು ರಾಷ್ಟ್ರದ ಹಿತಕ್ಕೆ ಸಂಬಂಧಪಟ್ಟಂತಹ ವಿಚಾರವನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ನಮಗೆ ಅಧಿಕಾರ ಇದೆ. ನಮ್ಮ ನಿರ್ಣಯ ಪರಿಣಾಮಕಾರಿಯಾಗಿ ಇರುತ್ತದೆಯೋ ಇಲ್ಲವೋ ಆ ಮಾತು ಬೇರೆ. ಎಷ್ಟೋ ಸಂದರ್ಭದಲ್ಲಿ ನಾವು ನಮ್ಮ ಕರ್ನಾಟಕದ ಗಡಿಗೆ ಮೀರಿದ ಸಮಸ್ಯೆಗಳು ಏನಿವೆ, ಅವುಗಳಿಗೆ ನಮ್ಮ ಅಭಿಪ್ರಾಯವನ್ನು ಇಲ್ಲಿ ವ್ಯಕ್ತ ಮಾಡಿದ್ದೇವೆ; ಠರಾವನ್ನು ಇಲ್ಲಿ ಪಾಸ್ ಮಾಡಿದ್ದೇವೆ. ಆದ್ದರಿಂದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಏನು ಅಭಿಪ್ರಾಯವನ್ನು....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಹೆಗಡೆಯವರು ಹೇಳಿದಂಥ ಮಾತು ಅದು ಯಾವ ತತ್ವದ ಆಧಾರದ ಮೇಲೆ ಹೇಳಿದ್ದಾರೋ ಅದನ್ನು ಒಪ್ಪುತ್ತೇನೆ. ಆದರೆ ಯಾವ ವಿಷಯದ ಮೇಲೆ ಚರ್ಚೆಯಾಗುತ್ತಿದೆಯೋ ಈ ಚರ್ಚೆಗೆ ಸಂಬಂಧಪಟ್ಟಂತೆ ರಾಷ್ಟ್ರಮಟ್ಟದ ವಿಚಾರಗಳನ್ನು ಹೇಳುವುದರಲ್ಲೂ ಸೂಕ್ತ ಇದೆ. ಅದನ್ನು ಬೇಡ ಎಂದು ಯಾರು ಹೇಳುವುದಕ್ಕಾಗುವುದಿಲ್ಲ. ನಾವು ಯಾವ ವಿಚಾರದಲ್ಲಿ ಸಂಶಯ ವ್ಯಕ್ತಪಡಿಸಿದ್ದೇವೆ ಎಂದರೆ ಫೈನಾನ್ಷಿಯಲ್ ಸ್ಕ್ಯಾಮ್ ಅಥವಾ ಸೋಲಂಕಿಯವರ ಸಂಬಂಧವಾದ ವಿಷಯ ಇತ್ಯಾದಿ ಈ ಚರ್ಚೆಯ ಮಧ್ಯದಲ್ಲಿ ಉಪಯೋಗಿಸುವುದು ಸೂಕ್ತ ಅಲ್ಲ. It is not relevant.

3.05 ಪಿ.ಎಂ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಕಾನೂನು ಮಂತ್ರಿಗಳು ಇದರ ಮಧ್ಯೆ ಪ್ರವೇಶ ಮಾಡಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತಹ ಮಾತುಗಳಿಗೆ ಸ್ವಲ್ಪ ಸಮರ್ಥನೆ ಕೊಡುವುದಕ್ಕೆ ಪ್ರಯತ್ನ ಮಾಡಿದರು. ನಿನ್ನೆನೇ ನಾನು ಈ ಮಾತನ್ನು ಹೇಳಬೇಕು ಎಂದು ಇದ್ದೆ. ಆದರೆ ಆಗುತ್ತಿದ್ದಂತಹ ಗದ್ದಲದ ನಡುವೆ ನನಗೆ ಅವಕಾಶ ಆಗಲಿಲ್ಲ. ನನಗೆ ಅನ್ನಿಸಿದ್ದು ಸನ್ಮಾನ್ಯ ವೀರೇಂದ್ರ ಪಾಟೀಲರು, ಒಬ್ಬ ಪಕ್ಷದ ವ್ಯಕ್ತಿಯಾಗಿ ಮಾತನಾಡುತ್ತಿರಲಿಲ್ಲ. ಪಕ್ಷವನ್ನು ಮೆಟ್ಟಿನಿಂತು ಮಾತನಾಡುತ್ತಿದ್ದರು. ರಾಜ್ಯಕ್ಕೆ ಸೀಮಿತವಾಗಿ ಚರ್ಚೆ ಮಾಡಬೇಕು, ವಿಚಾರ ಮಾಡಬೇಕೆನ್ನುವ ಮಾತಿನಲ್ಲಿ ಅರ್ಥವೇ ಇಲ್ಲ. ಏಕೆಂದರೆ, ನಾವು ಚರ್ಚೆ ಮಾಡುತ್ತಿರುವ ವಿಚಾರ it is a clear fall out from Ayodhya. So we have to discuss politics and economics behind Ayodhya. That was what exactly Mr. Veerendra Patil was discussing. He was trying to enlighten about the politics and economics behind Ayodhya. He had every right to discuss it and we also have a right to discuss it.

SRI HARNALLI RAMASWAMY:– Bank scam, or Solanki episode, if somebody says that it is something to do with Ayodhya, then are we to agree to it?

ಶ್ರೀ ರಾಮಕೃಷ್ಣ ಹೆಗಡೆ:– ಅದಕ್ಕೆ ನಾನು ಮೊದಲೇ ಹೇಳಿದೆ. ಮಾನ್ಯ ವೀರೇಂದ್ರ ಪಾಟೀಲರು ಭಾಷಣ ಮಾಡುವಾಗ ನಾನು ಸದನದಲ್ಲಿ ಹಾಜರಿರಲಿಲ್ಲ. ಆದುದರಿಂದ, ಯಾವ ಸಂದರ್ಭದಲ್ಲಿ ಅವರು ಸೋಲಂಕಿಯ ವಿಚಾರವನ್ನು ಪ್ರಸ್ತಾಪ ಮಾಡಿದರು, ಯಾವ ಸಂದರ್ಭದಲ್ಲಿ ಸೆಕ್ಯೂರಿಟಿ ಸ್ಕ್ಯಾಮ್ ವಿಚಾರವನ್ನು ಪ್ರಸ್ತಾಪ ಮಾಡಿದರು, ಅದನ್ನು ನಾನು ಕೇಳಲಿಲ್ಲ. ಆದರೆ ಭಾಷಣ ಮಾಡುವಾಗ ಅವರ ಓಘದಲ್ಲಿ ಅತ್ಯಂತ ಬೇಕಾದರೆ ನೀವು ಟೆಕ್ನಿಕಲ್ ಆಗಿ ನೋಡಿ, ಅವರು ಹೇಳಿದಂಥ ಮಾತುಗಳು ಇದಕ್ಕೆ ಸಂಬಂಧಪಟ್ಟಿದ್ದೇ, ಇದಕ್ಕೆ ಸಂಬಂಧ ಪಟ್ಟಿಲ್ಲವೇ ಎಂದು ನೀವು ವಿಶ್ಲೇಷಣೆ ಮಾಡುವುದಕ್ಕಾಗುವುದಿಲ್ಲ. ನನ್ನ ಅಭಿಪ್ರಾಯವೇನೆಂದರೆ, ಅಯೋಧ್ಯೆಯಲ್ಲಿರುವ ಬಾಬರಿ ಮಸೀದಿಯನ್ನು ಕೆಡವಿದ ನಂತರ ಯಾವ ವಾತಾವರಣ ಉಂಟಾಗಿತ್ತೋ ಆ ವಾತಾವರಣ ಆ ಮಸೀದಿಯನ್ನು ಕೆಡವದೇ ಇರುವುದಕ್ಕೇನಾದರೂ ಮೊದಲೇ ಕ್ರಮ ತೆಗೆದುಕೊಂಡಿದ್ದರೆ ಅಂತಹ

ವಾತಾವರಣ ಉಂಟಾಗುತ್ತಿರಲಿಲ್ಲ. ಆದುದರಿಂದ, ಅಲ್ಲಿ ನಡೆದಂಥ ಘಟನೆಗಳು ಮತ್ತು ಇಲ್ಲಿ ನಡೆದಂಥ ಪ್ರತಿಕ್ರಿಯೆಗಳಿಗೂ ನೇರ ಸಂಬಂಧವಿದೆ. ಅದನ್ನು ನಾನು ಪುನಃ ಹೇಳುವುದಕ್ಕೆ ಬಯಸುತ್ತೇನೆ. ದೇಶದಲ್ಲಿ ಕೆಲವು ಸಂದರ್ಭಗಳು ಬರುತ್ತವೆ. ಪ್ರತಿಯೊಬ್ಬ ರಾಜಕೀಯ ಕಾರ್ಯಕರ್ತ ಮತ್ತು ಮುಖಂಡ ತನ್ನ ಪಕ್ಷ, ಪಂಗಡ, ಜಾತಿ, ರಾಜ್ಯ ಇವುಗಳ ಮೇರೆಯನ್ನು ದಾಟಿ ಹೋಗಿ ಯೋಚನೆ ಮಾಡುವಂಥ ಪ್ರಸಂಗ ಬರುತ್ತದೆ. ನಾವು ಜೀವನದ ತುಂಬಾ ರಾಜಕೀಯ ಮಾಡುತ್ತೇವೆ. ಈ ಸದನದಲ್ಲಿ ಜಗಳವಾಡುತ್ತೇವೆ, ಸದನದ ಹೊರಗಡೆ ಜಗಳವಾಡುತ್ತೇವೆ. ಆದರೆ, ವಿವಿಧ ಪಕ್ಷಗಳು ತಮ್ಮ ತಮ್ಮಲ್ಲೇ ಜಗಳವಾಡುವುದಕ್ಕೆ ಮೂಲ ಉದ್ದೇಶವೇನು? ಹಿಂದಿನ 30 ವರ್ಷಗಳ ಇತಿಹಾಸವನ್ನು ತೆಗೆದುಕೊಂಡರೆ ನಮ್ಮ ದೇಶ ಪ್ರಪಂಚದ ನಕಾಶೆಯಲ್ಲಿ ಮೊದಲು ಯಾವ್ಯಾವ ಸ್ಥಾನಗಳನ್ನು ಪಡೆದುಕೊಂಡಿತ್ತೋ, ಆ ಸ್ಥಾನಗಳೆಲ್ಲವನ್ನೂ ಇವೊತ್ತು ಕಳೆದುಕೊಂಡಿದೆ. ಅದಕ್ಕೆ ಮುಖ್ಯವಾದ ಕಾರಣವೇನೆಂದರೆ, ಯಾವುದೇ ಸರ್ಕಾರವಾಗಲಿ, ರಾಜಕೀಯ ಪಕ್ಷವಾಗಲಿ ಒಂದು ಸಲ ಒಂದು ಸಂದರ್ಭದಲ್ಲಿ ಪಕ್ಷ, ಪಂಗಡಗಳ ಬೇಧವನ್ನು ಮರೆತು ಕೇವಲ ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಯೋಚನೆ ಮಾಡುವುದನ್ನೇ ಮರೆತು ಬಿಟ್ಟಿವೆ. ಮೊದಲು ಒಂದು ಕಾಲವಿತ್ತು. ಆದರೆ ಸ್ವಾತಂತ್ರ್ಯದ 10–15 ವರ್ಷಗಳವರೆಗೆ ಪ್ರತಿಯೊಂದಕ್ಕೂ ರಾಜಕೀಯ ತಂದಿದ್ದೇವೆ. ಮತ್ತು ಪ್ರತಿಯೊಂದನ್ನೂ ಚುನಾವಣೆ ದೃಷ್ಟಿಯಿಂದ ಮಾಡಿದ್ದೇವೆ. ನಮ್ಮ ಪಕ್ಷಕ್ಕೆ ಅದರಿಂದ ಏನು ಲಾಭವಾಗಬಹುದು, ದೇಶ ಹಾಳಾಗಲಿ, ಮುಂದಿನ ಪೀಳಿಗೆ ಹಾಳಾಗಲಿ, ನಮ್ಮ ಕೀರ್ತಿ ಹಾಳಾಗಲಿ, ಈ ಪ್ರಪಂಚದಲ್ಲಿ ನಮ್ಮ ಜಾಗ ಹೋಗಲಿ, ಇವುಗಳೆಲ್ಲವನ್ನೂ ನಾವು ಯೋಚನೆ ಮಾಡದೆ ತಾತ್ಕಾಲಿಕವಾದಂಥ ಲಾಭಕ್ಕಾಗಿ ವಿಚಾರ ಮಾಡಿದ್ದೇವೆ. ಇದರಲ್ಲಿ ನಾನು ಬೇರೆ, ನೀವು ಬೇರೆ, ಮತ್ತೊಬ್ಬರು ಬೇರೆ ಎಂದು ನಾನು ಹೇಳುತ್ತಿಲ್ಲ. ನಾವೆಲ್ಲರೂ ಆ ಅಪರಾಧವನ್ನು ಮಾಡಿದ್ದೇವೆ. ನಮಗೆ ಒಂದೇ ಒಂದು ಕೀರ್ತಿ ಇತ್ತು, ಬಾಕಿದೆಲ್ಲಾ ಹೋಯಿತು. ನಮಗೆ ಈವತ್ತು ಕ್ರೀಡಾ ಪ್ರಪಂಚದಲ್ಲಿ ಸ್ಥಾನವಿದೆಯೋ? ಸುಮಾರು 18–20 ವರ್ಷಗಳಿಂದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಟವಾಡದೇ ಇದ್ದಂಥ ಸೌತ್ ಆಫ್ರಿಕಾದ ಜೊತೆಗೆ ನಾವು ಆಟವಾಡಿ ಸೋತಿದ್ದೇವೆ. ಮೊದಲು ನಮ್ಮ ಭಾರತದ ಕ್ರಿಕೆಟ್ ಟೀಮ್‌ಗೆ ಬೆಲೆ ಇತ್ತು, ಆದರೆ ಇವತ್ತು ಕ್ರೀಡಾ ಪ್ರಪಂಚದಲ್ಲಿ ಆ ಕೀರ್ತಿ ಇಲ್ಲ, ವಿಜ್ಞಾನ ಪ್ರಪಂಚದಲ್ಲಿ ಇಲ್ಲ, ಔದ್ಯೋಗಿಕ ಪ್ರಪಂಚದಲ್ಲಿ ಇಲ್ಲ, ಆರ್ಥಿಕ ಪ್ರಪಂಚದಲ್ಲಿ ಇಲ್ಲ, ನಮಗೆ ಒಂದೇ ಒಂದು ಸ್ಥಾನವಿತ್ತು, ಅದೇನೆಂದರೆ ನಾವು ಹೊರದೇಶಕ್ಕೆ ಹೋದಾಗ ನಾವು ಎದೆಯುಬ್ಬಿಸಿ ಹೇಳಿಕೊಳ್ಳುವಂಥ ಸ್ಥಾನ, ಗೌರವ, ಕೀರ್ತಿ ಇತ್ತು. ಅದೇನೆಂದರೆ ಭಾರತ ದೇಶ ಒಂದು ಜಾತ್ಯಾತೀತ ರಾಷ್ಟ್ರ. ಅದು ಒಂದೇ ಒಂದು ಧಾರ್ಮಿಕ ಸಿದ್ಧಾಂತದ ಮೇಲೆ, ಧಾರ್ಮಿಕ ಭಾವನೆಯ ಮೇಲೆ ನಡೆಯತಕ್ಕಂಥ ರಾಷ್ಟ್ರವಲ್ಲ, ಸಕಲ ಧರ್ಮಗಳನ್ನು ಸರಿಯಾದ ರೀತಿಯಲ್ಲಿ, ಸಮವಾದ ರೀತಿಯಲ್ಲಿ ನೋಡತಕ್ಕಂಥ ರಾಷ್ಟ್ರ, ಪ್ರಪಂಚದಲ್ಲಿ ಇದಕ್ಕೆ ಸಮಾನವಾದ ಬೇರೆ ರಾಷ್ಟ್ರವಿಲ್ಲ ಎನ್ನುವ ಗೌರವ ಇತ್ತು. ಆದರೆ ದುರ್ದೈವದಿಂದ ಅಯೋಧ್ಯೆಯಲ್ಲಿ ಯಾವ ಘಟನೆಯಾಯಿತು ಅದರಿಂದ ಇದುವರೆವಿಗೆ ನಮಗೆ ಏನು ಒಂದು ಗೌರವವಿತ್ತೋ ಏನು ಕೀರ್ತಿ ಇತ್ತೋ ಅದೂ ಹೊರಟುಹೋಯಿತು. ಅಲ್ಲಿ ನಾಶವಾದುದು ಬಾಬರಿ ಮಸೀದಿಯಲ್ಲ, ಅಲ್ಲಿ ನಾಶವಾದುದು ನಮ್ಮ ದೇಶದ ಕೀರ್ತಿ; ಇದುವರೆವಿಗೂ ಆಗಾಗ್ಗೆ ಎಷ್ಟೇ ಕಲಹಗಳಾಗಲಿ, ಜಗಳವಾಗಲಿ ದಂಗೆಯಾಗಲಿ, ಹಿಂದೂ ಮತ್ತು ಮುಸಲ್ಮಾನರಲ್ಲಿ ನಾವು ಒಂದೇ ಎನ್ನುವ ಭಾವನೆ ಇತ್ತು; ನಾವು ಈ ದೇಶದವರು, ನಾವು ಇಲ್ಲಿಯೇ ಇರಬೇಕು, ನಮ್ಮ ಧಾರ್ಮಿಕ ಭಾವನೆಗೆ ಇಲ್ಲಿ ಮನ್ನಣೆ ಇದೆ, ನಮ್ಮ ವಿರುದ್ಧ ಯಾವುದೇ ರೀತಿಯಾದಂಥ ಅಸಮತೋಲನವಿಲ್ಲ, ನಮಗೆ ಅನ್ಯಾಯವಾಗುವುದಿಲ್ಲ ಎನ್ನತಕ್ಕಂಥ ಒಂದು ಭಾವನೆ ನೂರಕ್ಕೆ ತೊಂಬತ್ತರಷ್ಟು ಮುಸಲ್ಮಾನ್ ಬಾಂಧವರಲ್ಲಿ ಇತ್ತು. ಅವೆಲ್ಲವೂ ಈಗ ನಾಶವಾಯಿತು. ಮಾನ್ಯ ಉಪಾಧ್ಯಕ್ಷಿಣಿಯವರೆ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಮಾತನ್ನು ಹೇಳುವುದಕ್ಕೆ

ಬಯಸುತ್ತೇನೆ. ಯಾವಾಗ ಬಾಬರಿ ಮಸೀದಿಯನ್ನು ಕೆಡವಲಾಯಿತೋ ಅದಾದನಂತರ ಏನು ಅನಾಹುತದ ಮಹಾಪೂರವೇ ಬಂತೋ ಆಗ ಅನೇಕ ಜನ ಮುಸಲ್ಮಾನ ಸ್ನೇಹಿತರು ನನಗೆ ಫೋನ್ ಮಾಡಿ ಹೇಳಿದರು. "We are not practising Muslims. We thought this is our home. We thought we belong to this country and we thought we are part and parcel of this country. ಮುಸಲ್ಮಾನರು ಬಾಬರಿ ಮಸೀದಿಯ ಬಗ್ಗೆ ಅಷ್ಟೊಂದು ಧಾರ್ಮಿಕವಾದಂಥ ಅಥವಾ ಭಾವನಾತ್ಮಕವಾದಂಥ ರೀತಿಯಲ್ಲಿ ಪರಿಗಣಿಸಿಕೊಂಡಿರಲಿಲ್ಲ. ಬಾಬರಿ ಮಸೀದಿಯಲ್ಲಿ ನಮಾಜು ಮಾಡತಕ್ಕದ್ದು ಬಿಟ್ಟೇ ಬಹಳ ವರ್ಷಗಳಾಗಿ ಹೋಗಿತ್ತು. ಅಂಥ ಮುಸಲ್ಮಾನ ಸ್ನೇಹಿತರು ನನಗೆ ಫೋನ್ ಮಾಡಿ ಈ ದಿವಸದಿಂದ ನಮ್ಮ ಏನು ಅಚಲವಾದಂಥ ವಿಶ್ವಾಸ ಜಾತ್ಯಾತೀತತೆಯ ಮೇಲೆ ಇತ್ತೋ ಅದು ಹೊರಟುಹೋಯಿತು ಎಂದು ಹೇಳಿದರು. ನಮ್ಮ ದೇಶಕ್ಕೆ ಈ ಒಂದು ನಷ್ಟವೇನಾಯಿತು ಅದನ್ನು ತುಂಬುವವರು ಯಾರು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇಲ್ಲಿ ಯಾರದು ತಪ್ಪು, ಯಾರದು ದೊಡ್ಡ ತಪ್ಪು, ಯಾರದು ಸಣ್ಣ ತಪ್ಪು ಎಂದು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಕಣ್ಣನ್ನು ತೆರೆದು ಅದರ ಬಗ್ಗೆ ನೋಡತಕ್ಕಂಥ ಸಂದರ್ಭ ಬಂದಿದೆ. ತಪ್ಪು ನಮ್ಮದಾಗಿದ್ದರೆ ನನ್ನದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಮುಂದೆ ಆ ರೀತಿ ತಪ್ಪನ್ನು ಮಾಡುವುದಿಲ್ಲವೆಂದು ಹೇಳುತ್ತೇನೆ, ಇಡೀ ದೇಶದ ಭವಿಷ್ಯ ಇದರ ಮೇಲೆ ಅವಲಂಬಿಸಿದೆ, ನಾನು ಬಹಳ ದೂರದ ಇತಿಹಾಸದ ಬಗ್ಗೆ ಹೋಗುವುದಕ್ಕೆ ಬಯಸುವುದಿಲ್ಲ. ಬಾಬರಿ ಮಸೀದಿ ಇದ್ದಂಥ ಜಾಗದಲ್ಲಿ ದೇವಾಲಯ ಇತ್ತೋ ಇಲ್ಲವೋ ಅಥವಾ ಆ ಸ್ಥಾನ. ಅಂದರೆ ಪರ್ಟಿಕ್ಯುಲರ್ ಪ್ಲೇಸ್ ಏನಿದೆ, ವಿಶಿಷ್ಟ ಸ್ಥಾನ ಏನಿದೆ ಅಲ್ಲಿಯೇ ರಾಮನು ಜನ್ಮ ತಾಳಿದನೋ ಅದು ಕಾಲ್ಪನಿಕವಾದುದೋ ಇದನ್ನು ಸಾಬೀತು ಮಾಡತಕ್ಕ, ಯಾವುದೇ ರುಜುವಾತು ಮಾಡತಕ್ಕದ್ದು ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ. ಆರ್ಕ್ಯಲಾಜಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳಷ್ಟು ಸ್ಟಡಿ ಮಾಡಿದವರು ಅಥವಾ ಆರ್ಕ್ಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಹೇಳಬಹುದು. ಇಲ್ಲಿ ಮೂರ್ತಿ ಸಿಕ್ಕಿದೆ ಎಂದು ಹೇಳಬಹುದು. ನೀವು ಅನೇಕ ಜನರು ಹೋಗಿ ನೋಡಿದರೂ ಅದು ಮಸೀದಿ ಇರಬಹುದು, ಚರ್ಚ್ ಇರಬಹುದು ಅಥವಾ ಗುರುದ್ವಾರ ಇರಬಹುದು, ಅಥವಾ ಬೇರೆ ಯಾವುದೇ ಮಂದಿರ ಇರಬಹುದು; ಅಲ್ಲಿ ಅಗೆದರೆ ನಿಮಗೆ ಮೂರ್ತಿಗಳು ಸಿಕ್ಕುತ್ತವೆ. ನಮ್ಮ ದೇಶದ ಇತಿಹಾಸವನ್ನು ನೋಡಿದರೆ ಒಂದು ಧರ್ಮ ಸ್ವಲ್ಪ ನಷ್ಟವಾಗಿ ಸ್ವಲ್ಪ ಕ್ಷೀಣವಾದಾಗ ಮತ್ತೊಂದು ಧರ್ಮ ಬಂದಾಗ ಆ ಧರ್ಮದವರು ತಮಗೆ ಬೇಕಾದಂಥ ಪೂಜಾ ಸ್ಥಾನವನ್ನು ಹಳೇ ಜಾಗಗಳಲ್ಲಿ ಕಟ್ಟಿಸಿದ್ದಾರೆ. ವೈಷ್ಣವರ ಕಾಲದಲ್ಲಿ ಶಿವಾಲಯಗಳು ಹೋಗಿ ವಿಷ್ಣು ದೇವಾಲಯ ಆಗಿವೆ. ಜೈನ ದೇವಾಲಯಗಳನ್ನು ತೆಗೆದು ಶಿವಾಲಯಗಳನ್ನು ಮಾಡಿದ್ದಾರೆ. ಇಂಥಾದ್ದು ನೂರಾರು ಅಲ್ಲ ಸಹಸ್ರಾರು ದೃಷ್ಟಾಂತಗಳನ್ನು ನಾವು ನೋಡಿದ್ದೇವೆ. ಈಗ ಅಲ್ಲಿ ಬಾಬರಿ ಮಸೀದಿಯನ್ನು ಕೆಡವಿದ್ದರಿಂದ ಯಾರಿಗೆ ಲಾಭವಾಯಿತು ? ಇದು ವ್ಯಾಪಾರ ದೃಷ್ಟಿಯಿಂದ ಲಾಭ ಎಂಬುದನ್ನು ನಾನು ಹೇಳುತ್ತಿಲ್ಲ. ಇದು ರಾಜಕೀಯ ಲಾಭ ಆಯಿತು ಎಂದು ನನಗನಿಸುವುದಿಲ್ಲ. ಯಾವುದೇ ಪಕ್ಷಕ್ಕೆ ಈ ಬಾಬರಿ ಮಸೀದಿಯನ್ನು ಕೆಡವಿದ್ದರಿಂದ ಚುನಾವಣೆಯಲ್ಲಿ ಹೊಸ ಮತದಾರರ ಗುಂಪು ತಮಗೆ ಸಿಕ್ಕುತ್ತದೆಂದು ತಿಳಿದುಕೊಂಡಿದ್ದರೆ- ಅದು ಖಂಡಿತ ಸುಳ್ಳು ಎಂದು ನಾನು ಹೇಳಬಯಸುತ್ತೇನೆ. ಪ್ರತಿಯೊಂದು ವಿಚಾರವನ್ನೂ ಈ ದೃಷ್ಟಿಯಿಂದ ನೋಡತಕ್ಕದ್ದು ಒಂದು ರಾಷ್ಟ್ರೀಯ ಅಪರಾಧವೆಂದು ನಾನು ಹೇಳುತ್ತೇನೆ. 1989ರಲ್ಲಿ ಏನಾಯಿತೆಂಬುದನ್ನು ನಾನು ಪುನಃ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವತ್ತಿನ ಸರ್ಕಾರ ಆ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಂಡಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಅವತ್ತಿನ ಸರ್ಕಾರಕ್ಕೂ ಇವತ್ತಿನ ಸರ್ಕಾರಕ್ಕೂ ನಾನು ತುಲನೆ ಮಾಡಲಿಕ್ಕೆ ಬಯಸುವುದಿಲ್ಲ. ನಾನು ಇವತ್ತು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಇಷ್ಟೆ. ಕಳೆದ ರಾಷ್ಟ್ರೀಯ ಏಕತಾ ಸಭೆ ಅಂದರೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್

ಮೀಟಿಂಗ್ ಆದಾಗ ಬಿ.ಜೆ.ಪಿ.ಯ ಮುಖಂಡರು ಆ ಸಭೆಯನ್ನು ಬಹಿಷ್ಕಾರ ಮಾಡಿದರು. ಆ ಸಭೆಗೆ ಅವರು ಹೋಗಲಿಲ್ಲ. ಬಿ.ಜೆ.ಪಿ.ಯ ಮುಖಂಡರು ಆ ಸಭೆಗೆ ಹೋಗದೇ ಇದ್ದಾಗಲೇ ಇದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಗೊತ್ತಾಗಬೇಕಾಗಿತ್ತು. ಈ ವಿಚಾರ ಗೊತ್ತಾಗಿದ್ದಿದ್ದರೆ ಇದನ್ನು ಯಾವ ರೀತಿ ಟ್ಯಾಕಲ್ ಮಾಡಬೇಕು, ಯಾವ ರೀತಿ ನಿಗ್ರಹ ಮಾಡಬೇಕು, ಅಥವಾ ಎದುರಿಸಬೇಕು, ಕಂಟ್ರೋಲ್ ಮಾಡಲು ಪರಿಹಾರವನ್ನು ಹುಡುಕಿಕೊಳ್ಳಬೇಕೆಂದು ಯೋಚನೆ ಮಾಡಬಹುದಿತ್ತು. ಈ ಕೆಲಸ ಕಷ್ಟವಾಗುತ್ತಿರಲಿಲ್ಲ. ಹಿರಿಯ ನ್ಯಾಯವಾದಿಗಳಾದ ಮಾನ್ಯ ವಿ.ಆರ್. ಕೃಷ್ಣ ಅಯ್ಯರ್‌ರವರು ಒಂದು ಲೇಖನವನ್ನು ಬರೆದಿದ್ದಾರೆ. ನನಗೆ ಸಂತೋಷ ಏನೆಂದರೆ, ಈ ಮಾತನ್ನು ನಾನು ನನ್ನ ಸ್ನೇಹಿತರ ಹತ್ತಿರ ಪ್ರಸ್ತಾಪ ಮಾಡಿದ್ದೆ. ಪ್ರಸ್ತಾಪ ಮಾಡಿದ್ದು ಆದ ಮೇಲೆ ಈ ವಿಚಾರ ಬಂತು. ಅವರು ಏನು ಹೇಳಿದರೆಂದರೆ, ಈ ದೇಶದಲ್ಲಿ ರಾಜ್ಯಾಂಗದ ಪ್ರಕಾರ ಇಂಟರ್‌ನಲ್ ಎಮರ್ಜೆನ್ಸಿಯನ್ನು ಡಿಕ್ಲೇರ್ ಮಾಡಬಹುದು, ಆದರೆ ಒಂದು ಯೋಗ್ಯ ಕಾರಣಕ್ಕಾಗಿ ಡಿಕ್ಲೇರ್ ಮಾಡಿದರೆ ಸರ್ಕಾರವನ್ನು ಯಾರೂ ದೂಷಣೆಗೆ ಈಡು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು. ಇದು ಎಲ್ಲರಿಗೂ ಅರ್ಥವಾಗುತ್ತದೆ. ಬೇರೆ ಉಪಾಯವಿಲ್ಲದೇ ಇರತಕ್ಕ ಸಂದರ್ಭದಲ್ಲಿ ಸೀಮಿತವಾದ ಕ್ಷೇತ್ರದಲ್ಲಿ ಅಯೋಧ್ಯೆ ಜಿಲ್ಲೆ ಅಥವಾ ಬಾಬರಿ ಮಸೀದಿ ಮತ್ತು ರಾಮ ಜನ್ಮಸ್ಥಾನ ಏನಿದೆ ಅದರ ಸುತ್ತಮುತ್ತ 10 ಕಿ.ಮೀ. ಪ್ರದೇಶವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ಎಮರ್ಜೆನ್ಸಿಯನ್ನು ಘೋಷಣೆ ಮಾಡಿದ್ದರೆ ಅಲ್ಲಿ ಏನು ಹತ್ಯಾಕಾಂಡವಾಯಿತು, ನಿರಪರಾಧಿಗಳ ಸಾವು ಏನಾಯಿತು, ಅಲ್ಲಿ ಆಸ್ತಿಪಾಸ್ತಿ ನಷ್ಟ ಏನಾಯಿತು ಅದನ್ನು ನಾವು ತಪ್ಪಿಸಬಹುದಿತ್ತು ಎಂದು ನನಗನಿಸುತ್ತದೆ. ಅಷ್ಟನ್ನು ತೆಗೆದುಕೊಂಡು ಅಲ್ಲಿ ಎಮರ್ಜೆನ್ಸಿ ಘೋಷಣೆ ಮಾಡಿದ್ದರೆ ಈ ಎಲ್ಲಾ ಹತ್ಯಾಕಾಂಡ, ಇಷ್ಟೊಂದು ನಿರಪರಾಧಿಗಳ ಪ್ರಾಣಹಾನಿ, ಆಸ್ತಿಪಾಸ್ತಿ ನಷ್ಟ ಏನಾಯಿತು ಅದನ್ನು ನಿವಾರಿಸಬಹುದಿತ್ತು ಎಂದು ನಾನು ಭಾವಿಸುತ್ತೇನೆ. ಮಾನ್ಯ ನರಸಿಂಹರಾವ್ ಅವರ ಪ್ರಾಮಾಣಿಕತೆ ಬಗ್ಗೆ ನಾನು ಇಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅನೇಕ ಜನರಿಗೆ ಮನಸ್ಸಿನಲ್ಲಿ ಆತಂಕ ಶಂಕೆ ಇದೆ. ಕೊನೆಗಾಲದವರೆಗೂ ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಳ್ಳದೆ ಇಲ್ಲ. ನಾನು ಬಿ.ಜೆ.ಪಿ.ಯವರನ್ನು ನಂಬಿದ್ದೆ ಅವರು ವಿಶ್ವಾಸದ್ರೋಹ ಮಾಡಿದ್ದಾರೆಂದು ಹೇಳತಕ್ಕಂತಹ ಒಂದು ನಿಲುಮೆಯನ್ನು ಅವರು ತೆಗೆದುಕೊಂಡರು. ಅದು ನಮ್ಮ ಮನಸ್ಸಿಗೆ ಕನ್‌ವಿನ್ಸ್ ಆಗುವುದಿಲ್ಲ. ನನಗಂತೂ ಕನ್‌ವಿನ್ಸ್ ಆಗುವುದಿಲ್ಲ. ಅದರಿಂದ ಇಂದು ಇಷ್ಟೆಲ್ಲಾ ಅನಾಹುತವಾಯಿತು. ಮೊದಲು ಅತ್ಯಂತ ನಿಷ್ಕ್ರಿಯರಾಗಿದ್ದಂತಹ ಪ್ರಧಾನ ಮಂತ್ರಿಗಳು ಈ ಘಟನೆಯ ನಂತರ ತರಾತುರಿಯಲ್ಲಿ ಅನೇಕ ನಿರ್ಣಯಗಳನ್ನು ತೆಗೆದುಕೊಂಡರು, ಮತ್ತು ನನ್ನ ಅಭಿಪ್ರಾಯದಲ್ಲಿ ಆ ಎಲ್ಲಾ ನಿರ್ಣಯಗಳೂ ತಪ್ಪು. ಅದ್ವಾನಿ, ಮುರಳಿ ಮನೋಹರ ಜೋಷಿ ಮತ್ತು ವಿಶ್ವ ಹಿಂದೂ ಪರಿಷತ್ತಿನವರು, ಜಮಾಯತ್ ಇಸ್ಲಾಂ ಧುರೀಣರನ್ನು ಬಂಧಿಸಿದರು. ಇದು ಯಾವ ಕಾರಣಕ್ಕಾಗಿ ? ಏನಾದರೂ ಒಂದು ಕಾರಣ ಬೇಕಲ್ಲ ! ಅವರ ಮೇಲೆ ಏನಾದರೂ ಆರೋಪವಿದ್ದರೆ ಆ ಆರೋಪವನ್ನು ಹೇಳಲಿಕ್ಕೆ ಕೋರ್ಟ್ ಮುಂದೆ ಹಾಜರು ಮಾಡಲಿ. ನಾವೂ ಅನುಭವಿಸಿದ್ದೇವೆ. ವಿಚಾರಣೆ ಇಲ್ಲದೆ ಜೈಲಿಗೆ ಹಾಕತಕ್ಕಂತಹ ದುಷ್ಕೃತ್ಯವನ್ನು ನಾವೂ ನೋಡಿದ್ದೇವೆ. ನಾವು ಸ್ವತಃ ಅನುಭವಿಸಿದ್ದೇವೆ. ಅದ್ವಾನಿ ಅವರು, ವಾಜಪೇಯಿ, ಮಧು ದಂಡವತೆ, ಜೆ. ಹೆಚ್. ಪಟೇಲ್, ಎಸ್. ಎನ್. ಮಿಶ್ರಾ, ಎಲ್ಲಾ ಒಂದೇ ಜೈಲಿನಲ್ಲಿ ಇದ್ದೆವು. ಯಾವುದನ್ನು ನಾವು ಅಂದು ವಿರೋಧ ಮಾಡಿದ್ದೆವೋ ಯಾವುದೇ ಒಂದು ಜನತಂತ್ರದಲ್ಲಿ ಆಪಾದನೆ ಇಲ್ಲದೆ ಜೈಲಿನಲ್ಲಿ ಇಡತಕ್ಕಂತಹ ಕ್ರಮ ಏನು ಇದೆ ಅದು ಆ ಒಂದು ಪದ್ಧತಿಗೆ ವಿರುದ್ಧವಾದಂಥಾದ್ದು ಎನ್ನುವುದು ಸಾಮಾನ್ಯ ನಾಗರೀಕನಿಗೂ ಗೊತ್ತಾಗಬೇಕು. ಈ ಮುಖಂಡರ ಮೇಲೆ ನಿಜವಾಗಿಯೂ ಆರೋಪವಿದ್ದರೆ, ರಾಷ್ಟ್ರದ್ರೋಹ ಮಾಡಿದ್ದಾರೆಂದು ನಾನು ಹೇಳಲಾರೆ. ಎಷ್ಟರ ಮಟ್ಟಿಗೆ ನಮಗೆ ರಾಷ್ಟ್ರದ ಬಗ್ಗೆ ಪ್ರೇಮ ಇದೆಯೋ ಅವರಿಗೂ ಕೂಡ ಅಷ್ಟೇ ರಾಷ್ಟ್ರಪ್ರೇಮ ಇದೆ. ಅದನ್ನು ನಾನೂ ಒಪ್ಪುತ್ತೇನೆ. ಆದರೆ ಅವರ ಕೆಲವೊಂದು ವಿಚಾರದಲ್ಲಿ ಅವರ

ದೃಷ್ಟಿ ಬೇರೆ ಇರಬಹುದು ಅವರ ಮಾರ್ಗ ಬೇರೆ ಇರಬಹುದು ಆದರೆ ಇವತ್ತಿನವರೆಗೂ ಅವರನ್ನು ಯಾವುದೇ ಕೋರ್ಟಿಗೂ ಹಾಜರು ಮಾಡದೆ ಇದ್ದಾರೆ. ಇದರಿಂದ ಏನಾಯಿತು ಎಂದರೆ ಯಾವ ಒಂದು ರಾಜಕೀಯ ಪಕ್ಷಕ್ಕೆ ಮತ್ತು ಆ ಕಾರ್ಯಕರ್ತರಿಗೆ ಮಸೀದಿಯನ್ನು ಕೆಡವಿದಂತಹ ಘಟನೆ ಏನು ಇದೆ ಇದು ಒಂದು ತರಹದ ಖೇದ ಆಗತಕ್ಕಂಥ ಸಂದರ್ಭ ಇದೆಯೋ, ಅವರು ಪಶ್ಚಾತ್ತಾಪ ವ್ಯಕ್ತ ಮಾಡತಕ್ಕಂಥ ಸಂದರ್ಭ ಇದೆಯೋ, ಸ್ವಲ್ಪ ಮಟ್ಟಿಗೆ ನಾಚಿಕೆ ಪಡತಕ್ಕಂತಹ ಸಂದರ್ಭ ಇದೆಯೋ, ಈ ಒಂದು ಬಂಧನ ಪುನಃ ಅವರಿಗೆ ನೈತಿಕ ಶಕ್ತಿಯನ್ನು ಮಾನ್ಯ ನರಸಿಂಹರಾಯರೇ ಕೊಟ್ಟರು ಎಂದು ನಾನು ಹೇಳುತ್ತೇನೆ. ಆರ್.ಎಸ್.ಎಸ್. ಇನ್ನು ಇತರ ಕೆಲವು ಆರ್ಗನೈಸೇಷನ್ ಮೇಲೆ ಬ್ಯಾನ್ ತಂದಿದ್ದಾರೆ, ಇದೂ ಕೂಡ ಅಷ್ಟೇ ಅವಿವೇಕವಾದಂತಹ ಕ್ರಮ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ಯಾವುದೇ ಒಂದು ಸಂಸ್ಥೆ ಅದರ ಬೇರು ನಮ್ಮ ನೆಲದಲ್ಲಿ ಆಳವಾಗಿ ಊರಿದಾಗ ಅದರ ಟೊಂಗೆಯನ್ನು ಎಲ್ಲಿಯವರೆಗೆ ಕಡಿದು ಹಾಕಿದರೂ ಕೂಡ ಅದು ಸಾಯುವುದಿಲ್ಲ. ಆರ್.ಎಸ್.ಎಸ್. ಮತ್ತೆ ಇತರ ಸಂಸ್ಥೆಗಳನ್ನು ಎದುರಿಸಲಿಕ್ಕೆ ರಾಜಕೀಯ ಕ್ರಮ ತೆಗೆದುಕೊಳ್ಳಬೇಕೇ ಹೊರತು ಮತ್ತು ಆ ಸಂಸ್ಥೆಗಳು ನಿರುಪಯುಕ್ತವೆಂದು ಹೇಳತಕ್ಕಂಥ ವಾತಾವರಣವನ್ನು ನಿಮ್ಮ ನೀತಿಯಿಂದ ಮಾಡಬೇಕೇ ಹೊರತು ಅವುಗಳನ್ನು ಬ್ಯಾನ್ ಮಾಡುವುದಕ್ಕಾಗುವುದಿಲ್ಲ. ನಾನು ಒಂದು ಸಂದರ್ಭದಲ್ಲಿ ಹೇಳಿದ್ದೇನೆ. ಆ ಮಾತನ್ನು ಪುನರ್ ಉಚ್ಛಾರ ಮಾಡಿದರೆ ತಾವು ದಯವಿಟ್ಟು ಕ್ಷಮಿಸಬೇಕು. ಯಾವ ರೀತಿ ಎಲ್‌ಟಿಟಿಇ ಇದೆ ಶ್ರೀಲಂಕಾಧಲ್ಲಿ ಅದೇ ರೀತಿಯಲ್ಲಿ ಒಂದು ಸ್ವರೂಪ, ಇಂದು ಬ್ಯಾನ್‌ಗೆ ಒಳಗಾದಂಥ ಸಂಸ್ಥೆ, ನಿಷೇಧಕ್ಕೆ ಒಳಗಾದಂಥ ಸಂಸ್ಥೆಗಳೆಂದು ತೆಗೆದುಕೊಂಡರೆ ತಾವು ಆಶ್ಚರ್ಯಪಡಕೂಡದು. ಯಾವುದು ತಾವು ಖುಲ್ಲಂಖುಲ್ಲವಾಗಿ ಓಪನ್ ಆಗಿ, ಬಹಿರಂಗವಾಗಿ ಮಾಡುತ್ತೀರಿ ಅವಾಗ ನಾವು ಮಾಡಿದ್ದು ತಪ್ಪು ಎಂದು ಹೇಳಿ ಹಿಡಿಯುವವರು ಬೇರೆಯವರು ಇದ್ದಾರೆ. ಮತ್ತು ಮುಖ್ಯ ವಿವರಕ್ಕೂ ಕೂಡ ಆಕ್ಷೇಪ ಬರುತ್ತದೆಂದು ಹೇಳತಕ್ಕಂಥ ಭಯ ಒಂದು ಇರುತ್ತದೆ. ಈಗ ಬಹಿರಂಗವಾಗಿ ಕೆಲಸ ಮಾಡತಕ್ಕಂಥದ್ದನ್ನು ತಪ್ಪಿಸಿದ ಮೇಲೆ ಅಂತರಂಗವಾಗಿ, ಗುಪ್ತವಾಗಿ ಅಂಡರ್ ಲೆವಲ್‌ನಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ನೀವು ತಂದುಕೊಟ್ಟರೆ ಆಗ ಈ ಇತಿಮಿತಿ ಹೊರಟು ಹೋಗುತ್ತದೆ. ಅವರು ಯಾವ ಕೆಲಸಕ್ಕೂ ಉದ್ಯುಕ್ತರಾಗುತ್ತಾರೆ. ಇದನ್ನು ನಾವು ಮಾನವ ಇತಿಹಾಸ ಪ್ರಾರಂಭದಿಂದಲೂ ನೋಡಿಕೊಂಡು ಬಂದಿದ್ದೇವೆ. ಎರಡು ಸಲ ಆರ್.ಎಸ್.ಎಸ್. ಬ್ಯಾನ್ ಮಾಡಿದ್ದಾರೆ ಮತ್ತು ಎಮರ್ಜೆನ್ಸಿಯಲ್ಲಿ ಜಮಾಯತ್ ಇಸ್ಲಾಮನ್ನು ಕೂಡ ಬ್ಯಾನ್ ಮಾಡಿದರು. ಆವಾಗ ಬ್ಯಾನ್ ಮಾಡಿದ ಮೇಲೆ, 2–3 ಸಂಸ್ಥೆಗಳು ಅಥವಾ ಅಂಥ ಸಂಸ್ಥೆಗಳು ಸತ್ತುಹೋಗಬೇಕಾಗಿತ್ತಲ್ಲ. ಏತಕ್ಕೆ ಸಾಯಲಿಲ್ಲ? ಶ್ರೀಮತಿ ಇಂದಿರಾಗಾಂಧಿಯವರು ಬ್ಯಾನ್ ಮಾಡಿದರು. ಸಾಯದೆ ಏತಕ್ಕೆ ಪುನಃ ಶ್ರೀಮಾನ್ ನರಸಿಂಹರಾವ್‌ರವರು ಬ್ಯಾನ್ ಮಾಡಿದರು. ಅದು ಸಾಯುತ್ತಿದೆಯೇ, ಅದನ್ನು ಯೋಚನೆ ಮಾಡಬೇಕು. ಇದರಿಂದ ಈ ಸಮಸ್ಯೆ ಮತ್ತಷ್ಟು ಕ್ಲಿಷ್ಟವಾಗುತ್ತದೆ. ಮತ್ತಷ್ಟು ಕಾಂಪ್ಲಿಕೇಟ್ ಆಗುತ್ತದೆ.

ಆಮೇಲೆ ಮೂರನೆಯ ಕ್ರಮವನ್ನು ತೆಗೆದುಕೊಂಡಿದ್ದು ಅಷ್ಟೇ ಖಂಡನೀಯವೆಂದು ಹೇಳಬೇಕಾಗುತ್ತದೆ. ನಾನು ಈ ಮಾತನ್ನು ಹೇಳಿದಾಗ ಇಲ್ಲಿ ಬಿ.ಜೆ.ಪಿಯವರಿಗೆ ಇವರು ಬೆಂಕಿ ಹಚ್ಚಲಿಕ್ಕೆ ಹೋಗಿದ್ದಾರೆಂದಲ್ಲ. ಬಿ.ಜೆ.ಪಿಯವರು ಮಾಡಿದುದು ತಪ್ಪಿದ್ದರೆ ಅವರು ತಪ್ಪು ಮಾಡಿದ್ದಾರೆಂದು ಹೇಳಬೇಕು. ಆ ಒಂದು ಧೈರ್ಯಬೇಕು ನಮಗೆ. ಅಥವಾ ಅವರಿಗೆ ಅನ್ಯಾಯವಾಗಿದ್ದರೆ. ಆ ಸಂಸ್ಥೆಗಳಿಗೆ ಅನ್ಯಾಯವಾಗಿದ್ದರೆ ಅದನ್ನು ಕೂಡ ಒಪ್ಪಿಕೊಳ್ಳುವಂಥ ನೈತಿಕ ಧೈರ್ಯ ನಮಗೆ ಬೇಕಾಗುತ್ತದೆ. ಈಗ ಮೂರು ಸರ್ಕಾರಗಳನ್ನು ತೆಗೆದು ಹಾಕಿದರು. ನಾನು ಯು.ಪಿ. ಸರ್ಕಾರದ ವಿಚಾರವನ್ನು ಹೇಳುವುದಿಲ್ಲ. ಯು.ಪಿ. ಸರ್ಕಾರ ಅದು ಮಾಡಿದ್ದುದು ಒಂದು ತಪ್ಪೇನೆಂದರೆ ಆ ಮುಖ್ಯಮಂತ್ರಿಯವರು ರಾಜೀನಾಮೆಯನ್ನು ಕೊಟ್ಟದ್ದು, ರಾಜೀನಾಮೆಯನ್ನು ಗೌವರ್ನರ್

ಅಂಗೀಕಾರ ಮಾಡಿದ್ದು, ಅದಾದ ಮೇಲೆ ಸರ್ಕಾರವನ್ನು ಡಿಸ್‌ಮಿಸ್ ಮಾಡುತ್ತಾರೆ. ಡಿಸ್‌ಮಿಸ್ ಮಾಡಲಿಕ್ಕೆ ಸರ್ಕಾರ ಎಲ್ಲಿದೆ ಅಲ್ಲಿ ? ಸರ್ಕಾರವಿಲ್ಲದೆ ಡಿಸ್‌ಮಿಸ್ ಮಾಡುವುದೇ ? ಅವರೇನು ಈ ದೇಶವನ್ನು ಬಿಟ್ಟು ಓಡಿಹೋಗುವುದಿಲ್ಲ. ಹೋಗಲಿ ಅದನ್ನು ಮರೆಯೋಣ ಅದು ಯಾರಿಗಾದರೂ ತೃಪ್ತಿಯಾಗುವುದಾದರೆ, ಈ ಸರ್ಕಾರವನ್ನು ನಾವು ಡಿಸ್‌ಮಿಸ್ ಮಾಡಿದ್ದೇವೆಂದು ಹೇಳತಕ್ಕಂಥದ್ದು ತೃಪ್ತಿಯಾಗುವುದಾದರೆ ಮಾಡಿಕೊಂಡು ಹೋಗಲಿ. ಆದರೆ ಬಾಕಿ ಮೂರು ಸರ್ಕಾರ ಹಿಮಾಚಲ ಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶ, ಈ ಸರ್ಕಾರಗಳನ್ನು ಡಿಸ್‌ಮಿಸ್ ಮಾಡಲಿಕ್ಕೆ ಯಾವ ಕಾರಣವಿದೆ ? ಆ ಒಂದು ಆಘಾತ ಯಾವಾಗ ಆಯಿತು ಆಗಲೇ ನಾನು ವಿರೋಧ ಮಾಡಿದ್ದೇನೆ. ನಮ್ಮ ಸರ್ಕಾರದವರು ಮಾಡಿದ್ದಾರೆ. ನಾನು ಆಗ ಜನರಲ್ ಸೆಕ್ರೆಟರಿಯಾಗಿದ್ದೆ; ಜನತಾಪಾರ್ಟಿಯಲ್ಲಿ. ಅದು ರೆಕಾರ್ಡ್‌ನಲ್ಲಿದೆ. ನಮ್ಮ ವರ್ಕಿಂಗ್ ಕಮಿಟಿಯಲ್ಲಿ ಆ ಒಂದು ವಿಚಾರ ಬಂದಾಗ ನಾನು ಹೇಳಿದೆ, ಜನರಿಂದ ಆಯ್ಕೆಯಾದಂಥ ಸರ್ಕಾರವನ್ನು ಡಿಸ್‌ಮಿಸ್ ಮಾಡಲಿಕ್ಕೆ ಅಧಿಕಾರ ನಿಮಗೆ ಯಾರಿಗೂ ಇಲ್ಲವೆಂದು, ಅದನ್ನು ನಾನು ಹೇಳಿದ್ದುದು, ಹಿಂದೆ ಜನತಾ ಪಕ್ಷದ ಸರ್ಕಾರ ಇದ್ದಾಗ. ಜನತಾದಳದ ಸರ್ಕಾರ ಇದ್ದಾಗ ಅಂಥದೆ ಒಂದು ಕ್ರಮ ತೆಗೆದುಕೊಂಡಾಗ ಆವತ್ತಿಗೂ ನಾನು ಅದನ್ನು ಖಂಡನೆ ಮಾಡಿದ್ದೇನೆ. ಮತ್ತೆ ಮಾನ್ಯ ನರಸಿಂಹರಾವ್‌ರವರು ಅಧಿಕಾರಕ್ಕೆ ಬಂದ ಮೇಲೆ ಬಹಿರಂಗವಾಗಿ ನಾನು ಹೇಳಿದ್ದು, ನಾನು ಅದಕ್ಕೆ ಟೀಕೆಗೂ ಒಳಗಾದೆ.

ನಾನು ಏನು ಹೇಳಿದೆ ಎಂದರೆ ಇವರು ಬೇರೆ ಮಾರ್ಗ ಅನುಸರಿಸುತ್ತಾರೆ, ಹಳೆಯ ಮಾರ್ಗದಲ್ಲಿ ಹೋಗುವುದಿಲ್ಲ. ಕಾಂಗ್ರೆಸ್ಸಿನಲ್ಲಿ ಸುಧಾರಣೆ ಮಾಡುತ್ತಾರೆ. ನೆಹರುರವರು ಯಾವ ಒಂದು ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದಾರೋ ಅದಕ್ಕೆ ಪುನಃ ಒಂದು ಹೊಸ ಆಯಾಮ ಇವರು ಕೊಡುತ್ತಾರೆಂದು ನಾನು ಹೇಳಿದೆ. ನಾಗಾಲ್ಯಾಂಡಿನಲ್ಲಿ ವಿಧಾನಸಭಾ ಅಧಿವೇಶನ ನಡೆಯುತ್ತದೆ. ಅದರಲ್ಲಿ ಎಲ್ಲಾ ಬಡ್ಜೆಟ್ ಪಾಸ್ ಆಗುತ್ತದೆ. ಅಪ್ರೋಪ್ರಿಯೇಷನ್ ಬಿಲ್ಲು ಪಾಸ್ ಆಗುತ್ತದೆ ಮತ್ತು ರಾಜ್ಯಸಭೆಗೆ ಚುನಾವಣೆ ಆಗಬೇಕೆಂದು ಪ್ರಸ್ತಾಪವಾಗುತ್ತದೆ. ಆ ಪಕ್ಷದ ಒಬ್ಬ ಅಭ್ಯರ್ಥಿಯ ಆಯ್ಕೆ ಆಗಬೇಕಾಗುತ್ತದೆ. ಅದಾದ ಮೇಲೆ ಮುಖ್ಯಮಂತ್ರಿ ಕ್ಯಾಬಿನೆಟ್‌ನಲ್ಲಿ ರೆಸಲ್ಯೂಷನ್ ಪಾಸ್ ಮಾಡಿ ಗೌವರ್ನರ್‌ಗೆ ಕಳುಹಿಸುತ್ತಾರೆ. ದಯವಿಟ್ಟು ವಿಧಾನಸಭೆ ವಿಸರ್ಜನೆ ಮಾಡಿ ಮತ್ತು ಹೊಸದಾಗಿ ಆದಷ್ಟು ಬೇಗ ಚುನಾವಣೆ ನಡೆಸಿ ಎಂದು ಹೇಳಿದ್ದರೆ ಇದರಲ್ಲಿ ಯಾವ ಅಪರಾಧ ಇದೆಯೆಂದು ನನಗಂತೂ ಗೊತ್ತಿಲ್ಲ. ಮುಖ್ಯಮಂತ್ರಿಗೆ ಆ ಅಧಿಕಾರ ನಮ್ಮ ಸಂವಿಧಾನ ಬದ್ಧವಾಗಿದೆ. ಮಾರ್ಗರೆಟ್ ಥ್ಯಾಚರ್ ಆಗಲಿ, ಮೇಜರ್ ಆಗಲಿ ಅವರು ಅಲ್ಲಿಯ ಕಾಮನ್ ಸಭೆಯ ಅವಧಿ ಮುಗಿಯುವುದಕ್ಕಿಂತ ಮೊದಲೆ ಹೌಸ್ ಆಫ್ ಕಾಮನ್ಸ್ ವಿಸರ್ಜನೆ ಮಾಡಿ ಪುನಃ ಚುನಾವಣೆ ನಡೆಸಬೇಕೆಂದು ಹೇಳಿದ್ದರೆ ಚಾಚು ತಪ್ಪದೆ ಅದನ್ನು ಅಲ್ಲಿಯ ಕಾಂಗ್ರೆಸ್ ಅಂಗೀಕರಿಸುತ್ತದೆ. ಅದೇ ರೀತಿ ಇಲ್ಲಿಯೂ ಕೂಡ ಆಯಿತು. 1984ನೇ ಇಸವಿಯ ಚುನಾವಣೆ. ಲೋಕಸಭೆಯಲ್ಲಿ ನಾವು ನಿರೀಕ್ಷಿಸಿದಷ್ಟು ಸೀಟು ಸಿಗದೇ ಇದ್ದಾಗ ನಾನು ಪುನಃ ಜನರ ಹತ್ತಿರ ಹೋಗಬೇಕು ಎಂದು ನಿರ್ಧಾರ ಮಾಡಿದೆ. ನಮ್ಮ ಮಂತ್ರಿಮಂಡಲದಲ್ಲಿ ನಾನು ಪ್ರಸ್ತಾಪ ಮಾಡಿದೆ. ಮಂತ್ರಿಮಂಡಲ ಅದಕ್ಕೆ ಒಪ್ಪಿತು. ನಾವು ಮಂತ್ರಿಮಂಡಲದ ರಾಜಿನಾಮೆಯನ್ನು ತೆಗೆದುಕೊಂಡು ಗವರ್ನರ್‌ಗೆ ಕೊಟ್ಟೆವು. ವಿಧಾನಸಭೆ ವಿಸರ್ಜನೆ ಮಾಡಿ ಎಂದು ಹೇಳಿದೆವು. ಆಗ ನಮ್ಮ ಸರ್ಕಾರವನ್ನು ವಿಸರ್ಜನೆ ಮಾಡಲಿಲ್ಲ. ಇದು ನಮ್ಮ ಸಂವಿಧಾನಬದ್ಧವಾದಂಥ ಒಂದು ಹಕ್ಕು. ಇದಾದ ಮೇಲೆ ನಾಗಲ್ಯಾಂಡಿನ ಸರ್ಕಾರವನ್ನು ಡಿಸ್‌ಮಿಸ್ ಮಾಡುತ್ತಾರೆ. ಯಾವ ಅಪರಾಧಕ್ಕಾಗಿ ? ಅದು ಹೋಗಲಿ, ಆದಾದ ನಂತರ ಒಬ್ಬ ರಾಜ್ಯಪಾಲರು ತಮ್ಮ ಕರ್ತವ್ಯವನ್ನು ಮಾಡಿದ್ದಕ್ಕಾಗಿ ಆ ರಾಜ್ಯಪಾಲರನ್ನು ಕೂಡ ಇವರು ಡಿಸ್‌ಮಿಸ್ ಮಾಡುತ್ತಾರೆ. ಇಂಥ ಆಘಾತ ನಮ್ಮ ಸಂವಿಧಾನದ ಮೇಲೆ ಪುನಃ ಪುನಃ ಆಗುತ್ತಾ ಬಂದಿರುವುದರಿಂದಲೇ, ಇಂದು ನಮ್ಮ ದೇಶದ ಪರಿಸ್ಥಿತಿ ಹೀಗಾಗಿದೆ.

3.35 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕು. ಅದು ಏನೆಂದರೆ, ಕಳೆದ 20–25 ವರ್ಷಗಳ ಅವಧಿಯಲ್ಲಿ ಕೋಮುವಾರು ಸೌಹಾರ್ದವನ್ನು ಸ್ಥಾಪನೆ ಮಾಡಲಿಕ್ಕೆ ನಾವು ಯಾವುದೇ ಒಂದು ನಿರ್ದಿಷ್ಟವಾದಂಥ ಕಾರ್ಯಕ್ರಮವನ್ನು ಅಥವಾ ಆಂದೋಲನವನ್ನು ಓಡಿಸಲಿಲ್ಲ. ಅದಕ್ಕೆ ಕಾರಣ ಪ್ರತಿಯೊಂದು ರಾಜಕೀಯ ಪಕ್ಷಗಳ ಸ್ವಾರ್ಥ. ಕೇವಲ ವಿವಿಧ ಧರ್ಮಗಳ ಮಧ್ಯೆದಲ್ಲಿ ಹಗೆತನವನ್ನು ಬೆಳೆಸುವುದು ಅಷ್ಟೇ ಅಲ್ಲ, ಹಿಂದೆ ಬ್ರಿಟಿಷರು ಆ ರೀತಿ ಮಾಡಿದರು. ಅದೇ ಮಾದರಿಯಲ್ಲಿ ನಾವು ಹೋಗುತ್ತಿದ್ದೇವೆ, ಅಷ್ಟೇ ಅಲ್ಲ, ಹಿಂದೂ ಧರ್ಮದಲ್ಲಿ ವಿವಿಧ ಜಾತಿಯಲ್ಲಿ ಹಗೆತನವನ್ನು, ದ್ವೇಷವನ್ನು ಅಸೂಯೆಯನ್ನು ಬೆಳೆಯುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ನಾವು ಎಲ್ಲಿಯವರೆಗೆ ಧಾರ್ಮಿಕ ಭಾವನೆಗಳ ಶೋಷಣೆಯನ್ನು ರಾಜಕೀಯ ಲಾಭಕ್ಕಾಗಿ ನಾವು ಮಾಡುತ್ತಿರುತ್ತೇವೋ, ಅಲ್ಲಿಯವರೆಗೆ ನಮ್ಮ ದೇಶದಲ್ಲಿ ಕೋಮುವಾರು ಐಕ್ಯ ಸಾಧ್ಯವಿಲ್ಲವೆಂದು ಎಲ್ಲರೂ ತಿಳಿದುಕೊಳ್ಳಬೇಕು. ಆದುದರಿಂದ ಈಗಲಾದರೂ ನಾನು ಹೇಳುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳು ಒಂದು ರೌಂಡ್ ಟೇಬಲ್ ಕಾನ್‌ಫೆರೆನ್ಸ್ ಮಾಡಲಿ, ಐನ್ಯಾಷನಲ್ ಇಂಟಿಗ್ರೇಷನ್ ಕಾನ್ಸಿಲ್ ಏನಿದೆ ಅದು ಸರಿಯಾದಂಥ ಫೋರಂ ಅಲ್ಲ. ಅದರಲ್ಲಿ ಸುಮಾರು 150 ಜನರು ಇದ್ದಾರೆ. ಅದರಲ್ಲಿ ಚರ್ಚೆಗೂ ಆಸ್ಪದವಿಲ್ಲ. ಅದರಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ, ಅವರು ಬಂದು ತಮ್ಮ ಸ್ಟೇಟ್‌ಮೆಂಟ್ ಓದುತ್ತಾರೆ. ಕೇಂದ್ರದಲ್ಲಿ 3–4 ಜನ ಸಚಿವರು ಇರುತ್ತಾರೆ. ಅವರೂ ಸಹ ತಮ್ಮ ಸ್ಟೇಟ್‌ಮೆಂಟ್‌ನ್ನು ಓದುತ್ತಾರೆ. ಆಮೇಲೆ ಒಂದು ಉದ್ಘಾಟನಾ ಭಾಷಣ, ಮುಕ್ತಾಯ ಭಾಷಣವಾಗುತ್ತದೆ, ಅಲ್ಲಿಗೆ ಮುಕ್ತಾಯವಾಗುತ್ತದೆ. ನನ್ನ ದೃಷ್ಟಿಯಲ್ಲಿ ಇವತ್ತಿನವರೆಗೂ ಈ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಕಾಂಟ್ರಿಬ್ಯೂಷನ್ ನಮ್ಮ ದೇಶದ ವಿವಿಧ ಧರ್ಮ ಮತ್ತು ವಿವಿಧ ಜಾತಿಗಳ ಐಕ್ಯತೆಗೆ ಸೊನ್ನೆ ಎಂದು ನಾನು ತಿಳಿದಿದ್ದೇನೆ. ಆದುದರಿಂದ, ಒಂದು ರೌಂಡ್ ಟೇಬಲ್ ಕಾನ್‌ಫರೆನ್ಸ್ ಅನ್ನು ನಮ್ಮ ಪ್ರಧಾನ ಮಂತ್ರಿಗಳು ಮಾಡಲಿ. ಅದರಲ್ಲಿ ಅತ್ಯಂತ ಅಧಿಕಾರಯುಕ್ತವಾದ ಭಾಷೆಯಲ್ಲಿ ವಾಣಿಯಲ್ಲಿ ಮಾತನಾಡತಕ್ಕದ್ದು ಅವಶ್ಯಕ ಇದೆ. ತಮ್ಮ ತಮ್ಮ ಧರ್ಮದ ಬಗ್ಗೆ, ತಮ್ಮ ತಮ್ಮ ಜಾತಿಯ ಬಗ್ಗೆ ಮತ್ತು ನಮ್ಮ ದೇಶದಲ್ಲಿ ಕೋಮುವಾರು ಸೌಹಾರ್ದತೆ ಸ್ಥಾಪನೆ ಮಾಡುವುದಕ್ಕೆ ಅಂಥ 25–30 ಜನರನ್ನು ಕರೆಯಲಿ. ಅವರಲ್ಲದೆ, ರಾಜಕೀಯ ಪಕ್ಷಗಳಿಗೆ ಕೆಲವು ನಿಯಮಗಳನ್ನು ಹಾಕಿಕೊಡಬೇಕಾಗುತ್ತದೆ. ಎಲ್ಲಿಯವರೆಗೆ ರಾಜಕೀಯ ಪಕ್ಷಗಳ ಪರವಾಗಿ ಕೆಲಸ ಮಾಡತಕ್ಕವರು ನಮ್ಮ ಭಾಷಣ ನಮ್ಮ ವಿಚಾರ, ನಮ್ಮ ನಡತೆ, ನಮ್ಮ ರಾಜಕೀಯ ಇದರ ಬಗ್ಗೆ ಕೆಲವು ನಿಯಮಗಳನ್ನು ಹಾಕಿಕೊಳ್ಳುವುದಿಲ್ಲವೋ ಮತ್ತು ನಿಯಮಗಳನ್ನು ಉಲ್ಲಂಘಿಸಿದವರಿಗೆ ಅತ್ಯಂತ ಕಠಿಣ ಶಿಕ್ಷೆ ಕೊಡಬೇಕೆಂದು ಮಾಡುವುದಿಲ್ಲವೋ ಅಲ್ಲಿಯವರೆಗೆ ಇದು ಸಾಧ್ಯವಾಗುವುದಿಲ್ಲ. ಕರ್ನಾಟಕದಲ್ಲಿ ಇಷ್ಟೊಂದು ದೊಡ್ಡ, ಇಷ್ಟೊಂದು ದೀರ್ಘಕಾಲ ಕೋಮುವಾರು ಹತ್ಯಾಕಾಂಡ ಆದದ್ದು ಇಲ್ಲ. ಇಡೀ ದೇಶದಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಜನರು ಸತ್ತಿದ್ದರೆ ಕರ್ನಾಟಕದಲ್ಲಿ 70–80 ಜನರು ಸತ್ತಿದ್ದಾರೆ. ಇದರಲ್ಲಿ ಮತ್ತೊಂದು ಆಶ್ಚರ್ಯ ನೋಡಿ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರಿಗೆ ಗೊತ್ತಿದೆ, ನಾನು ಅವರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಒಂದೊಮ್ಮೆ ಮಧ್ಯಪ್ರದೇಶ, ರಾಜಾಸ್ಥಾನ ಮತ್ತು ಹಿಮಾಚಲ ಪ್ರದೇಶದ ಸರ್ಕಾರಗಳು ತಮ್ಮ ಕರ್ತವ್ಯ ನಿರ್ವಹಿಸುವುದರಲ್ಲಿ ವಿಫಲರಾದರು, ಕೋಮುವಾರು ಗಲಭೆಯನ್ನು ನಿಯಂತ್ರಣಕ್ಕೆ ತರುವಲ್ಲಿ ವಿಫಲರಾದರು ಎಂಬ ಗ್ರೌಂಡ್ ಮೇಲೆ ಡಿಸ್‌ಮಿಸ್ ಮಾಡಿದರೆ ಅದಕ್ಕಿಂತ ಮೊದಲು ಕನಿಷ್ಠ ಪಕ್ಷ 4 ಕಾಂಗ್ರೆ ಸರ್ಕಾರಗಳನ್ನು ಡಿಸ್‌ಮಿಸ್ ಮಾಡಬೇಕಾಗಿತ್ತು. ಮೊಟ್ಟ ಮೊದಲನೆಯದು ಮಹಾರಾಷ್ಟ್ರ ಸರ್ಕಾರ. ಬಾಂಬೆ ನಗರ ಹುಟ್ಟಿದ ಮೇಲೆ ಇಂಥ ಭಯಾನಕವಾದ ಕೋಮುವಾರು ಗಲಭೆಯಾದುದು ಇಲ್ಲ. ಗುಜರಾತ್‌ನಲ್ಲಿ ಆಗಾಗ ಆಗುತ್ತಿರುತ್ತದೆ. ಬಾಂಬೆಯಲ್ಲಿ

ಅದೇ ಹೆಚ್ಚು. ಗುಜರಾತಿನ ಸೂರತ್ ಕಥೆ ಕೇಳಿದರೆ ಇಂಥ ಭಯಾನಕವಾದ ವಿಚಾರ ನಮ್ಮ ಮನಸ್ಸಿನಲ್ಲಿ ಬರುತ್ತದೆ. ನಮ್ಮ ದೇಶ ಇಬ್ಭಾಗವಾದಾಗ, ಪಾಕಿಸ್ಥಾನ–ಹಿಂದೂಸ್ಥಾನ ಎರಡು ಆದಾಗ ಏನು ಕೋಮುವಾರು ಗಲಭೆ ಆಯಿತು ಅದರ ನೆನಪನ್ನು ಈ ಗಲಭೆಗಳು ತಂದುಕೊಡುತ್ತವೆ. ಆದುದರಿಂದ ಬಿಜೆಪಿ ಸರ್ಕಾರಗಳನ್ನು ಡಿಸ್‌ಮಿಸ್ ಮಾಡಲಿಕ್ಕೆ ಈ ಕಾರಣ ಎಂದರೆ ಅದು ನಂಬಲು ಸಾಧ್ಯವಿಲ್ಲ. ಅದೆಲ್ಲ ಕೇವಲ ರಾಜಕೀಯವಾಗಿರಬೇಕು. ಆದರೆ ರಾಜಕೀಯ ಲಾಭ ಸಿಗುವುದಿಲ್ಲ. ಇಷ್ಟನ್ನು ನಾನು ಹೇಳಬಯಸುತ್ತೇನೆ. ನಮ್ಮ ಕರ್ನಾಟಕದಲ್ಲಿ ಹಿಂದೆ ನಾನು ಮುಖ್ಯ ಮಂತ್ರಿಯಾಗಿದ್ದಾಗ ಆಗಿದೆ. ಎಲ್ಲಾ ಮುಖ್ಯ ಮಂತ್ರಿಗಳ ಕಾಲದಲ್ಲಿ ಆಗಿತ್ತು. ಯಾವ ಮುಖ್ಯಮಂತ್ರಿ ಕಾಲದಲ್ಲಿ ಕೋಮುವಾರು ಗಲಭೆ ಆಗಲಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಎರಡು ಅಂಶಗಳನ್ನು ಗಮನಿಸಬೇಕು. ಒಂದು, ಇಷ್ಟೊಂದು ವ್ಯಾಪಕವಾಗಿ ಯಾವಾಗಲಾದರೂ ಆಗಿತ್ತೇ ಎಂದರೆ ಯಾವಾಗಲೂ ವ್ಯಾಪಕವಾಗಿ ಆಗಲಿಲ್ಲ. ಗುಲ್ಬರ್ಗಾದಲ್ಲಿ, ತುಮಕೂರಿನಲ್ಲಿ ಆಗಿರಬಹುದು. ನಾನು ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿನಲ್ಲಿ ನಡೆಯಿತು. ನಾನು ತಕ್ಷಣ ಅಲ್ಲಿಗೆ ಹೋದೆ. 24 ಗಂಟೆಗಳೊಳಗೆ ಅಲ್ಲಿ ಏನು ಒಂದು ಜ್ವಾಲೆ ಪ್ರಾರಂಭವಾಗಿತ್ತು ಆ ಜ್ವಾಲೆಯನ್ನು ನಂದಿಸಿದೆವು. ಇವತ್ತಿನ ದಿವಸ ತಕ್ಷಣ ಕ್ರಮ ಕೈಗೊಳ್ಳಲಿಲ್ಲವೆಂಬ ಈ ಒಂದು ಆಪಾದನೆಗೆ ಈ ಸರ್ಕಾರ ಗುರಿಯಾಗಿದೆ. ಅಷ್ಟೇ ಅಲ್ಲ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಂಡಿಲ್ಲ. ಯಾರಾದರೂ ಇಲ್ಲಿ ಏನಾಗುತ್ತದೆ ಈ ಕನ್ನಡ ನಾಡಿನಲ್ಲಿ, ಇಷ್ಟೊಂದು ಹಿಂಸಾಚಾರ ಇಲ್ಲಿ ನಡೆಯುವುದಿಲ್ಲವೆಂದು ನಂಬಿದ್ದರು ಎಂದರೆ ಇದು ಹಿಂದಿನ ಕನ್ನಡ ನಾಡು ಅಲ್ಲ. ಹಿಂದೆ ಇಂತಹ ರಾಜಕೀಯ ವಾತಾವರಣ ಇರಲಿಲ್ಲ. ಹಿಂದೆ ಇಂತಹ ಕೋಮುವಾರು ದ್ವೇಷ ಇರಲಿಲ್ಲ. ಹಿಂದೆ ಎಂತಹದ್ದು ಇತ್ತು ಎಂದರೆ, ನಮ್ಮಲ್ಲಿ ಎಂತೆಂಥ ಉದಾಹರಣೆ ಇದೆ ಎಂದರೆ ಪ್ರಪಂಚಕ್ಕೇ ಕೊಡತಕ್ಕ ಉದಾಹರಣೆಗಳು ಇವೆ. ಬೆಳಗಾಂ ಜಿಲ್ಲೆಯ ಹಳ್ಳಿಯೊಂದರಲ್ಲಿ ಒಂದು ಶಿವಮಂದಿರ ಇದೆ. ಅದರ ಮೇಲೆ ಮಸೀದಿ ಇದೆ. ಬಾಬಾಬುಡನ್ ಗಿರಿಯಲ್ಲಿ ಅಲ್ಲಿರತಕ್ಕ ಮಂದಿರಕ್ಕೆ ಪೂಜಾರಿ ಒಬ್ಬ ಮೌಲಾನಾ ಇದ್ದಾನೆ. ನಮ್ಮಲ್ಲಿ ಧಾರವಾಡದ ಶಿಶುನಾಳ ಶರೀಫ್ ಅಂತಹವರು ಹಾಕಿದ ಮೇಲ್ಪಂಕ್ತಿ ಆಗ ಇತ್ತು. ನಾವು ಹಾಕುವುದು ಕೆಳಪಂಕ್ತಿ ಹಾಕುತ್ತಿದ್ದೇನೆ.

ಶ್ರೀ ಶಫಿ ಅಹಮದ್:– ಬೆಂಗಳೂರು ಕರಗದಲ್ಲೂ ಹಿಂದೂ ಮುಸ್ಲಿಮ್ ಐಕ್ಯತೆ ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ:– ಇಂತಹ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಅದನ್ನು ಏಕೆ ಮರೆಯಬೇಕು ? ಕೆಲವೊಂದು ರಾಷ್ಟ್ರ ಹಬ್ಬಗಳನ್ನು ಹಿಂದೂ–ಮುಸಲ್ಮಾನರು ಒಟ್ಟಿಗೇ ಸೇರಿ ಆಚರಣೆ ಏಕೆ ಮಾಡಬಾರದು ? ಮೊಹರಂನಲ್ಲಿ ಮೊದಲು ಹಿಂದೂ–ಮುಸ್ಲಿಮರು ಒಟ್ಟಿಗೆ ಸೇರಿ ಆಚರಿಸುತ್ತಿದ್ದರು. ಹಿಂದೂಗಳು ಹುಲಿವೇಶ ಹಾಕಿ ಕುಣಿಯುತ್ತಿದ್ದರು. ನಾನು ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿ ಇದನ್ನು ನೋಡಿದ್ದೇನೆ. ಹೋಳಿ ಹಬ್ಬದಲ್ಲಿ ಮುಸಲ್ಮಾನ್ ಬಾಂಧವರು ಬಂದು ಯಾವ ವ್ಯತ್ಯಾಸ ಇಲ್ಲದೇ ಅವರು ಬಣ್ಣ ಹಚ್ಚುವುದು ಮತ್ತೊಂದು ಮಾಡುವುದು, ಓಕುಳಿ ಹಾಕುವುದು ಮಾಡುತ್ತಿದ್ದರು. ಮುಸಲ್ಮಾನರು ಎಂದರೆ ಹಿಂದೂಗಳಿಗೆ ಏಕೆ ಭಿನ್ನ ಇರಬೇಕು ? ಹಿಂದೂಗಳೂ ಮುಸಲ್ಮಾನರಿಗೆ ಏಕೆ ಭಿನ್ನ ಇರಬೇಕು ? ಅವರವರ ಧಾರ್ಮಿಕ ಭಾವನೆಗಳು ಅವರವರಿಗೆ ಸೇರಿದ್ದುದು. ದೇವಸ್ಥಾನ, ಮಸೀದಿಗೆ ಹೋದಾಗ ತಮ್ಮ ತಮ್ಮ ಧರ್ಮಕ್ಕೆ ತಕ್ಕ ಹಾಗೆ ನಡೆದುಕೊಳ್ಳುತ್ತಾರೆ. ಆದರೆ ಸಾಮಾಜಿಕವಾಗಿ, ರಾಜಕೀಯವಾಗಿ ಈ ಕ್ಷೇತ್ರದಲ್ಲಿ ಈ ಧರ್ಮ ಮತ್ತು ಜಾತಿ ಇದರಲ್ಲಿ ಬರಬಾರದು. ನಾನು ಕೊನೆಯಲ್ಲಿ ಇಷ್ಟೇ ಹೇಳುತ್ತೇನೆ. ಇದರ ಬಗ್ಗೆ ನಮ್ಮ ಕರ್ನಾಟಕ ಸರ್ಕಾರ ಕೂಡ ಪ್ರಯತ್ನ ಮಾಡಲಿ. ಕೇವಲ ಶಾಂತಿ ಸಮಿತಿ ಮಾಡುವುದರಿಂದ ಆಗುವುದಿಲ್ಲ. ಮೊದಲು ಹೋಗಿ ನೋಡಿ. ಏಕೆ ಮುಸಲ್ಮಾನ್ ಬಾಂಧವರನ್ನು ಕೆಲವು ಜನರು ಕೆಣಕುತ್ತಾರೆ ? ಅದೇ ರೀತಿ ಹಿಂದೂಗಳನ್ನು ಕೆಲವು ಜನರು ಏಕೆ ಕೆಣಕುತ್ತಾರೆ ? ಈ ಕೆಣಕುವುದರಿಂದ ಸುಪ್ತವಾಗಿರತಕ್ಕ ಧಾರ್ಮಿಕ ಭಾವನೆ ಜ್ವಾಲಾಮುಖಿಯಂತೆ ಹೊರಗಡೆ ಬರುತ್ತದೆ. ನಾವು ಸರ್ಕಾರದವರು ಕೆಲವೊಂದು ಮಾದರಿ

ಹಾಕಿಕೊಟ್ಟರೆ ಮತ್ತು ರಾಜಕೀಯ ಪಕ್ಷಗಳು ಧಾರ್ಮಿಕ ಮತ್ತು ಜಾತೀಯ ಭಾವನೆಗಳನ್ನು ಪ್ರಚೋದನೆ ಮಾಡಬಾರದು ಎನ್ನುವ ಅತ್ಯಂತ ಅಚಲವಾದ ನಿರ್ಧಾರ ತೆಗೆದುಕೊಂಡು ಇಂಪ್ಲಿಮೆಂಟ್ ಮಾಡಿದರೆ, ಕರ್ನಾಟಕ ಕನಿಷ್ಟ ಪಕ್ಷ ಇದರಲ್ಲಿ ಒಂದು ಹೊಸ ಮಾದರಿಯನ್ನು ದೇಶಕ್ಕೆ ತೋರಿಸಬಹುದು ಎಂದು ನನಗನ್ನಿಸುತ್ತದೆ. ಆ ರೀತಿ ಪ್ರಯತ್ನ ಮಾಡುವುದು ಅವರಿಗೆ ಬಿಟ್ಟಿದ್ದುದು, ಮಾಡುತ್ತಾರೆ ಎಂದು ನಾನು ಆಸೆ ಮಾಡುತ್ತೇನೆ.

†ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ ಕ್ಷೇತ್ರ):– ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ಡಿಸೆಂಬರ್ 6ನೇ ತಾರೀಖು ಅಯೋಧ್ಯೆಯಲ್ಲಿ ಏನು ಘಟನೆ ನಡೆಯಿತು ಅದು ಆದಮೇಲೆ ದೇಶಾದ್ಯಂತ ನಾವೆಲ್ಲಾ ತಲೆ ತಗ್ಗಿಸುವ ಅನೇಕ ಘಟನೆಗಳು ಏನು ಆಗಿದೆ ಅವುಗಳ ಬಗ್ಗೆ ಸನ್ಮಾನ್ಯ ವೀರೇಂದ್ರ ಪಾಟೀಲರು, ಹಿರಿಯರಾದ ರಾಮಕೃಷ್ಣ ಹೆಗ್ಡೆಯವರು, ಶ್ರೀ ದೇಶಪಾಂಡೆಯವರು ಈಗಾಗಲೇ ಮಾತನಾಡಿದ್ದಾರೆ. ನನ್ನ ದೃಷ್ಟಿಯಲ್ಲಿ ನನ್ನ ಕೆಲಸವನ್ನು ಬಹುಪಾಲು ಶ್ರೀಮಾನ್ ವೀರೇಂದ್ರ ಪಾಟೀಲರು ಹಾಗೂ ಶ್ರೀ ರಾಮಕೃಷ್ಣ ಹೆಗಡೆಯವರು ಕಡಿಮೆ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈವತ್ತು ಏನು ಅನೇಕ ರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಅದಕ್ಕೆ ಪರಿಹಾರ ಹುಡುಕುವುದರಿಂದ ಹಿಡಿದು ಕೆಲವು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವೆಲ್ಲರೂ ಒಂದಾಗಿ ತುಂಬಾ ಜವಾಬ್ದಾರಿಯಿಂದ, ತುಂಬಾ ತೂಕವಾಗಿ ಈ ರಾಜಕೀಯ ಪಕ್ಷಗಳಿಂದ ಮೇಲೆದ್ದು ಯಾವ ರೀತಿಯ ಚಿಂತನೆ ಮಾಡಬೇಕು ಎಂಬ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಪಕ್ಷಾತೀತವಾಗಿ ನಾವೆಲ್ಲರೂ ಕುಳಿತು ಯೋಚನೆ ಮಾಡದೆ ಇದ್ದರೆ ಈ ದೇಶ ಇನ್ನೂ ತುಂಬಾ ಈ ರೀತಿ ಅನಿಷ್ಟ ಪರಿಸ್ಥಿತಿಯನ್ನು ಎದುರಿಸುವಂತಹ ಕಾಲ ಬರಬಹುದು. ಅದಕ್ಕಾಗಿ ಈಗಾಗಲೇ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. 6ನೇ ತಾರೀಖು ಘಟನೆಯ ನಂತರ ಇಡೀ ದೇಶಾದ್ಯಂತ ಸಾವುನೋವುಗಳು ಏನಾಗಿವೆ ಇದಕ್ಕೆ ಯಾವುದಾದರೂ ರಾಜಕೀಯ ಪಕ್ಷಗಳ ಮುಖಂಡರುಗಳ ಬೆಂಬಲ ನೀಡಿದ್ದರೆ ಅಥವಾ ಬೆಂಬಲ ಕೊಟ್ಟಿದ್ದರೆ ಅದು ದೇಶದ್ರೋಹ ಎಸಗಿದಂತಾಗುತ್ತದೆ. ಅವರು ರಾಜಕಾರಣದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ಏನು ಘಟನೆಗಳು ನಡೆದಿವೆ ಇದಕ್ಕೆ ಕಾರಣಗಳನ್ನು ಹುಡುಕುವಂತಹ ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ಮಾಡಬೇಕಾಗಿದೆ, ಪ್ರಾರಂಭದಲ್ಲಿ ಒಂದು ಮಾತನ್ನು ಕರ್ನಾಟಕ ರಾಜ್ಯದಲ್ಲಿ ಆದಂತ ಗಲಭೆಗಳ ಬಗ್ಗೆ ಹೇಳುವುದಾದರೆ ಇವತ್ತು ಸರ್ಕಾರ, ಪೋಲೀಸು ಅಧಿಕಾರಿಗಳು ಅವರ ಶಕ್ತಿ ಮೀರಿ ಇಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಪ್ರಯತ್ನ ಪಟ್ಟಿದ್ದಾರೆ. 6ನೇ ತಾರೀಖಿನ ಘಟನೆಗಳ ನಂತರ ಪರಿಸ್ಥಿತಿಯನ್ನು ಹತೋಟಿಗೆ ತರುವ ದೃಷ್ಟಿಯಲ್ಲಿ ಅವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಅಲ್ಲಲ್ಲಿ ಕೆಲವು ಕಡೆಗಳಲ್ಲಿ ಅವರ ಶಕ್ತಿಗೆ ಮೀರಿ ಅಥವ ಕೈ ಮೀರಿ ಕೆಲವು ಘಟನೆಗಳು ಆಗಿರಬಹುದು. ಕೆಲವು ಅಧಿಕಾರಿಗಳು ತಪ್ಪು ಮಾಡಿರಬಹುದು ಅದನ್ನು ಸರಿಪಡಿಸತಕ್ಕ ಪ್ರಯತ್ನವನ್ನೂ ಸಹಾ ಸರ್ಕಾರ ಮಾಡಬೇಕಾಗಿದೆ. ಬೀದರ್‌ನಲ್ಲಿ, ಹುಬ್ಬಳ್ಳಿಯಲ್ಲಿ ಗುಲ್ಬರ್ಗದಲ್ಲಿ, ಮೈಸೂರಿನಲ್ಲಿ ಪೋಲೀಸ್ ಅಧಿಕಾರಿಗಳು ವಿಶೇಷ ಪ್ರಯತ್ನ ಮಾಡಿದ್ದರೂ ಸಹಾ ವ್ಯವಸ್ಥಿತವಾಗಿ ಗಲಭೆಗಳು ಉಂಟಾಗಲು ಅನೇಕ ಮುಖಂಡರುಗಳಿಂದ ಪ್ರಯತ್ನ ನಡೆದಿದೆ. ಅದಕ್ಕಾಗಿ ದಯಮಾಡಿ ಜಿಲ್ಲಾ ನ್ಯಾಯಾಧೀಶರಿಂದ ಒಂದು ತನಿಖೆಯನ್ನು ನಡೆಸಿ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯಾರು ಅಪರಾಧ ಮಾಡಿದ್ದಾರೆ ಅವರು ಯಾವುದೇ ಪಕ್ಷದವರಾಗಿರಲೀ, ಎಷ್ಟೇ ದೊಡ್ಡವರಾಗಿರಲೀ ಅವರ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುವ ದಿಟ್ಟ ಹೆಜ್ಜೆಯನ್ನು ಸರ್ಕಾರ ತೋರಿಸಬೇಕು. ಏನು ಗುಲ್ಬರ್ಗದಲ್ಲಿ ಮಹಿಳೆಯರ ಮೇಲೆ ಒಂದು ಅತ್ಯಾಚಾರ ನಡೆದಿದೆ. ಮಾನಭಂಗ ಮಾಡುವ ಮಟ್ಟಿಗೆ ಹೋಗಿದ್ದಾರೆ, ಆ ಘಟನೆ ಬಗ್ಗೆ ವಿಚಾರಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಆ ಘಟನೆ ಸಂದರ್ಭದಲ್ಲಿ ಒಬ್ಬ ಪೋಲೀಸ್ ಅಧಿಕಾರಿ (ಸರ್ಕಲ್ ಇನ್ಸ್‌ಪೆಕ್ಟರ್) ಉದ್ದೇಶ ಪೂರ್ವಕವಾಗಿ ವಾಪಸ್ಸು ಹಿಂದೆ ತಿರುಗಿ ಮಹಡಿ ಮೇಲೆ

ನಿಂತವರ ಮೇಲೆ ಗೋಲೀಬಾರು ಮಾಡಿದ್ದರಿಂದ ಒಬ್ಬ ವ್ಯಕ್ತಿ ಸತ್ತಿದ್ದಾನೆ. ಆದರ ಅಗತ್ಯ ಇರಲಿಲ್ಲ ಈ ರೀತಿ ಆಗಬಾರದು ಆದ್ದರಿಂದ ಇದರ ಬಗ್ಗೆ ಸರಿಯಾದಂತಹ ಒಂದು ತನಿಖೆಯನ್ನು ನಡೆಸತಕ್ಕ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡಲು ಇಚ್ಛೆಪಡುತ್ತೇನೆ. ಭಾರತೀಯ ಜನತಾ ಪಾರ್ಟಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಇತರ ನಮ್ಮ ಜೊತೆಯಲ್ಲಿ ಸಂಬಂಧ ಇರತಕ್ಕ ಸಂಸ್ಥೆಗಳನ್ನು ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸತಕ್ಕ ಒಂದು ವ್ಯವಸ್ಥಿತವಾದ ಪ್ರಯತ್ನ ಇವತ್ತು ಈ ದೇಶದಲ್ಲಿ ನಡೆಯುತ್ತಿದೆ ಎಂಬ ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ಸಂಘಸಂಸ್ಥೆಗಳು ಏನು ಹೇಳಬೇಕು, ಹೀಗೆಯೇ ಮಾಡಬೇಕು ಎಂದು ಆದೇಶ ಕೊಡಲು ಸಾಧ್ಯವಿಲ್ಲ. 45 ವರ್ಷಗಳಿಂದ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡಿದ್ದೇವೆ. ಕಾಂಗ್ರೆಸ್‌ನಲ್ಲಿ ಅವರದ್ದೇ ಆದಂಥ ವಿಚಾರವಿರುತ್ತದೆ. ಜನತಾ ದಳವೇ ಆಗಲೀ ಅಥವಾ ಕಮ್ಯುನಿಸ್ಟನವರೇ ಆಗಲೀ ಅವರದ್ದೇ ಆದಂತಹ ವಿಚಾರವಿರುತ್ತದೆ. ಭಾರತೀಯ ಜನತಾ ಪಾರ್ಟಿಯಾದ ನಾವು ನಮ್ಮ ವಿಚಾರ ಏನು ಎಂಬುದನ್ನು ಹೇಳುವಂತಹ ಪ್ರಯತ್ನ ಮಾಡಿದ್ದೇವೆ. ನೋಡೋಣ, ಈ ದೇಶದ ಜನ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ತೀರ್ಮಾನ ಮಾಡುವಂತಹ ಕಾಲ ಬರುತ್ತದೆ. ನಾವು ಒಳ್ಳೆಯ ಕೆಲಸ ಮಾಡಿದ್ದರೆ ಜನರ ಪ್ರೀತಿ ವಿಶ್ವಾಸ ಗಳಿಸಿದ್ದರೆ ಅವರ ಮನಸ್ಸನ್ನು ಗೆದ್ದಿದ್ದರೆ ರಾಜಕೀಯದಲ್ಲಿ ಉಳಿಯುತ್ತೇವೆ ಅಥವ ಇದನ್ನು ದುರುಪಯೋಗ ಮಾಡಿಕೊಂಡು ನಮ್ಮ ಸ್ವಾರ್ಥ ಜಾತಿ ವಿಷಬೀಜ ಬಿತ್ತಲು ಪ್ರಯತ್ನ ಮಾಡಿದ್ದರೆ ಅಲ್ಪಸಂಖ್ಯಾತರಿಗೆ ಒಂದು, ಹಿಂದುಗಳಿಗೆ ಒಂದು ರೀತಿಯ ರಾಜಕಾರಣ ಬೆಳೆಸಲು ಪ್ರಯತ್ನ ಮಾಡಿದರೆ ನಿಶ್ಚಿತವಾಗಿ ಜನ ನಮ್ಮ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ. ಈ ದೇಶದ ಜನರ ಪ್ರೀತಿಯನ್ನು ಅಥವಾ ವಿಶ್ವಾಸವನ್ನು ನಾವು ಗಳಿಸಿದ್ದೇವೆಯೇ ಇಲ್ಲವೇ ಎಂಬುದನ್ನು ನೋಡೋಣ. ಈ ದೇಶದ ಜನರಲ್ಲಿ ಪ್ರೌಢತೆ ಇದೆ. ಅವರು ನಮ್ಮ ಬಗ್ಗೆ ಸರಿಯಾದ ನಿರ್ಧಾರವನ್ನು ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಶ್ರೀ ವೀರೇಂದ್ರ ಪಾಟೀಲರು ಹೇಳಿದ್ದನ್ನು ನಾವು ಯೋಚನೆ ಮಾಡಬೇಕಾಗಿದೆ. ಶೇಕಡ ಎರಡೂವರೆಯಷ್ಟು ನಾವು ಬಿಜೆಪಿಯವರು ಇದ್ದಿದ್ದು ಇವತ್ತು ಶೇಕಡ ಇಪ್ಪತ್ತೆಂಟರಿಂದ ಮುವತ್ತು ಆಗಿದ್ದೇವೆ. ಇದಕ್ಕೆ ಕಾರಣವನ್ನು ಹುಡುಕಬೇಕೆಂದು, ಕಾರಣವನ್ನು ಹುಡುಕೋಣ. ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಪಕ್ಷದ ಬಗ್ಗೆ ಯಾವುದೇ ಸಂಘಟನೆ ಬಗ್ಗೆಯಾಗಲಿ ಈ ದೇಶದ ಜನರಲ್ಲಿ ತಪ್ಪು ಭಾವನೆಯನ್ನು ಉದ್ದೇಶಪೂರ್ವಕವಾಗಿ ಉಂಟು ಮಾಡುವಂತಹ ಕೆಲಸವನ್ನು ನಾವು ಯಾರೂ ಮಾಡಬಾರದು.ಇಷ್ಟು ಮಾತ್ರ ಈ ಸಂದರ್ಭದಲ್ಲಿ ನಾನು ವಿನಮ್ರತೆಯಿಂದ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ದೇಶಪಾಂಡೆಯವರು ಮಾತನಾಡುತ್ತಾ ಹೇಳಿದರು. ಈ ದೇಶದಲ್ಲಿ ಬಡತನ ಇದೆ, ಅನಕ್ಷರತೆ ಇದೆ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಆರ್ಥಿಕಸ್ಥಿತಿ ಹದಗೆಡುತ್ತಿದೆ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಬದಲು ಅದು ಎಲ್ಲಿಯೋ ಹೋಗಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುತ್ತೇವೆಂದು ಹೇಳಿ ಬಿಜೆಪಿಯವರು ಮತ್ತು ಆರ್‌ಎಸ್‌ಎಸ್ ನವರು ಅದನ್ನು ದೊಡ್ಡದು ಮಾಡಿ ದೊಡ್ಡ ಗೊಂದಲ ವಾತಾವರಣ ಉಂಟು ಮಾಡುವಂತಹ ಅಗತ್ಯವಿತ್ತೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಮಾನ್ಯ ದೇಶಪಾಂಡೆಯವರಲ್ಲಿ ಮತ್ತು ಮುಂದೆ ಮಾತನಾಡುವವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ನಿಜ, ಸ್ವಾತಂತ್ರ್ಯ ಬಂದು 45 ವರ್ಷಗಳ ನಂತರವೂ ಮಹಾತ್ಮಗಾಂಧೀಜಿಯವರ ರಾಮರಾಜ್ಯದ ಕನಸನ್ನು ನನಸು ಮಾಡುವುದಕ್ಕೆ ನಮ್ಮಿಂದ ಆಗಲಿಲ್ಲ. ಬಡತನವನ್ನು ಹೋಗಲಾಡಿಸಿ, ಜನರನ್ನು ನಿರಕ್ಷರತೆಯಿಂದ ಮೇಲೆಬ್ಬಿಸಿ ಅವರು ಬದುಕುವ ದಾರಿಯನ್ನು ತೋರಿಸಿ ಗೌರವದಿಂದ ನೆಮ್ಮದಿಯಿಂದ ಸ್ವಾಭಿಮಾನದಿಂದ ಬದುಕಿ ಬಾಳುವಂತೆ ವ್ಯವಸ್ಥೆ ಮಾಡುವುದರಲ್ಲಿ ನಾವೆಲ್ಲ ವಿಫಲರಾಗಿದ್ದೇವೆ. ಈ ವಿಫಲತೆಯನ್ನು ಭಾರತೀಯ ಜನತಾ ಪಕ್ಷದ ಮೇಲೆ ಏರುತ್ತೀರಾ ? ರಾಷ್ಟ್ರೀಯ ಸ್ವಯಂಸೇವಾಸಂಘದ ಮೇಲೆ ಏರುತ್ತೀರಾ ?

ಬಹುಕಾಲ ಅಧಿಕಾರದಲ್ಲಿದ್ದವರು ನೀವು. ನಾವು ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಎರಡು ಹೆಜ್ಜೆ ಇಟ್ಟ ತಕ್ಷಣ ದೊಡ್ಡ ದೊಡ್ಡ ರಾಜ್ಯಗಳಲ್ಲಿ ಅವರು ಅಧಿಕಾರಕ್ಕೆ ಪೂರ್ಣ ಐದು ವರ್ಷಗಳ ಕಾಲ ಇದ್ದರೆ ಎಲ್ಲಿ ಬೇರೂರಿ ಕುಳಿತುಕೊಳ್ಳುತ್ತಾರೋ ಎಂದು ಸಂವಿಧಾನ ಬಾಹಿರವಾಗಿ ನಾಲ್ಕು ರಾಜ್ಯಗಳ ಸರ್ಕಾರವನ್ನು ವಜಾ ಮಾಡಿದ್ದಾರೆ. 40 ವರ್ಷಗಳ ಇತಿಹಾಸದ ಪುಟಗಳಲ್ಲಿ ಇದನ್ನು ಯಾರಾದರೂ ಒಪ್ಪುತ್ತಾರೆಯೇ ? ಈ ದೇಶದಲ್ಲಿ ಬಿಜೆಪಿ ಮತ್ತು ಜನಸಂಘ, ಆರ್‌ಎಸ್‌ಎಸ್‌ನವರು ಹೇಳುತ್ತಿರುವ ವಿಚಾರಗಳನ್ನು ಒಪ್ಪಿಕೊಂಡ ಜನರಿಂದ ಮನ್ನಣೆ ಸಿಗುತ್ತಿದೆ. ಅದರಿಂದ ಜನರನ್ನು ಮೂರ್ಖರೆಂದು ಕರೆಯುತ್ತೀರಾ ? ಅದಕ್ಕೆ ಜಾತೀಯತೆಯ ವಿಷಬೀಜವನ್ನು ಬಿತ್ತಿ ಓಟನ್ನು ತೆಗೆದುಕೊಂಡರು ಎಂದು ಹೇಳುತ್ತೀರಾ ? ನಾನು ನಿಮ್ಮನ್ನು ಕೇಳುತ್ತೇನೆ, ಜನರು ಇವತ್ತು ಬಿಜೆಪಿ ಕಡೆ ಬರುತ್ತಿದ್ದಾರೆ. ನಮ್ಮ ವಿಚಾರಕ್ಕೆ ಈ ದೇಶದ ಜನ ಮನ್ನಣೆಯನ್ನು ಕೊಡುತ್ತಿದ್ದರೆ, ಯಾರು ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದು ಜನರ ಪ್ರೀತಿ ವಿಶ್ವಾಸವನ್ನು ಗಳಿಸುವುದರಲ್ಲಿ ಸಂಪೂರ್ಣ ವಿಫಲರಾಗಿ ಎಲ್ಲಾ ರಂಗದಲ್ಲಿಯೂ ಒಂದು ರೀತಿ ಗೊಂದಲ ವಾತಾವರಣ ಉಂಟು ಮಾಡಿ ಆರ್ಥಿಕಕ್ಷೇತ್ರದಲ್ಲಿ ಹೊರದೇಶಕ್ಕೆ ಹೋಗಿ ಭಿಕ್ಷೆ ಬೇಡುತ್ತಿದ್ದೇವೆ ಅಂತಹ ದುಸ್ಥಿತಿಗೆ ಬರುತ್ತಿದ್ದೇವೆ. ಅಂತಹ ದೇಶದಲ್ಲಿ ನಾನು ನಿಮ್ಮ ಸ್ನೇಹಿತನಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ, ನಮ್ಮ ಜನರ ದುಡಿಯುವ ಕೈಗಳಿಗೆ ಕೆಲಸ ಕೊಡಲಿಲ್ಲ, ಜನರು ತಿನ್ನುವ ಅನ್ನಕ್ಕೆ ವ್ಯವಸ್ಥೆ ಮಾಡಲಿಲ್ಲ. ಈ ದೇಶಕ್ಕೆ ಅನ್ನ ಕೊಡುವಂತಹ ರೈತ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡಲಿಲ್ಲ. ಭಗವಂತ ಎಲ್ಲವನ್ನು ಕೊಟ್ಟ ಅದನ್ನು ಉಪಯೋಗ ಮಾಡಿಕೊಂಡು ಆರ್ಥಿಕ ಕ್ಷೇತ್ರದಲ್ಲಿ ಮುಂದೆ ಹೋಗುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಹಳ್ಳಿಗಳಲ್ಲಿ ವಾಸ ಮಾಡುವ ಬಡವ ಏನೋ ರಾಮ ಎಂದು ಹೇಳಿ, ಶಿವ ಎಂದು ಹೇಳಿ ನಮ್ಮೆಲ್ಲ ಅಪರಾಧಗಳನ್ನು ಕ್ಷಮಿಸು ದೇವರೇ ಎಂದು ತಲೆತಗ್ಗಿಸಿಕೊಂಡು ನಾವು ಏನೋ ಪಾಪ ಮಾಡಿದ್ದೇವೆ ಅದಕ್ಕೋಸ್ಕರ ಹೀಗೆ ಜೀವನ ಮಾಡುತ್ತಿದ್ದೇವೆಂದು ಗೌರವದಿಂದ ನೆಮ್ಮದಿಯಿಂದ ಸ್ವಾಭಿಮಾನದಿಂದ ಅವರು ದೇವರು ದಿಂಡಿರು ಎಂದು ಹೇಳಿಕೊಂಡು ಜೀವನ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಡಿಸೆಂಬರ್ 6ನೇ ತಾರೀಖು ನಡೆದಂತಹ ಘಟನೆ ಅದರ ಬಗ್ಗೆ ನಾನು ಒಂದು ಮಾತನ್ನು ಜವಾಬ್ದಾರಿಯಿಂದ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದು ಕೇವಲ ಯಾವುದೋ ಒಂದು ಶ್ರೀರಾಮಚಂದ್ರನ ದೇವಾಲಯವನ್ನು ಕಟ್ಟುವುದರಿಂದ ಸ್ಫೋಟಗೊಂಡಂತಹ ವಿಚಾರವೆಂದು ತಾವು ತಿಳಿಯಬೇಡಿ. ಅವೊತ್ತಿನ ಘಟನೆಯನ್ನು ನೀವು ತಪ್ಪಿಸಬಹುದಾಗಿತ್ತು. ನಿಜ, ನೀವು ಕೇಳುವುದಕ್ಕೆ ಅಧಿಕಾರವಿಲ್ಲ. ನಾವು ಹೇಳುತ್ತೇವೆ ಅಲ್ಲಿ ಮಂದಿರ ಆಗಬೇಕು. ಏಕೆಂದರೆ ಶ್ರೀರಾಮಚಂದ್ರ ಈ ದೇಶದ ಒಬ್ಬ ಆದರ್ಶ ರಾಜ. ಆ ಪುರುಷನಿಗೆ ಮಂದಿರ ಅಲ್ಲಿ ಆಗಲೇಬೇಕು. ಅಲ್ಲಿ 40 ವರ್ಷಗಳಿಂದ ಪೂಜೆ ನಡೆಯುತ್ತಿತ್ತು ಎಂದು ನಾವು ಹೇಳುತ್ತೇವೆ. ಅದು ಬೇಡವೆಂದರೆ ಅದಕ್ಕೆ ನಿಮ್ಮದೇ ಆದ ಅಭಿಪ್ರಾಯ ಹೇಳಿ. ಅದಕ್ಕೆ ನನ್ನ ವಿರೋಧವಿಲ್ಲ. ಇಲ್ಲ ಯಡಿಯೂರಪ್ಪನವರೇ ಅಲ್ಲಿ ಮಸೀದಿಯಾಗಬೇಕೆಂದು ನೀವು ಹೇಳಿ. ಅಲ್ಲಿ ಭವ್ಯ ಮಸೀದಿಯನ್ನು ಕಟ್ಟುತ್ತೇವೆಂದು ಹೇಳಿ, ನಾನು ಅದಕ್ಕೆ ವಿರೋಧ ಮಾಡುವುದಿಲ್ಲ. 6ನೇ ತಾರೀಖಿನ ಘಟನೆಯನ್ನು ತಾವು ತಪ್ಪಿಸಬಹುದಾಗಿತ್ತು. 2.77 ಎಕರೆ ಜಮೀನಿನಲ್ಲಿ ಕಾರಸೇವೆಯ ಮುಖಾಂತರ ವಿ.ಹೆಚ್.ಪಿ. ಮತ್ತು ಸಾಧು ಸಂತರು ಅಲ್ಲಿ ನಾವು ಭವ್ಯ ಮಂದಿರ ಕಟ್ಟುತ್ತೇವೆಂದು ಹೇಳಿದ್ದರೆ ಅದು ಪೂರ್ಣಗೊಳ್ಳುವುದಕ್ಕೆ 10ವರ್ಷ ಆಗುತ್ತಿತ್ತು. ಅದು ಕೋರ್ಟಿನಲ್ಲಿ ತೀರ್ಮಾನವಾಗುತ್ತಿತ್ತು. ಅಕ್ರಾಸ್ ದಿ ಟೇಬಲ್ ಹಿರಿಯರು ಕುಳಿತುಕೊಂಡು ತೀರ್ಮಾನ ಮಾಡಬೇಕಾಗಿತ್ತು. ಆ ರೀತಿ ಪ್ರಾಮಾಣಿಕ ಪ್ರಯತ್ನ ಮಾಡದ ಪರಿಣಾಮ ಇವತ್ತು ಈ ರೀತಿಯ ಘಟನೆಯಾಗುವುದಕ್ಕೆ ಸಾಧ್ಯವಾಯಿತು. 2.77 ಎಕರೆ ಜಮೀನಿನ ಬಗ್ಗೆ 4 ನೇ ತಾರೀಖು ಕೋರ್ಟಿನಲ್ಲಿ ತೀರ್ಪು ಕೊಡಬೇಕಾಗಿತ್ತು. 11ನೇ ತಾರೀಖಿಗೆ ಮುಂದೆ ಹಾಕುವಂತಹ ಪ್ರಯತ್ನ ಮಾಡುವ ಅಗತ್ಯವಿರಲಿಲ್ಲ. ಇದು ಆಗದ ಹಾಗೆ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಮಾನ್ಯ

ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಂತಹ ಕಾಲದಿಂದ ಇವತ್ತಿನವರೆಗೆ ಮಾನ್ಯ ನರಸಿಂಹರಾವ್‌ರವರು ಅಧಿಕಾರ ವಹಿಸಿಕೊಂಡರೂ ಸಹ ಇದು ಹಾಗೆಯೇ ಮುಂದುವರಿಯಿತು.

ಇದನ್ನು ಕೇವಲ ಹಿಂದುಗಳ ಪರವಾಗಿ ನಾವು ಒಬ್ಬರೇ ಈ ಮಾತನ್ನು ಹೇಳುತ್ತಿಲ್ಲ. ನಮ್ಮನ್ನು ಈ ರೀತಿ ಹೇಳಿ ಎಂದು ಹೇಳಿಸಿಕೊಳ್ಳಬೇಡಿ. ಅಲ್ಲಿ ಪ್ರಶ್ನೆ ಬಂದಿರುವಂಥಾದ್ದು, ಅನೇಕ ಸಾಧುಸಂತರು ಸಾವಿರಾರು ಜನ ಏನಿದ್ದಾರೆ, ಅವರೆಲ್ಲ ಬಿ.ಜೆ.ಪಿ.ಯವರೇನು ? ಅವರೆಲ್ಲ ಆರ್.ಎಸ್.ಎಸ್. ನವರೇನು ? ಇವರೆಲ್ಲ ಸೇರಿ ಪ್ರಭು ಶ್ರೀ ರಾಮಚಂದ್ರನ ಜನ್ಮಸ್ಥಾನದಲ್ಲಿ, ಅಯೋಧ್ಯೆಯಲ್ಲಿ ಡಿಸ್‌ಪ್ಯುಟೆಡ್ ಸ್ಟ್ರಕ್ಚರ್ ಏನಿದೆ, ಇಲ್ಲಿ ಪೂಜೆ ಮಾಡುವಂಥ ಸ್ಥಿತಿಗೆ ನಮ್ಮನ್ನು ತರಬೇಡಿ, ಇಲ್ಲಿ ಭವ್ಯ ಮಂದಿರವಾಗಬೇಕು ಎಂದು ಅವರು ಹೇಳಿದಾಗ ಯಾರಾದರೂ ಪ್ರಧಾನಿಯವರು ಮುಸ್ಲಿಂ ಬಂಧುಗಳ ಜೊತೆ ಕುಳಿತು ಚರ್ಚೆ ಮಾಡಬೇಕಿತ್ತು. ನಾನು ಒಂದು ಮಾತನ್ನು ಹೇಳುತ್ತೇನೆ ಭಾರತೀಯ ಜನತಾ ಪಾರ್ಟಿ ದೇಶದಲ್ಲಿ ಬೆಳೆಯುತ್ತಾ ಇತ್ತು. ಅಲ್ಪಸಂಖ್ಯಾತರಿಗೆ, ನಮ್ಮ ಬಂಧುಗಳಿಗೆ ರಕ್ಷಣೆ ಕೊಡುವಂಥ ಯೋಗ್ಯತೆ ನಮಗೆ ಇಲ್ಲದೇ ಇದ್ದರೆ, ಜಾತೀಯ ವಿಷಬೀಜವನ್ನು ಬಿತ್ತಿ ಅದರ ಆಧಾರದ ಮೇಲೆ ರಾಜಕಾರಣ ಮಾಡಬೇಕು ಎನ್ನುವ ಭಾವನೆಯಿಂದ ಯಾರಾದರೂ ವ್ಯಕ್ತಿಗಳು ನಮ್ಮ ಪಕ್ಷದಲ್ಲಿದ್ದರೆ ಬಹುಶಃ ಇದಕ್ಕಿಂತ ಹೇಯ ಕೃತ್ಯ ಬೇರೆ ಇಲ್ಲವೆಂದು ಹೇಳಿ ನಾನು ಖಂಡನೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಏಕೆಂದರೆ ಈ ದೇಶದಲ್ಲಿ ಹಿಂದೂ, ಕ್ರಿಶ್ಚಿಯನ್, ಮುಸ್ಲಿಮ್ ಜನರು ಅಣ್ಣತಮ್ಮಂದಿರಂತೆ ಬಾಳಬೇಕು. ಇವರನ್ನು ಬಿಟ್ಟು ನಾವು ರಾಜಕಾರಣ ಮಾಡುವುದಕ್ಕೆ ಆಗುತ್ತದೆಯೇ ? ಇದು ಸಾಧ್ಯವೇ ಇಲ್ಲದಿರುವಂಥ ಮಾತು. ಆದರೆ ಪ್ರಶ್ನೆ ಇರುವಂಥಾದ್ದು, ಕೇವಲ ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವುದಕ್ಕೋಸ್ಕರ ಸತ್ಯವನ್ನು ಹೇಳದೇ ಅಸತ್ಯವನ್ನು ಹೇಳಿಕೊಂಡು ಗೊಂದಲದ ವಾತಾವರಣವನ್ನು ಸೃಷ್ಟಿ ಮಾಡುತ್ತಾ ಇರುವಂಥ ಯಾರಾದರೂ ನಾವು ಇದ್ದರೆ ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿತ್ತು. ತಮಗೆ ಗೊತ್ತಿದೆ, ಪ್ರಧಾನ ಮಂತ್ರಿಯವರು ಶ್ರೀ ನರಸಿಂಹರಾಯರು ಮೂರು ತಿಂಗಳು ಸಮಯ ಕೇಳಿದರು. ವಿಶ್ವಹಿಂದೂ ಪರಿಷತ್‌ನವರು ನಾಲ್ಕು ತಿಂಗಳು ಅವಕಾಶ ಕೊಟ್ಟರು. ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿತ್ತು. ಬಿ.ಜೆ.ಪಿ. ಯವರನ್ನು ಒಪ್ಪಿಸಬೇಡಿ, ಆರ್.ಎಸ್.ಎಸ್. ನವರನ್ನು ಒಪ್ಪಿಸುವುದು ಬೇಡ. ಇದೆಲ್ಲ ಮೀರಿ ನಿಂತಂಥ ಈ ದೇಶಕ್ಕಾಗಿ ಜೀವಸಮರ್ಪಣೆ ಮಾಡಿ ಬದುಕುತ್ತಿರುವಂತ ಸಾಧು ಸನ್ಯಾಸಿಗಳನ್ನು ಕನ್ವಿನ್ಸ್ ಮಾಡಬಹುದಾಗಿತ್ತಲ್ಲ ? ನಾನು ನಾಲ್ಕು ತಿಂಗಳಲ್ಲಿ ಇಷ್ಟು ಹೆಜ್ಜೆ ಮುಂದೆ ಹೋಗಿದ್ದೇನೆ, ಇನ್ನು ಇಷ್ಟು ಸಮಯ ಬೇಕು ಎಂದು ಹೇಳಬಹುದಿತ್ತಲ್ಲ ? ಬೇಡ, ಕರಸೇವೆಗೆ ಹೋದರು, ಲಕ್ಷಾಂತರ ಜನ ಹೋದರು. ಅವರು ಕರಸೇವೆಗೆ ಹೋಗದಂತೆ ಬಿಗಿ ಬಂದೋಬಸ್ತು ಮಾಡಬಹುದಾಗಿತ್ತು. ಕಲ್ಯಾಣ ಸಿಂಗ್ ಅವರು ಬಹಳ ಸ್ಪಷ್ಟವಾಗಿ ಹೇಳಿದರು. ನ್ಯಾಶನಲ್ ಇಂಟಿಗ್ರೇಶನ್ ಕೌನ್ಸಿಲ್ ಮೀಟಿಂಗ್‌ಗೆ ಅವರು ಹೋಗಲಿಲ್ಲ. ಏಕೆ ಹೋಗಲಿಲ್ಲ ? ಆ ಮೀಟಿಂಗ್‌ಗೆ ಹೋದರೆ ನಮ್ಮ ಜವಾಬ್ದಾರಿಯಿಂದ ಏನೋ ನಾಳೆ ಹಿಂದೆ ಸರಿಯುವ ಪ್ರಸಂಗ ಬರಬಹುದು ಅಂತ ಹೆದರಿ ಹೋಗಲಿಲ್ಲ ಅಂತ ತಾವು ಭಾವಿಸಬೇಡಿ. ಆ ಮೀಟಿಂಗ್‌ನನ್ನು ನೀವು ಕರೆದದ್ದು ಅನೇಕ ವರ್ಷಗಳ ನಂತರ. ಅನೇಕ ತಿಂಗಳಿಂದ ಅಲ್ಲಿ ಆರ್.ಎಸ್.ಎಸ್. ನವರನ್ನು ಬಿ.ಜೆ.ಪಿಯವರನ್ನು ವಿಶ್ವಹಿಂದೂ ಪರಿಷತ್ ನವರನ್ನು ಅಪರಾಧಿ ಸ್ಥಾನಕ್ಕೆ ನಿಲ್ಲಿಸುವುದಕ್ಕೋಸ್ಕರ ಈ ವೇದಿಕೆಯನ್ನು ಉಪಯೋಗ ಮಾಡಿಕೊಳ್ಳುವ ಸಂದರ್ಭ ಬಂದಾಗ ನಾವು ಆ ಸಭೆಗೆ ಹೋಗುವುದರಿಂದ ಯಾವುದೇ ಪರಿಹಾರ ಸಿಗುವುದಿಲ್ಲ ಎನ್ನುವುದಕ್ಕೋಸ್ಕರ ಆ ಸಭೆಗೆ ಹೋಗಲಿಲ್ಲ. ಶ್ರೀ ಕಲ್ಯಾಣ ಸಿಂಗ್ ಅವರು ಬಹಳ ಸ್ಪಷ್ಟವಾಗಿ ಹೇಳಿದರು. ಏನು ? ಅವತ್ತು ಆ ಘಟನೆ ನಡೆಯುವ ಸಂದರ್ಭದಲ್ಲಿ ಕರಸೇವಕರು ಬಂದರೆ ಯಾವುದೇ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಯಾಗಿರುವವರೆಗೆ ಗುಂಡು ಹಾರಿಸುವ ಪ್ರಯತ್ನ ಮಾಡುವುದಿಲ್ಲ. ಶ್ರೀ ಮುಲಾಯಂ ಸಿಂಗ್ ಕಾಲದಲ್ಲಿ ಆದಂತ ತಪ್ಪುಗಳನ್ನು ನಾನು ಮಾಡುವುದಿಲ್ಲ ಎಂದು. ಇದರ ಮೇಲೆ ಏನಾದರೂ

ಪ್ರೆಸಿಡೆಂಟ್ ರೂಲ್ ತರಬಹುದಾಗಿತ್ತು. ಅಲ್ಲಿಯ ಸರ್ಕಾರವನ್ನು ವಜಾ ಮಾಡಿ ನೀವು ಜವಾಬ್ದಾರಿಯನ್ನು ತೆಗೆದುಕೊಳ್ಳಬಹುದಾಗಿತ್ತು. ನಿಜಕ್ಕೂ ಸಹ ಆ ಒಂದು ಡಿಸ್‌ಪ್ಯೂಟೆಡ್ ಸ್ಟ್ರಕ್ಚರನ್ನು ಉಳಿಸಬೇಕು, ಅದನ್ನು ಸರಿಯಾದ ಮಾರ್ಗದಲ್ಲಿ ಬಗೆಹರಿಸಬೇಕು ಎಂದಿದ್ದರೆ, ಇವತ್ತು ನಾಲ್ಕು ರಾಜ್ಯಗಳನ್ನು ಕಳೆದುಕೊಂಡವರು ಅವತ್ತು ಒಂದು ರಾಜ್ಯವನ್ನು ಕಳೆದುಕೊಳ್ಳುವುದಕ್ಕೆ ನಾವೇನೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಅದೂ ಈ ದೇಶವನ್ನು ನಡೆಸುವಂಥ ಪ್ರಧಾನಿ, ನಲವತ್ತೈದು ವರ್ಷಗಳಲ್ಲಿ ಬಹುವರ್ಷ ಅಧಿಕಾರದಲ್ಲಿದ್ದಂಥ ಆ ಜನ ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಯಾರೂ ಅದನ್ನು ಮಾಡಲಿಲ್ಲ. ನಾನು ಕೇಳುತ್ತೇನೆ, ಈ ದೇಶದಲ್ಲಿ ಯಾವುದೇ ಒಬ್ಬ ಮುಖ್ಯಮಂತ್ರಿಯ ಉದಾಹರಣೆ ಇದೆಯೇನು ? 6ನೇ ತಾರೀಖು ಸಾಯಂಕಾಲ ಐದೂವರೆ ಗಂಟೆವರೆಗೆ ನಾನು ಮುಖ್ಯಮಂತ್ರಿಯಾಗಿದ್ದಾಗ ಏನು ಆದೇಶಗಳನ್ನು ಕೊಟ್ಟಿದ್ದೇನೆ, ಅದರ ಪೂರ್ಣ ಜವಾಬ್ದಾರಿ ನನ್ನದು. ಯಾವುದೋ ಒಬ್ಬ ಅಧಿಕಾರಿಯನ್ನು ಬಲಿಪಶು ಮಾಡಿ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡ. ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ, ಎಲ್ಲಾ ಶಿಕ್ಷೆಗೆ ನಾನು ಸಿದ್ಧನಾಗಿದ್ದೇನೆ ಎಂದು ಈ ಮಾತನ್ನು ಅವರು ಯಾವಾಗ ಹೇಳಿದರು ? ಆರನೆ ತಾರೀಖು ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಮೇಲೂ ಸಹ ಈ ಮಾತನ್ನು ಹೇಳಿದರು. ನಾನು ಈ ದೇಶದ ಮಾನ್ಯ ಪ್ರಧಾನಮಂತ್ರಿಗಳನ್ನು ಕೇಳುತ್ತೇನೆ, ಕಾಂಗ್ರೆಸ್ ಪಕ್ಷದ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ ? ಲಕ್ಷಾಂತರ ಜನ ಬಂದರು, ಈ ಘಟನೆ ನಡೆಯಿತು. ಈ ದೇಶದಲ್ಲಿ ಹಿಂದೂಗಳು ಸಹ, ಒಂದು ರೀತಿಯಲ್ಲಿ ಅಲ್ಪಸಂಖ್ಯಾತರು ಆಗುತ್ತಿದ್ದೇವೆ ಎನ್ನುವಂಥ ಭಾವನೆ ಬರುತ್ತಿದೆ, ನಾವು ನಂಬಿದಂಥ ವಿಚಾರಗಳಿಗೆ ರಕ್ಷಣೆ ಸಿಗಲಿಲ್ಲ, ನ್ಯಾಯ ಸಿಗಲಿಲ್ಲ ಎನ್ನತಕ್ಕಂಥ ಭಾವನೆ ಬರುತ್ತಿರಬಹುದು. ಅಲ್ಲಿರತಕ್ಕಂಥ ಯುವಕರು ಅಲ್ಲಿರತಕ್ಕಂಥ ಮುಖಂಡರ ಆದೇಶಕ್ಕೆ ಮಣಿಯದೇ ಆಕ್ರೋಶವನ್ನು ವ್ಯಕ್ತಪಡಿಸಿ ಆ ಕೆಲಸವನ್ನು ಮಾಡಿರಬಹುದು. ಆದರೆ ನಾನು ಕೇಳುತ್ತೇನೆ, 6ನೇ ತಾರೀಖಿನ ನಂತರ 9ನೇ ತಾರೀಖಿನ ಬೆಳಗ್ಗಿನವರೆಗೆ ನಾನು ಅಲ್ಲಿ ಇದ್ದೆ. ಕರಸೇವೆಗೆ ಕರ್ನಾಟಕ ರಾಜ್ಯದಿಂದ ಸುಮಾರು ಹತ್ತು–ಹನ್ನೆರಡು ಸಾವಿರ ಜನ ಹೋಗಿದ್ದರು. ನಾನು ಅಲ್ಲಿ ಆರೇಳು ದಿವಸ ಇದ್ದೆ. ಈ ಘಟನೆ ನಡೆಯುವ ಒಂದೆರಡು ನಿಮಿಷ ಮುಂಚೆ ಯಾರಿಗೂ ಸಹ ಈ ಘಟನೆ ನಡೆಯಬಹುದು ಎಂದು ಭಾಸವಾಗಿರಲಿಲ್ಲ. ಯುವಕರು ಆಕ್ರೋಶದಿಂದ ಈ ಕೆಲಸ ಮಾಡಿದರಲ್ಲ, ಆ ಘಟನೆ ನಡೆಯಿತಲ್ಲ. ಅದಾದ ಮೇಲೆ 6ನೇ ತಾರೀಖಿನಿಂದ ಒಂಬತ್ತನೇ ತಾರೀಖು ಬೆಳಗ್ಗೆ ಐದೂವರೆಗಂಟೆವರೆಗೆ ಕೇಂದ್ರ ಸರ್ಕಾರ ಏನು ಮಾಡುತ್ತಾ ಇತ್ತು ?

ಏಕೆ ಆ ಕೆಲಸ ಮಾಡಲಿಲ್ಲ ? ಹನ್ನೊಂದು ಮುಕ್ಕಾಲು, ಹನ್ನೆರಡು ಗಂಟೆಗೆ ಗೋಪುರದ ಮೇಲೆ ಹತ್ತಿದಾಗ, ಇದು ಅಪರಾಧ ಎಂದು ಅನಿಸಿದ್ದರೆ, ತಕ್ಷಣ ಅಲ್ಲಿಯೇ ಬಾರ್ಡರಿನಲ್ಲಿದ್ದ ಮಿಲಿಟರಿಯವರು ಏಕೆ ಒಳಗಡೆ ಬರಲಿಲ್ಲ ? ಅಂದರೆ ಅರ್ಥ ಏನು ? ಈ ದೇಶದ ಪ್ರಧಾನಿಯನ್ನು ನಾನು ದೂಷಿಸುವುದಕ್ಕೆ ಇಚ್ಛೆಪಡುತ್ತಾ ಇಲ್ಲ. ಇದರ ಅರ್ಥ ಏನೆಂದರೆ, ...

ಶ್ರೀ ಸಿ. ಬೈರೇಗೌಡ:– ಹೊರಗಡೆಯಿಂದ ಬಂದ ರಕ್ತ ಇವತ್ತಿನ ದಿವಸ ಒಳಗಡೆ ಬರುತ್ತಾ ಇದೆ. ನೀವು, ಅವರು ಸೇರಿಕೊಂಡು ಮಾಡಿರುವ ಅಕೃತ್ಯ ಇದು. ಒಂದು ಕಡೆ ಕಾಂಗ್ರೆಸ್‌ನವರು, ಇನ್ನೊಂದು ಕಡೆ ನೀವು ಶಾಮೀಲಾಗಿ ಮಾಡಿದ್ದೀರಿ. ನೀವು ಸತ್ಯ ಹೇಳುತ್ತಿದ್ದೀರಿ, ದಯಮಾಡಿ ಮುಂದುವರಿಯಿರಿ. ಇದರಲ್ಲಿ ಒಂದು ಮಾತು ಹೇಳಿಬಿಡಿ. ಕಾಂಗ್ರೆಸ್‌ನವರು ಮತ್ತು ನಾವು ಶಾಮೀಲಾಗಿ ಈ ಕೃತ್ಯವನ್ನು ನಡೆಸಿದ್ದೇವೆ ಎಂಬ ಒಂದು ಅಮೃತ ವಾಕ್ಯ ನಿಮ್ಮ ಬಾಯಿಂದ ಬಂದರೆ, ಈ ದೇಶ ಒಪ್ಪುತ್ತದೆ, ನಾವೂ ಕೂಡ ಒಪ್ಪುತ್ತೇವೆ: ನಿಮಗೆ ಶಹಭಾಸ್‌ಗಿರಿ ಕೊಡುತ್ತೇವೆ. ನಿಮ್ಮ ಬಾಯಿಂದ ಆ ಮಾತು ಬಂದರೆ ನಿಜವಾಗಿಯೂ ಮೆಚ್ಚುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿನ್ನೆ ವೀರೇಂದ್ರ ಪಾಟೀಲರು ಮಾತನಾಡಿದ ಮೇಲೆ ಈ ಪ್ರಶ್ನೆ

ಕೇಳಿದ್ದರೆ ಸರಿ ಇತ್ತು ಈಗ ಇವರಿಗೆ ನಾನು ಏನು ಹೇಳಲಿ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, 6ನೇ ತಾರೀಖಿನ ನಂತರ, 9ನೇ ತಾರೀಖಿನ ಬೆಳಿಗ್ಗೆವರೆಗೆ, ಕೇಂದ್ರ ಸರ್ಕಾರದವರು ಸಹ ಈ ರೀತಿಯ ತೀರ್ಮಾನ ತೆಗೆದುಕೊಳ್ಳಲಿಲ್ಲವೆಂದು ಹೇಳಿದರೆ, ಬಹುಶಃ ಈ ದೇಶದ ಪ್ರಧಾನಿಯವರು ಯೋಚನೆ ಮಾಡಿದರು. ಲಕ್ಷಾಂತರ ಜನ ಮುಗ್ಧ ಕರಸೇವಕರು ಏನು ಅಲ್ಲಿದ್ದಾರೆ, ಕೆಲವರು ಈ ಕೃತ್ಯ ಮಾಡಿದಂಥ ಸಂದರ್ಭದಲ್ಲಿ ಮಿಲಿಟರಿ ಒಳಗಡೆ ಹೋದರೆ, ಸಾವಿರಾರು ಜನರ ಹತ್ಯೆ ಆಗಬಹುದು, ದೊಡ್ಡ ಅಪರಾಧವಾದಂತಾಗಬಹುದು, ಈ ಒಂದು ಪರಿಸ್ಥಿತಿಯನ್ನು ಹತೋಟಿಗೆ ತರುವಂಥ ಕೆಲಸ ಕಷ್ಟವಾಗಬಹುದು ಎನ್ನುವ ದೃಷ್ಟಿಯಿಂದ, ಈ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲವೆಂದು ನಾನಾದರೂ ಕೂಡ ಭಾವಿಸಿದ್ದೇನೆ. ನಾನು ಅವರ ಮೇಲೆ ಗೂಬೆ ಕೂಡಿಸುವಂಥ ಪ್ರಯತ್ನ ಮಾಡುತ್ತಾ ಇಲ್ಲ. ಏನು ನಡೆಯಿತು ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನೂ ಒಂದು ಮಾತು. ಬಹಳ ಜವಾಬ್ದಾರಿಯಿಂದ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ದೇಶದಲ್ಲಿ ಯಾವುದೇ ಧರ್ಮ ಇರಬಹುದು. ಎಲ್ಲರೂ ಸಹ, ಆ ಧರ್ಮಕ್ಕೆ, ಆ ಜನರ ಭಾವನೆಗೆ ಸ್ಪಂದಿಸಬೇಕಾಗುತ್ತದೆ; ಗೌರವ ಕೊಡುವುದನ್ನು ಕಲಿಯಬೇಕಾಗುತ್ತದೆ. ಒಂದಕ್ಕೆ ಒಂದೊಂದು ರೂಲ್ ಮಾಡುವುದಕ್ಕೆ ಬರುವುದಿಲ್ಲ. ಈ ಜಗತ್ತಿನ ಕ್ರಿಶ್ಚಿಯನ್ ಧರ್ಮದ ಬಗ್ಗೆ, ಮಹಾತ್ಮ ಏಸುಕ್ರಿಸ್ತನ ಬಗ್ಗೆ, ಆ ಹುಟ್ಟಿನ ಬಗ್ಗೆ, ಇಸ್ಲಾಂ ಧರ್ಮದ ಪೈಗಂಬರ್‌ರವರ ಹುಟ್ಟಿನ ಬಗ್ಗೆ ಏನಾದರೂ ಪ್ರಶ್ನೆ ಮಾಡಿದರೆ, ಅದೊಂದು ಅಕ್ಷಮ್ಯ ಅಪರಾಧವಾಗಬಹುದು. ಅದೇ ರೀತಿ ಭಾರತದಲ್ಲಿ ಪ್ರಭು ಶ್ರೀ ರಾಮಚಂದ್ರನ ಜನ್ಮಸ್ಥಾನದ ಬಗ್ಗೆ ಪ್ರಶ್ನೆ ಮಾಡಿದರೆ, ತಿಳಿಗೇಡಿತನದ ಪ್ರಶ್ನೆಯನ್ನು ಕೇಳುವಂಥ ಪ್ರಶ್ನೆ ಮಾಡಿದರೆ, ಇದೂ ಅಪರಾಧ ತಾನೆ. ನಮ್ಮ ಮುಸ್ಲಿಂ ಬಂಧುಗಳಿಗೆ ಮಕ್ಕಾ, ಮದೀನ ಹೇಗೆ ಒಂದು ತೀರ್ಥಕ್ಷೇತ್ರವೋ, ಪವಿತ್ರ ಕ್ಷೇತ್ರವೋ, ನಮ್ಮ ಕ್ರಿಶ್ಚಿಯನ್ ಬಂಧುಗಳಿಗೆ ಜೆರುಸಲೇಂ ಯಾವ ರೀತಿ ಪುಣ್ಯ ಕ್ಷೇತ್ರವೋ; ಇಲ್ಲಿ ಕೆಲವು ಹಿಂದುಗಳು ಒಪ್ಪದೇ ಇರಬಹುದು. ಶ್ರೀ ರಾಮಚಂದ್ರನ ಜನ್ಮಸ್ಥಾನ ಅಯೋಧ್ಯೆ ನಮಗೆ ಪವಿತ್ರ ಕ್ಷೇತ್ರವೆಂದು ಭಾವಿಸಿದ್ದೇವೆ. ಅದೇ ರೀತಿ ಶ್ರೀಶೈಲ, ಕಾಶಿ, ಮಥುರಾ ಕೂಡ ಇವೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ...

ಶ್ರೀ ಸಿ. ಬೈರೇಗೌಡ:– ಅಯೋಧ್ಯೆಯಲ್ಲಿ ಶ್ರೀರಾಮಚಂದ್ರ ಹುಟ್ಟಿದ್ದಾನೆ, ಇದು ಅವರ ನಂಬಿಕೆ. ಆದರೆ, ರಾವಣ ಎಲ್ಲಿ ಹುಟ್ಟಿದ, ಆ ಸ್ಥಾನ ಪವಿತ್ರ ಆಗಲಿಲ್ಲವೇ ? ರಾವಣನೂ ಕೂಡ ಶಿವನ ಪರಮ ಭಕ್ತ. ಆದ್ದರಿಂದ ರಾವಣನ ಜನ್ಮಸ್ಥಾನವನ್ನೂ ಹುಡುಕುವ ಪ್ರಯತ್ನವನ್ನು ಮಾನ್ಯ ಯಡಿಯೂರಪ್ಪನವರು ಏನಾದರೂ ಮಾಡಿ, ಇಂತಹ ಕಡೆ ರಾವಣ ಹುಟ್ಟಿದ, ಇದೂ ಕೂಡ ಪವಿತ್ರವಾದ ಸ್ಥಳ ಎಂದು ರಾವಣನ ಜನ್ಮಸ್ಥಳವನ್ನೂ ಹುಡುಕಿ ಮಾಡುವುದಾದರೆ, ಅವರ ವಾದವನ್ನು ಒಪ್ಪಬಹುದು. ಮಾನ್ಯ ಈಶ್ವರಪ್ಪನವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇವರನ್ನು ತೆಗೆದು, ಅವರು ಹೋಗಿ ಅಧಿಕಾರದಲ್ಲಿ ಕುಳಿತುಕೊಳ್ಳುವವರೆಗೂ ನಾವು ಇದನ್ನು ಬಳಸುವುದು ಎಂದು ಹೇಳುತ್ತಾರೆ ....

ಶ್ರೀ ಕೆ.ಎಸ್. ಈಶ್ವರಪ್ಪ:– ಈ ದೇಶದಲ್ಲಿ ರಾಮರಾಜ್ಯ ಸ್ಥಾಪನೆ ಆಗುವವರೆಗೂ, ಧರ್ಮರಾಜ್ಯ ಸ್ಥಾಪನೆ ಆಗುವವರೆಗೂ, ರಾಮಮೂರ್ತಿ ವಿಗ್ರಹದ ಪೂಜೆಯಾಗುವವರೆಗೂ ನಾವು ಇದನ್ನೇ ಬಳಸುತ್ತೇವೆ.

ಡಾ।। ಜೀವರಾಜ ಆಳ್ವ:– ಸುಮಾರು 25 ನಿಮಿಷಗಳು ನಿರರ್ಗಳವಾದ ಭಾಷಣವನ್ನು ಮಾನ್ಯ ಯಡಿಯೂರಪ್ಪನವರು ಬಹಳ ಚೆನ್ನಾಗಿ ಮಾಡಿದರು. ನಮ್ಮ ಭಾವನೆಗಳನ್ನು ನಾವು ಹೇಳಿದ್ದೇವೆ. ಆದರೆ, ಈಶ್ವರಪ್ಪನವರ ಬಾಯಿಂದ ಸತ್ಯ ಬಂತು, ರಾಜಕೀಯವಾಗಿ ಉಪಯೋಗ ಮಾಡುತ್ತಿದ್ದೇವೆ ಎಂದು ಬಂತು.

4.05 ಪಿ..ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ, ಶ್ರೀರಾಮನ ಜನ್ಮಸ್ಥಾನ ಅಯೋಧ್ಯೆಯಲ್ಲಿ ಬಾಬರನ ಮಸೀದಿ ಇದೆ ಎನ್ನುವಂಥ ತಪ್ಪು ಕಲ್ಪನೆಯನ್ನು, ಈ ದೇಶದ ಜನಕ್ಕೆ, ಪ್ರಪಂಚದ ಇತರ ರಾಷ್ಟ್ರಗಳಲ್ಲಿ, ಈ ಘಟನೆ ಬಗ್ಗೆ ತಲೆತಗ್ಗಿಸಿ ನಾವು ನಿಲ್ಲುವಂತಹ ಸ್ಥಿತಿಗೆ, ತರುವಂತಹ ಒಂದು ಪ್ರಯತ್ನ, ಇದು ಸತ್ಯಕ್ಕೆ ಅಪಚಾರ ಮಾಡುವಂತಹ ಮಾತನ್ನು ಹೇಳಿದ್ದಾರೆ, ಅದಕ್ಕೆ ನಾನು ದಾಖಲೆಗಳನ್ನು ಕೊಡುತ್ತೇನೆ. ನಾನು ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಏನು ಹೇಳುತ್ತೇನೆಂದರೆ, ಇವತ್ತು 30ನೇ ತಾರೀಖಿನ ಕನ್ನಡ ಪ್ರಭ ಪತ್ರಿಕೆಯನ್ನು ತಾವು ತೆಗೆಸಿ ನೋಡಿ. ಅದರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದಂತಹ ಸನ್ಮಾನ್ಯ ಅರ್ಜುನ್ ಸಿಂಗ್‌ರವರು ಏನು ಹೇಳಿದ್ದಾರೆಂದರೆ, ಕಳೆದ 40 ವರ್ಷಗಳಿಂದ ಶ್ರೀ ರಾಮಲಾಲ ವಿಗ್ರಹ ಪೂಜೆ ಮತ್ತು ಭಕ್ತಾದಿಗಳಿಂದ ದರ್ಶನ ನಡೆಯುತ್ತಿದೆ ಎನ್ನುವುದನ್ನು, ದರ್ಶನಕ್ಕೆ ಅವಕಾಶ ನೀಡಿರುವುದನ್ನೂ ಖಂಡಿಸುತ್ತಾ ಇರುವವರು ಗಮನಿಸಬೇಕು. ಇದು ಯಾರು ಹೇಳಿರುವಂತಹ ಮಾತು. ಈ ಮಾತನ್ನು ನಾನು ಹೇಳುತ್ತಾ ಇಲ್ಲ. ಕಾಂಗ್ರೆಸ್ಸಿನ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥಹ ಸನ್ಮಾನ್ಯ ಶ್ರೀ ಅರ್ಜುನ್ ಸಿಂಗ್‌ರವರು ಇವತ್ತು ಹೇಳಿರುವಂಥ ಮಾತು. ಈ ದೇಶದ ಗೃಹ ಸಚಿವರಾದಂಥ ಸನ್ಮಾನ್ಯ ಚವಾಣ್‌ರವರು ಏನು ಹೇಳಿದ್ದಾರೆಂಬುದು ಸಂಯುಕ್ತ ಕರ್ನಾಟಕ ಮತ್ತು ಬೇರೆ ಎಲ್ಲಾ ಪತ್ರಿಕೆಗಳಲ್ಲೂ ಸಹ ನೆನ್ನೆ ಬಂದಿದೆ. ಕಳೆದ 40 ವರ್ಷಗಳಿಂದ ಅಯೋಧ್ಯೆಯ ವಿವಾದಾತ್ಮಕ ಸ್ಥಳದಲ್ಲಿ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಿಲ್ಲ. ನಮ್ಮ ಇಸ್ಲಾಂ ಧರ್ಮದ ಬಗ್ಗೆ ಹಿರಿಯರು ಇದ್ದಾರೆ, ದಯಮಾಡಿ ಅವರು ನನಗೆ ಮಾರ್ಗದರ್ಶನ ಮಾಡಬೇಕು. ಯಾವ ಸ್ಥಳದಲ್ಲಿ ಸತತವಾಗಿ 12 ವರ್ಷ ನಮಾಜು ನಡೆಯುವುದಿಲ್ಲವೋ ಅದು ಒಂದು ಮಸೀದಿ ಎಂದು ಹೇಳುವುದಕ್ಕೆ ನಮ್ಮ ಮುಸ್ಲಿಂ ಬಂಧುಗಳು ಒಪ್ಪುವುದಿಲ್ಲ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಅದು ನನಗೆ ಗೊತ್ತಿಲ್ಲ, ತಾವು ಆ ವಿಚಾರ ಹೇಳಿ. ಅವರಲ್ಲಿ ಏನು ಒಂದು ನಂಬಿಕೆ ಇದೆ ಅದನ್ನು ನಾನು ಹೇಳುತ್ತಿದ್ದೇನೆ. ಈಗ ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ಅಯೋಧ್ಯೆಯ ಈ ಸ್ಥಳವನ್ನು ಒಂದು ಡಿಸ್‌ಪ್ಯೂಟೆಡ್ ಸ್ಟ್ರಕ್ಚರ್ ಎಂದು ಹೇಳಿ ಸುಪ್ರೀಂ ಕೋರ್ಟಿನಲ್ಲಿ ಏನು ವಿವಾದಗಳ ಚರ್ಚೆ ನಡೆಯುತ್ತಾ ಇದೆಯೋ, ಈ ಸಂದರ್ಭದಲ್ಲಿ ನಾವು ಅದಕ್ಕೆ ಒಂದು ಹೆಸರು ಕೊಟ್ಟು, ಅದು ಒಂದು ಬಾಬರಿ ಮಸೀದಿ ಎಂದು ಕರೆದು ಅಪಚಾರ ಮಾಡುವಂತಹ ಕೆಲಸ ಮಾಡುವುದರ ಬಗ್ಗೆ ಯೋಚನೆ ಮಾಡೋಣ. ಇನ್ನೊಂದು ವಿಚಾರ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗಾದರೆ ನಾವು ಯಾರು ? ನಾವು ನಿನ್ನೆ ಮೊನ್ನೆ ಬಂದವರು. ಬಹಳ ವರ್ಷಗಳಿಂದ ದೇಶಕೋಸ್ಕರ ಹೋರಾಟ ಮಾಡಿದಂತಹ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಇದ್ದೀರಿ. ಜನಸಂಘ ಪ್ರಾರಂಭವಾಗಿದ್ದುದು ಯಾವಾಗ ? 1951 ರಿಂದ ಈಚೆಗೆ ನಾವು ರಾಜಕೀಯಕ್ಕೆ ಬಂದಂತಹ ಜನ. ಆದರೆ ನಾನು ಕೇಳುತ್ತೇನೆ. 1949 ರ ಡಿಸೆಂಬರ್ 22ನೇ ತಾರೀಖು ಶ್ರೀ ರಾಮನ ಮೂರ್ತಿಯ ಪ್ರತಿಷ್ಠಾಪನೆ ಅಯೋಧ್ಯೆಯಲ್ಲಿ ಆಯಿತು. ಆಗ ನಾವು ರಾಜಕೀಯದಲ್ಲಿ ಇದ್ದೇವೆಯೋ ? ನಾವು ಇನ್ನೂ ಕಣ್ಣು ಬಿಟ್ಟಿರಲಿಲ್ಲ. ಆ ಸಂದರ್ಭಲ್ಲಿ ಈ ದೇಶದ ಮೊದಲನೆಯ ಪ್ರಧಾನಿ ಶ್ರೀ ಜವಹರಲಾಲ್ ನೆಹರು ಇದ್ದಂತಹ ಕಾಲದಲ್ಲಿ ಅಂದರೆ 22-12-1949ರಂದು ಅಲ್ಲಿ ಶ್ರೀ ರಾಮನ ಮೂರ್ತಿಯ ಪ್ರತಿಷ್ಠಾಪನೆ ಆಯಿತು. ಹಾಗಾದರೆ ನಾನು ಕೇಳುತ್ತೇನೆ; ಅದು ಬಾಬರನ ಮಸೀದಿ ಆಗಿದ್ದರೆ, ರಾಮನ ಜನ್ಮಸ್ಥಾನ ಅಲ್ಲದಿದ್ದರೆ ಇಷ್ಟೊಂದು ಪ್ರಜಾತಂತ್ರದ ವ್ಯವಸ್ಥೆ ಬಗ್ಗೆ ಮಾತನಾಡುವಂತಹ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಅಪರಾಧ ಮಾಡಿದರೇ ? ಈ ದೇಶದ ಪ್ರಧಾನಿಯಾಗಿದ್ದ ಶ್ರೀ ಜವಹರಲಾಲ್ ನೆಹರುರವರು ತಪ್ಪು ಮಾಡಿದರು ಎಂದು ತಾವು ಹೇಳುವುದಕ್ಕೆ ಸಿದ್ಧ ಇದ್ದೀರಾ ? ಎರಡನೆಯದು ಅವತ್ತಿನ ದಿವಸ ಯಾವ ಸರ್ಕಾರ ಉತ್ತರ ಪ್ರದೇಶದಲ್ಲಿ ಇತ್ತು ? ನಮ್ಮ ಬಿಜೆಪಿ ಸರ್ಕಾರ ಉತ್ತರ ಪ್ರದೇಶದಲ್ಲಿ ಇರಲಿಲ್ಲ. ಅಂದರೆ ಅವತ್ತಿನ ಉತ್ತರ ಪ್ರದೇಶದ ಸರ್ಕಾರ ಸಹ ಕಾಂಗ್ರೆಸ್ಸಿನ ಸರ್ಕಾರ ಆಗಿತ್ತು. ನಮ್ಮ ಸರ್ಕಾರ ಇರಲಿಲ್ಲ.

ಅಂದರೆ ನೀವೇ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ, ಶ್ರೀ ಜವಹರಲಾಲ್ ನೆಹರೂರವರು ಈ ದೇಶದ ಪ್ರಧಾನಿ ಆಗಿದ್ದಂತಹ ಕಾಲದಲ್ಲಿ, ಆ ಡಿಸ್‌ಪ್ಯೂಟೆಡ್ ಸ್ಟ್ರಕ್ಚರಲ್ಲಿ ಶ್ರೀ ರಾಮಲಾಲ ಮೂರ್ತಿಯ ಪ್ರತಿಷ್ಠಾಪನೆ ಆಯಿತು. ಅದೇ ರೀತಿ ಇನ್ನೊಂದು ಮಾತನ್ನು ನಾನು ಹೇಳುತ್ತೇನೆ.

(ಗೊಂದಲ)

ಡಾಕ್ಟರ್ ಎನ್.ಬಿ. ನಂಜಪ್ಪ:– ಹಾಗಾದರೆ ತಾವು ರಾಮನ ಮೂರ್ತಿಯನ್ನು ಒಳಗಡೆ ಇಟ್ಟುಕೊಂಡು ಪೂಜೆ ಮಾಡಿದ್ದು ಏಕೆ ? ಅದನ್ನು ಒಡೆದು ಹಾಕಿದ್ದು ಏಕೆ ? ಅದನ್ನು ಏತಕ್ಕೆ ಫೋರ್ಸ್‌ಫುಲ್ಲಾಗಿ ಕಳ್ಳತನದಿಂದ ಒಡೆದು ಹಾಕಬೇಕಾಗಿತ್ತು ? ಅದಕ್ಕೆ ಏತಕ್ಕೆ ಟ್ರೇನಿಂಗ್ ಕೊಟ್ಟು, ಅಲ್ಲಿಗೆ ಲಕ್ಷಾಂತರ ಜನರನ್ನು ಕರೆದುಕೊಂಡು ಹೋಗಿ ಹೊಡೆದು ಹಾಕುವ ಅವಶ್ಯಕತೆ ಇತ್ತು ? ಅಲ್ಲಿ ರಾಮನ ಪ್ರತಿಷ್ಠಾಪನೆ ಮಾಡಿದ್ದರೆ, ಅದನ್ನು ಬಾಬರಿ ಮಸೀದಿ ಎಂದು ಏಕೆ ಕರೆದರು ? ಸುಪ್ರೀಂ ಕೋರ್ಟಿಗೆ ಡಿಸ್‌ಪ್ಯೂಟ್ ಏತಕ್ಕೆ ಹೋಯಿತು ?

(ಗೊಂದಲ)

ಸುಪ್ರೀಂ ಕೋರ್ಟಿನಲ್ಲಿ ಈ ವ್ಯಾಜ್ಯ ಇನ್ನೂ ನಡೆಯುತ್ತಾ ಇದೆ. ಆ ಜಾಗದಲ್ಲಿ 40 ವರ್ಷಗಳಿಂದ ರಾಮನನ್ನು ಇಟ್ಟುಕೊಂಡಿದ್ದು, ಅದನ್ನು ಹೋಗಿ ರಾತ್ರಿ ಹೊತ್ತು ಒಡೆದು ಹಾಕಿದರು ಎಂದು ಹೇಳುತ್ತೀರಲ್ಲ ನೀವು, ರಾತ್ರಿ ಹೊತ್ತು ಒಡೆದು ಹಾಕುವ ಅವಶ್ಯಕತೆ ಏನು ಇತ್ತು ? ಈ ದೇಶದ ಬೇರೆ ಜನಗಳಿಗೆ, ಮುಗ್ಧರಿಗೆ ಸುಳ್ಳು ಹೇಳಿ, ಈ ದೇವರ ಹೆಸರಿನಲ್ಲಿ ಮೋಸ ಮಾಡುವುದಕ್ಕೆ ಒಂದು ಲಿಮಿಟ್ ಬೇಕು.

ಉಪಾಧ್ಯಕ್ಷರು:– ಅವರು ಈಲ್ಡ್ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಆ ಕಡೆ ಕುಳಿತುಕೊಂಡು ಉತ್ತರ ಕೊಡುವ ಕಾಲ ಬಂದಾಗ ಇದಕ್ಕೆ ಉತ್ತರ ಕೊಡುತ್ತೇನೆ. ನಾನು ಈಗ ಈ ಕಡೆ ಕುಳಿತುಕೊಂಡು ಮಾತನಾಡುತ್ತಿದ್ದೇನೆ. ಪ್ರಶ್ನೆ ಏನೆಂದರೆ, ನಾನು ಆ ಕಡೆ ಕುಳಿತುಕೊಂಡು ಉತ್ತರ ಕೊಡುತ್ತಿದ್ದೇನೆ ಎನ್ನುವ ರೀತಿಯಲ್ಲಿ ನೀವು ನನಗೆ ಪ್ರಶ್ನೆ ಕೇಳುತ್ತಿದ್ದೀರಿ ಎಂಬ ಅನುಮಾನ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್:– ಇದರ ಬಗ್ಗೆ ಹಕ್ಕುಚ್ಯುತಿ ತರಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಈಗಾಗಲೇ ನಾವು ಆ ಕಡೆ ಕುಳಿತುಕೊಳ್ಳುತ್ತೇವೆ ಎಂದು ತೀರ್ಮಾನ ಮಾಡಿಕೊಂಡಿದ್ದಾರೆ. ಆದುದರಿಂದ ನಾವು ಹಕ್ಕುಚ್ಯುತಿ ತರಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಾವು ಇದನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ, ನಾವು ಹಕ್ಕುಚ್ಯುತಿ ತರಬೇಕಾಗುತ್ತದೆ, ಈಗಾಗಲೇ ನೀವು ತೀರ್ಮಾನ ಮಾಡಿಕೊಂಡು ಬಿಟ್ಟಿದ್ದೀರಿ ಎಂದು ಕಾಣುತ್ತದೆ ನಾವು ಆ ಕಡೆ ಕುಳಿತುಕೊಂಡು ಬಿಟ್ಟಿದ್ದೇವೆ ಎಂದು ತೀರ್ಮಾನ ಮಾಡಿಕೊಂಡು ಬಿಟ್ಟಿದ್ದೀರಿ ಎಂದು ಕಾಣುತ್ತದೆ.

(ಗೊಂದಲ)

ಡಾ. ಎನ್.ಬಿ. ನಂಜಪ್ಪ:– ದೇಶದ ಕೋಮು ಸೌಹಾರ್ದತೆಯನ್ನು, ದೇಶದ ಸ್ವಾತಂತ್ರ್ಯವನ್ನು ಹಾಳು ಮಾಡುವುದಕ್ಕೆ ಹೊರಟಿದ್ದೀರೇನೋ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಹಗುರವಾಗಿ ಮಾತನಾಡುತ್ತಿಲ್ಲ. ನಾನು ದಾಖಲೆಗಳನ್ನು ನೀಡುವ ಪ್ರಯತ್ನ ಮಾಡುತ್ತಿದ್ದೇನೆ. ನಾನು ಕೊಟ್ಟಿರುವ ದಾಖಲೆಗಳಲ್ಲಿ ಹೇಳುವ ಮಾತಿನಲ್ಲಿ ಸತ್ಯಕ್ಕೆ ಅಪಚಾರ ಮಾಡುವಂಥದು ಏನಾದರೂ ಇದ್ದರೆ ಮಾತನಾಡಿ, ನಾನು ತಲೆಬಾಗಿಸುತ್ತೇನೆ, ತಪ್ಪಿದ್ದರೆ ಕ್ಷಮೆ ಕೇಳಿಕೊಂಡು ವಾಪಸ್ ಪಡೆಯುತ್ತೇನೆ. ಪ್ರಮುಖವಾದ ವಿಷಯದ ಬಗ್ಗೆ ನನ್ನ ಅಭಿಪ್ರಾಯ ವ್ಯಕ್ತಪಡಿಸುವ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಎಲ್ಲಾ ಹಂತದಲ್ಲೂ ಈ ರೀತಿ ಅಡೆತಡೆ ಉಂಟು ಮಾಡಿದರೆ ಹೇಗೆ ?

ಡಾ.ಎನ್.ಬಿ. ನಂಜಪ್ಪ:- ಶ್ರೀ ರಾಮ ವಚನ ಪರಿಪಾಲನೆಗಾಗಿ ಕಾಡಿಗೆ ಹೋದವನು, ನೀವು ಅವನ ಹೆಸರಿನಲ್ಲಿ ಸುಳ್ಳು ಹೇಳಿ, ಸಾವಿರಾರು ಜನರನ್ನು ಕೊಂದು, ರಕ್ತದಲ್ಲಿ ಅಭಿಷೇಕ ಮಾಡಿದಿರಿ, ಸುಳ್ಳು ಸುಳ್ಳು ಏತಕ್ಕೆ ಹೇಳುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮ್ಮ ನಡವಳಿಕೆಯಲ್ಲಿ ಏನೂ ವ್ಯತ್ಯಾಸ ಆಗಿಲ್ಲವೇ ? ಎಲ್ಲಾ ನಡವಳಿಕೆ ಮೊದಲಿನಂತೆಯೇ ಇದೆಯೇ ? ನೀವು ಮಾತನಾಡುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ, ಮಾತನಾಡಿ, ನೀವು ಎಲ್ಲಾ ಮಾತನಾಡಿದ ಮೇಲೆ ಕೊನೆಯಲ್ಲಿ ಯಡಿಯೂರಪ್ಪ ಮಾತನಾಡಲಿ ಎಂದರೆ ನಾನು ಅದಕ್ಕೂ ಸಿದ್ಧನಿದ್ದೇನೆ, ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇವರಾಜ್:- 40 ವರ್ಷ ಹಿಂದಿನದನ್ನು ಏತಕ್ಕೆ ಹೇಳುತ್ತಿದ್ದೀರಿ. ಸುಳ್ಳು ಸುಳ್ಳು ಏತಕ್ಕೆ ಹೇಳುತ್ತಿದ್ದೀರಿ. ನೀವು ಅಲ್ಲಿ ಕುಳಿತುಕೊಳ್ಳುತ್ತೀರೋ, ಇಲ್ಲೇ ಕುಳಿತುಕೊಳ್ಳುತ್ತೀರೋ ಅದೆಲ್ಲಾ ಏತಕ್ಕೆ ? ಜನ ತೀರ್ಮಾನ ಮಾಡಿದರೆ ಹೊರಗೇ ಕುಳಿತುಕೊಳ್ಳುತ್ತೀರಿ ನೋಡಿ ಆಮೇಲೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಬದುಕಿರುವವರೆಗೂ ಇಲ್ಲೇ ಕುಳಿತು ಕೊಳ್ಳುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಅಧಿಕಾರ ಬೇಕೆಂದು ಬಂದಿರುವವರು ಎಲ್ಲಿ ಕುಳಿತುಕೊಳ್ಳಬೇಕೆಂದು ವಿಚಾರ ಮಾಡುತ್ತಾರೆ. ನಾವು ಬದುಕಿರುವವರೆಗೆ ವಿರೋಧಪಕ್ಷದಲ್ಲೇ ಕುಳಿತುಕೊಂಡು ಕೆಲಸ ಮಾಡಬೇಕೆಂಬ ಅಭಿಪ್ರಾಯ ಜನ ಕೊಟ್ಟರೆ ನಾವು ಅದಕ್ಕೇ ಸಿದ್ಧರಾಗಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಲೋಕಸಭೆಯಲ್ಲಿ ನಾಲ್ಕು ಜನ ಇಲ್ಲ ಹೊರುವುದಕ್ಕೆ ಎಂದು ಹೇಳುತ್ತಿದ್ದಿರಿ. ಈಗ ಹೊರುವುದಕ್ಕೆ 119 ಜನ ಬಂದಿದ್ದೇವೆ, ಇದರಿಂದಲಾದರೂ ನಾವು ಬೆಳೆಯುತ್ತಿದ್ದೇವೆ ಎಂದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆರ್.ವಿ. ದೇವರಾಜ್:- ರಾಮನ ಹೆಸರಿನಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೌದು ನಮಗೆ ರಾಮನ ಆಶೀರ್ವಾದ ಇದೆ, ನಿಮಗೆ ಯಾರದ್ದೂ ಇಲ್ಲವಲ್ಲ, ಎಲ್ಲಾ ನಿಮ್ಮ ಕೈಬಿಡುತ್ತಿದ್ದಾರೆ, ಕಾಂಗ್ರೆಸ್ ಮುಖಂಡರೇ ನಿಮ್ಮ ಕೈಬಿಡುತ್ತಿದ್ದಾರೆ, ಪ್ರಧಾನಿಯವರ ಖುರ್ಚಿ ಅಲ್ಲಾಡುತ್ತಿದೆ.

(ಗೊಂದಲ)

ಉಪಾಧ್ಯಕ್ಷರು:- ಆಯಿತು, ಈಗ ವಿಷಯಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ವಿವರಗಳನ್ನು ಹೇಳುತ್ತಿದ್ದೇನೆ. 1949 ರಲ್ಲಿ ಸನ್ಮಾನ್ಯ ಜವಹರಲಾಲ್ ನೆಹರೂ ಅವರು ಪ್ರಧಾನಿ ಆಗಿದ್ದಂಥ ಕಾಲದಲ್ಲಿ 22.12.49 ರಂದು, ಇದನ್ನು

ಡಿಸ್‌ಪ್ಯೂಟೆಡ್ ಸ್ಟ್ರಕ್ಚರ್ ಎಂದು ತಾವು ಏನು ಕರೆಯುತ್ತೀರಿ. ಬಾಬರಿ ಮಸೀದಿ ಎಂದು ತಾವು ಏನು ಕರೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಅಲ್ಲಿ ರಾಮಲಾಲ ಮೂರ್ತಿಯ ಪ್ರತಿಷ್ಠಾಪನೆ ಆಯಿತು. ಜವಹರಲಾಲ್ ನೆಹರೂ ಅವರು ಇದ್ದ ಕಾಲದಲ್ಲೇ ಆಯಿತು. ಈ ಮಾತನ್ನು ಹೇಳುತ್ತೇನೆ. ಎರಡನೆಯದು ಈ ಒಂದು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ ಮೇಲೆ,

(ಗೊಂದಲ)

ಶ್ರೀ ಮದನಗೋಪಾಲ ನಾಯಕ್:- ಅದು ಯಾವ ಪ್ಲೇಸ್‌ನಲ್ಲಿ ಆಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದು ಸರಿ ಇಲ್ಲ, ಅವರಿಗೆ ಮಾತನಾಡಲು ಬಿಡಿರಿ.

ಉಪಾಧ್ಯಕ್ಷರು:- ಅವರು ಈಲ್ಡ್ ಆಗಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:- ಹಿಂದೂ ಧರ್ಮದ ಆಗಮ ಶಾಸ್ತ್ರದ ಪ್ರಕಾರ ಒಂದು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕಾದರೆ ಕೆಲವು ನಿಯಮಗಳು ಇವೆ. ರಾತ್ರಿ ಹೊತ್ತು ಯಾರಿಗೂ ಗೊತ್ತಿಲ್ಲದ ರೀತಿಯಲ್ಲಿ ರಾಮ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದರೆ ಅದನ್ನು ಯಾರೂ ಒಪ್ಪಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಅಲ್ಲಿದ್ದಂತಹ ಮಸೀದಿಯನ್ನು ಕೆಡವಿ ಪುನಃ ಅದೇ ರಾಮನ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸುವುದಾದರೆ ಅದು ಹಿಂದೂ ಧರ್ಮದ ಆಗಮ ಶಾಸ್ತ್ರಕ್ಕೆ ದ್ರೋಹ ಮಾಡಿದ ಹಾಗೆ.

(ಗೊಂದಲ)

ಉಪಾಧ್ಯಕ್ಷರು:- ಈಗ ತಾವು ಮುಂದುವರಿಸಿ.

ಶ್ರೀ ಎಚ್ ಏಕಾಂತಯ್ಯ:- ಪ್ರತಿಯೊಂದಕ್ಕೂ ಅಡ್ಡಿ ಮಾಡುವುದಾದರೆ ಚರ್ಚೆ ಮಾಡುವುದರಲ್ಲಿ ಏನು ಅರ್ಥ ಇದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ:- ಈ ರೀತಿಯಾಗಿ ಶ್ರೀ ರಾಮಲಾಲ ಪ್ರತಿಷ್ಠಾಪನೆ ಏನಾಯಿತು ಅದು ಸರಿ ಇಲ್ಲವೆಂದು ನಮ್ಮ ಮುಸ್ಲಿಂ ಬಂಧುಗಳು ದಿನಾಂಕ 16-1-1950 ರಲ್ಲಿ ಕೇಸ್ ಹಾಕಿದರು. ಕೇಸ್ ನಂಬರ್ 2:1950 ಫೈಜಾಬಾದ್ ಸಿವಿಲ್ ಕೋರ್ಟಿನಲ್ಲಿ ಒಂದು ತಕರಾರು ಅರ್ಜಿ ಹಾಕಿದರು. ಆ ಸಮಯದಲ್ಲಿ ಸಿವಿಲ್ ನ್ಯಾಯಾಲಯ ಒಂದು ತೀರ್ಪು ಕೊಟ್ಟಿತು. ಯಾವ ಶ್ರೀ ರಾಮಲಾಲ ಮೂರ್ತಿ ಅಲ್ಲಿ ಪ್ರತಿಷ್ಠಾಪನೆ ಆಗಿದೆ ಅದು ಸರಿ ಇದೆ ಎಂದು ಕೋರ್ಟ್ ಆದೇಶ ಕೊಟ್ಟು ಆದಮೇಲೆ ಅದರ ವಿರುದ್ಧವಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲ್ ಹೋದರು. ದಿನಾಂಕ 3-3-1951 ರಲ್ಲಿ ಆ ಮೇಲ್ಮನವಿ ಕೂಡ ತಿರಸ್ಕರಿಸಿ ಒಂದು ಆಜ್ಞೆ ಮಾಡಿದರು. ಫೈಜಾಬಾದ್ ಸಿವಿಲ್ ಕೋರ್ಟ್ ಜಡ್ಜ್ ಏನು ಆಜ್ಞೆ ಮಾಡಿದ್ದಾರೆ ಅದು ಸರಿಯಾಗಿದೆ ಎಂದು. ಅದರ ಜೊತೆಗೆ ಇನ್ನು ಒಂದು ಆಜ್ಞೆ ಮಾಡಿದರು, ಅದೇನೆಂದರೆ ಸುಮಾರು 200 ಗಜ ಅದರ ಸುತ್ತ ಮುತ್ತ ಯಾವುದೇ ಮುಸ್ಲಿಂ ಬಂಧುಗಳು ಓಡಾಟ ಮಾಡಕೂಡದು ಎನ್ನುವ ಕಟ್ಟಾಜ್ಞೆ ಕೂಡ ಮಾಡಿದರು. ಅದಾದ ಮೇಲೆ ಅದು ಸರಿಯಲ್ಲವೆಂದು ದಿನಾಂಕ 26-4-1955ರಲ್ಲಿ ಹೈಕೋರ್ಟಿಗೆ ಅವತ್ತಿನ ದಿವಸ ಅಲ್ಪಸಂಖ್ಯಾತ ಬಂಧುಗಳು ಹೋದರು. ಜಿಲ್ಲಾ ನ್ಯಾಯಾಲಯದ ಆಜ್ಞೆಯನ್ನು ಹೈಕೋರ್ಟ್ ಎತ್ತಿ ಹಿಡಿಯಿತು. ಅಂದಿನ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಸಿಜೆ ಮೂತಂ, ಇನ್ನೊಬ್ಬರು ಜೆ. ರವಿವೀರದಯಾಳ್ ಈ ಇಬ್ಬರು ನ್ಯಾಯಾಧೀಶರು ತೀರ್ಪು ಕೊಟ್ಟರು. ಮೊದಲಿನ ಡಿಸ್ಟ್ರಿಕ್ಟ್ ಕೋರ್ಟ್ ಆಜ್ಞೆಯನ್ನು ಅವರು ಎತ್ತಿ ಹಿಡಿದಿದ್ದಾರೆ. ಇದು ಅವತ್ತು ಆದಂತಹ ಆಜ್ಞೆ. ನಾನು ತಮ್ಮನ್ನು ಕೇಳುವುದಕ್ಕೆ

ಇಚ್ಛಿಪಡುತ್ತೇನೆ. ಯಾವ ನ್ಯಾಯಾಲಯದ ಆಜ್ಞೆ ಇನ್ನೂ ಅಸ್ತಿತ್ವದಲ್ಲಿದೆ ಇಂತಹ ಒಂದು ಸಂದರ್ಭದಲ್ಲಿ ಏನು ಡಿಸ್‌ಪ್ಯೂಟೆಡ್ ಸ್ಟ್ರಕ್ಚರ್ ನೀವು ಹೇಳುವಂಥದ್ದು ಏನು ಇದೆ ಅಲ್ಲಿ ದಿನನಿತ್ಯ ಪೂಜೆ ನಡೆಯುತ್ತಿದೆ. ಆ ಬಗ್ಗೆ ಉನ್ನತ ಸ್ಥಾನದಲ್ಲಿರುವಂತಹ ಜನರು ಅಲ್ಲಿ ಮಸೀದಿ ಕಟ್ಟುತ್ತೇವೆಂದು ಹೇಳುತ್ತಿದ್ದಾರೆ, ಹೈಕೋರ್ಟಿನಲ್ಲಿ ಕೇಸ್ ಇನ್ನು ಪೆಂಡಿಂಗ್ ಇರಬೇಕಾದರೆ ಡಿಸಿಷನ್ ಅಲ್ಲಿ ಇನ್ನೂ ಆಗಬೇಕಾಗಿರುವಾಗ ನೀವು ಅಲ್ಪಸಂಖ್ಯಾತರನ್ನು ವ್ಯವಸ್ಥಿತವಾಗಿ ಅತಂತ್ರರನ್ನಾಗಿ ಮಾಡುವುದಲ್ಲದೆ ಇದು ಯಾರೂ ಮಾಡಿದ ತಪ್ಪು? ಕೋರ್ಟ್ ಆಜ್ಞೆ ಇರಬೇಕಾದರೆ ಆ ಜಾಗದಲ್ಲಿ ಎಲ್ಲರೂ ಆ ರೀತಿ ನಡೆದುಕೊಳ್ಳಬೇಕಾಗುತ್ತದೆ ಎಲ್ಲರೂ ಅದಕ್ಕೆ ತಲೆಬಾಗಬೇಕಾಗುತ್ತದೆ ಆ ಕೆಲಸ ಮಾಡದಿದ್ದಕ್ಕೆ ಪರಿಣಾಮ ಇವತ್ತು ಈ ಪರಿಸ್ಥಿತಿ ಬಂದಿದೆ. ಕೋರ್ಟಿನಲ್ಲಿ ಇವತ್ತೂ ಕೂಡ ನಡೆಯುತ್ತಿದೆ. ಸುಮಾರು 200 ಗಜ ಯಾರೂ ಹೋಗಬಾರದು ಎಂದು ಕೋರ್ಟ್ ಆಜ್ಞೆ ಇದೆ. ಅಲ್ಲಿ ಮಸೀದಿ ಕಟ್ಟುವ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಮಾನ್ಯ ಯಡಿಯೂರಪ್ಪನವರು ಬಹಳ ಚೆನ್ನಾಗಿ ತಾತ್ವಿಕವಾಗಿ ತಮ್ಮ ವಾದವನ್ನು ಮಂಡಿಸುತ್ತಿದ್ದಾರೆ ಸಂತೋಷ. ಆದರೆ ಒಂದು ಪ್ರಶ್ನೆಗೆ ನನಗೆ ತಮ್ಮಿಂದ ಉತ್ತರ ಏನು ಬರುತ್ತದೆಂದು ನೋಡಬೇಕಾಗುತ್ತದೆ. ಅದು ಹಿಂದೆ ಆದದ್ದು ಒಪ್ಪಿಕೊಳ್ಳುತ್ತೇನೆ. ಇವತ್ತು ಅಥವಾ ನಾಳೆಯೋ ಕೋರ್ಟಿನವರು ಏನು ತೀರ್ಮಾನ ಮಾಡುತ್ತಾರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ? ಅಥವಾ ಒಪ್ಪಿಕೊಳ್ಳುವುದಿಲ್ಲವೇ? ಈಗ ಈ ಇಶ್ಯೂವನ್ನು ಕೋರ್ಟಿಗೆ ಕೊಡಬೇಕೆಂದು ಒಂದು ಪಕ್ಷದವರು ಈಗಾಗಲೇ ಒಪ್ಪಿದ್ದಾರೆ. ತಾವು ಒಂದು ವಿಷಯದಲ್ಲಿ ಕೋರ್ಟ್ ತೀರ್ಮಾನ ಒಪ್ಪಿದರೆ ಇನ್ನೊಂದು ವಿಷಯದಲ್ಲಿ ಕೋರ್ಟ್ ತೀರ್ಮಾನ ಬೇರೆಯವರು ಒಪ್ಪುವುದಿಲ್ಲ. ಕೋರ್ಟಿಗೆ ಹೋಗುವುದಕ್ಕೆ ಒಪ್ಪುವುದಿಲ್ಲವೆಂದು ಹೇಳುತ್ತೀರಿ ಇದು ಸರಿಯೇ? ತಮ್ಮ ವಾದ ಸಮರ್ಥನೀಯವಾಗಿದೆಯೇ? ತಮ್ಮ ವಾದಕ್ಕೆ ಅರ್ಥ ಬರುತ್ತದೆಯೇ? ನನಗೆ ಸಂಶಯ ಬಂತು ಅದಕ್ಕೆ ಇದನ್ನು ತಮ್ಮ ಮುಂದೆ ಇಡುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:- ನನ್ನದು ಇಸ್ಟಾರಿಕಲ್. ತಾವು 1943 ರಿಂದ 49 ರವರೆಗೆ ಏನೇನು ಆಗಿದೆ ಎಂದು ತಾವು ಹೇಳುತ್ತಿದ್ದೀರಿ. ಈ ಸಮಸ್ಯೆ ಉದ್ಭವವಾಗಿದ್ದು 1883 ರಲ್ಲಿ. ಆ ಪರಿಸ್ಥಿತಿಯನ್ನು ತಾವು ಚೆನ್ನಾಗಿ ತಿಳಿದುಕೊಂಡಿರಬೇಕು. ಆಮೇಲೆ ಏನು ಕೋರ್ಟ್ ಆರ್ಡರ್ಸ್ ಆಯಿತು ಅದೂ ಸಹ ತಮಗೆ ಚೆನ್ನಾಗಿ ಗೊತ್ತಿದೆ. ಆ ನಂತರ ಬಾಬರಿ ಮಸೀದಿ ಅದು ಬ್ರಿಟೀಷರ ಕಾಲದಲ್ಲಿ ಆಗ ಯಾರ ಆಡಳಿತದಲ್ಲಿ ಇತ್ತು ಎನ್ನುವುದು ತಮಗೆ ಗೊತ್ತಿದೆ. ಬ್ರಿಟೀಷರ ಕಾಲದಲ್ಲಿ ಸಿಂಧ್ಯಾ ಫ್ಯಾಮಿಲಿ ಒಂದೇ ಸುಮಾರು 250 ವರ್ಷಗಳವರೆಗೂ ಇತ್ತು. ಅದು ಆಗ ಮುಸ್ಲಿಂರ ಕೈಯಲ್ಲಿ ಇರಲಿಲ್ಲ. ಬ್ರಿಟಿಷರ ಕೈಯಲ್ಲಿ ಬಾಬರ್ ಮಸೀದಿ ಇತ್ತು. ಅಲ್ಲಿ ಪ್ರಾರ್ಥನೆ ಪ್ರತಿ ದಿವಸ ನಡೆಯುತ್ತಿತ್ತು. ಅದೂ ಸಹ ನಿಮಗೆ ಗೊತ್ತಿರಬಹುದು ಸುಮ್ಮನೆ ನಾನು ಹೇಳಿದೆ ನಿಮಗೆ.

ಶ್ರೀ ಎ.ಎಂ. ಹಿಂಡಸಗೇರಿ:- ಅವರಿಗೆ ಒಂದು ಕೋರ್ಟ್ ಆರ್ಡರ್ ಆಗಿದೆ. ಮುಸ್ಲೀಮರಿಗೆ, ನಾನ್ ಮುಸ್ಲಿಮರಿಗೆ ತಿಳುವಳಿಕೆ ಹೇಳಬೇಕು ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ ಹಿರಿಯರಾದಂಥ ಮಾನ್ಯ ರಾಮಸ್ವಾಮಿಯವರು ಮತ್ತು ಮಾನ್ಯ ಯಾಹ್ಯರವರು ಎರಡು ಪ್ರಶ್ನೆಗಳನ್ನು ನಮ್ಮ ಮುಂದಿಟ್ಟರು. ನಮ್ಮ ಇತಿಹಾಸವನ್ನು ತಾವು ತೆಗೆದು ನೋಡಿ. ಯಾವುದಾದರೂ ಒಂದು ಸಂದರ್ಭದಲ್ಲಿ ನಮ್ಮ ಕಡೆಯಿಂದ ಕೋರ್ಟ್ ಆದೇಶಗಳನ್ನು ಧಿಕ್ಕರಿಸಿ ಕೆಲಸ ಮಾಡುವಂಥ ಉದಾಹರಣೆ ಇದೆಯೇ?

ಇಲ್ಲೇ ಇದೆ ಪ್ರಭು ಶ್ರೀರಾಮಚಂದ್ರ ಅಲ್ಲಿ ಹುಟ್ಟಿದನೋ ಇಲ್ಲವೋ ಎನ್ನುವಂಥಾದ್ದನ್ನು ಈ ದೇಶದ ಯಾವುದೇ ನ್ಯಾಯಾಲಯ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದು ನಂಬಿಕೆಯ ಪ್ರಶ್ನೆ. ಏತಕ್ಕೆ ಕೋರ್ಟಿಗೆ ಹೊಗಿದ್ದರು? ಅವ್ಯವಹಾರ ನಡೆದಿದೆ, ತನಿಖೆಗೆ ಕಳುಹಿಸುವುದೆಂದರೆ ಅವರಪ್ಪನಾಣೆ ಅವನು ಸಿಗಲಿಲ್ಲ. ಅವನಿಗೆ ಶಿಕ್ಷೆ ಆಗಲಿಲ್ಲ. ಯಾವುದನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಕೆಲವು ಸಂದರ್ಭಗಳಲ್ಲಿ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಆಗುವುದಿಲ್ಲವೋ ಅಂಥ ಸಂದರ್ಭದಲ್ಲಿ ನಮ್ಮ ಕಾಲದಲ್ಲಿ ಏನೋ ತರೋಣವೆಂದು ಹೇಳಿ ಕೋರ್ಟಿಗೆ ಹಾಕಿಬಿಡುವುದು ವಾಡಿಕೆಯಾಗಿದೆ. ಭಾರತೀಯ ಜನತಾ ಪಾರ್ಟಿ ಪ್ರಭು ಶ್ರೀರಾಮಚಂದ್ರನ ಜನ್ಮಸ್ಥಾನ ಅಯೋಧ್ಯೆ ಎಂದು ಬಹಳ ಸ್ಪಷ್ಟವಾಗಿ ಹೇಳಿಕೊಂಡು ಬರುತ್ತಿರತಕ್ಕಂಥದ್ದು, ಇದು ನಂಬಿಕೆಯ ಪ್ರಶ್ನೆ, ಶ್ರದ್ಧೆಯ ಪ್ರಶ್ನೆ. ಇದು ಪೂರ್ವಜರು ಹೇಳಿರುವಂಥ ಪ್ರಶ್ನೆ. ಅದೇ ಪ್ರಶ್ನೆಯನ್ನು ಇತರೇ ಸಮಾಜದವರು ಆ ಒಂದು ಪವಿತ್ರ ಕ್ಷೇತ್ರದ ಬಗ್ಗೆ ಪ್ರಶ್ನೆ ಮಾಡಿ, ಇದನ್ನು ಪ್ರೂವ್ ಮಾಡಿ ಅಂತ ಹೇಳಿದರೆ ಪ್ರೂವ್ ಮಾಡುವುದಕ್ಕಾಗುವುದಿಲ್ಲ. ಆ ಪ್ರಶ್ನೆ ಕೇಳಿದರೆ ಅಕ್ಷಮ್ಯ ಅಪರಾಧ ಒಂದು ಕಡೆ ಆಗುತ್ತದೆನ್ನುವ ಪ್ರಶ್ನೆಯೂ ಸಹ ನನಗಿದೆ. ಆದುದರಿಂದ ಇವೊತ್ತು ನಾನು ಹೇಳುತ್ತಿದ್ದೇನೆ 1947 ಕ್ಕೆ ಮುಂಚೆ ತೆಗೆದುಕೊಳ್ಳಿ. ನಾನು ಕೇಳುತ್ತೇನೆ ಇವತ್ತು ಈ ದೇಶಕ್ಕೂ ಆ ಅಕ್ರಮಣಕಾರಿ ಬಾಬರಿ ಮಸೀದಿಗೂ ಏನು ಸಂಬಂಧ ಸ್ವಾಮಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೇ ಈಗ ತಾನೆ ಮಾನ್ಯ ಯಡಿಯೂರಪ್ಪನವರು ಹೇಳಿದರು. ಅವರು ಹಿಂದು, ಹಿಂದುಗಳ ಪರವಾಗಿ ಮಾತನಾಡುತ್ತಿದ್ದಾರೆ ಅದು ನಿಜ. ಈಗ ತಾನೆ ಅವರು ಹೇಳಿದರು ಒಂದು ಸಮಾಜದ ನಂಬಿಕೆ ಧರ್ಮದ ನಂಬಿಕೆ ಅಯೋಧ್ಯೆಯಲ್ಲಿಯೇ ರಾಮ ಹುಟ್ಟಿದ್ದು ಎನ್ನತಕ್ಕಂಥದ್ದನ್ನು ಏನಿದೆ ಅದನ್ನು ಪ್ರಶ್ನೆ ಮಾಡಲಿಕ್ಕೆ ಆಗುವುದಿಲ್ಲ. ಕೋರ್ಟ್ ಕೂಡ ಡಿಸೈಡ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಬೇರೆ ಸಮಾಜದವರದು ಏನಾದರೂ ಒಂದು ಧಾರ್ಮಿಕ ನಂಬಿಕೆ ಅದೇ ರೀತಿಯಲ್ಲಿದ್ದರೆ, ನಾನು ಅದನ್ನು ಕ್ವೊಶ್ಚನ್ ಮಾಡುವುದಿಲ್ಲವೆನ್ನತಕ್ಕಂಥ ಮಾತನ್ನು ಈಗ ತಾನೇ ಹೇಳಿದ್ದೀರಿ, ಹಾಗಾದರೆ ಆಕ್ರಮಣಕಾರಿ ಬಾಬರ್ ಎಂದು ಹೇಳಿ ಬೇರೆಯವರ ಭಾವನೆಯನ್ನು ಏತಕ್ಕೆ ಇಲ್ಲಿ ನೀವು ಕೆಣುಕುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ಘಜನಿ ಮಹಮದ್ ಬಗ್ಗೆ, ಘೋರಿ ಮಹಮದ್ ಬಗ್ಗೆ, ನಮ್ಮ ಧರ್ಮ ಕ್ಷೇತ್ರಗಳನ್ನು ಹಾಳು ಮಾಡುವಂಥವರ ಬಗ್ಗೆ ನಮ್ಮವರು ಎಂದು ನೀವು ಕರೆಯುವುದಾದರೆ ನಾನು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿಲ್ಲ. ಯಾರು ಹೊರದೇಶದಿಂದ ಆಕ್ರಮಣಕಾರಿಗಳಾಗಿ ಬಂದು ನಮ್ಮ ಧರ್ಮದ, ನಮ್ಮ ಸಂಸ್ಕೃತಿ, ನಮ್ಮ ಭಾವನಗೆಳನ್ನು ಕೆರಳಿಸುವುದಕ್ಕೆ ಪ್ರಯತ್ನ ಮಾಡಿದರೋ ಅವರು ನಮ್ಮ ಪೂರ್ವಜರು ಅಲ್ಲ. ಇದು ಬಹಳ ಸ್ಪಷ್ಟವಾದ ನನ್ನ ಅಭಿಪ್ರಾಯವನ್ನು ಹೇಳುವಂಥ ಪ್ರಯತ್ನ ಮಾಡಿದ್ದೇನೆ. ಇನ್ನೊಂದು ತಾವು ನಿಶ್ಚಯ ಮಾಡಿ. ದಿನಾಂಕ 1.2.1986 ರಲ್ಲಿ ಫೈಜಾಬಾದ್‌ನ ಜಿಲ್ಲಾ ನ್ಯಾಯಾಲಯ ಒಂದು ತೀರ್ಮಾನವನ್ನು ಮಾಡಿತ್ತು. ಅದು ಅಲ್ಲಿಯವರಿಗೆ ಗೊತ್ತಿರಬಹುದು. ಆ ಜನ್ಮ ಸ್ಥಾನದಲ್ಲಿ ಮುಜರಾಯಿ ಇಲಾಖೆ, ದೇವರ ದರ್ಶನಕ್ಕೆ ಅವಕಾಶವನ್ನು ಮಾಡಿಕೊಟ್ಟಿತ್ತು. ಅದರ ಬಗ್ಗೆ ಕಾಪಿ ಇದೆ. ಬೇಕಾದರೆ ಕಳುಹಿಸಿಕೊಡುತ್ತೇನೆ. ಇದು ಬಹಳ ಪ್ರಮುಖವಾದ ವಿಷಯ. ಈಗ ನಾವು ಕಣ್ಣು ಬಿಡುತ್ತಿದ್ದೇವೆ ರಾಜಕೀಯದಲ್ಲಿ. ಇನ್ನು ಮುಂದೆ ಇದನ್ನು ತಿಳಿದುಕೊಂಡು ಪ್ರಯತ್ನವನ್ನು ಬಹಳ ಜನ ಮಾಡಬೇಕಾಗಿದೆ. ಆದರೆ ಹಿರಿಯರು ಆದಂಥವರು ಆ ಕಡೆ ಕುಳಿತಿದ್ದಾರೆ. ದಯಮಾಡಿ ನಮ್ಮ ಸ್ನೇಹಿತರು ಮರೆಯಬಾರದು. ನಮ್ಮ ಪ್ರಧಾನಿ ಸನ್ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಂಥ ಕಾಲದಲ್ಲಿ ಯಾವ ಸ್ಥಳದಲ್ಲಿ ಮಂದಿರವನ್ನು ಕಟ್ಟಬೇಡಿ ಎಂದು ಹೇಳಿದ್ದರೋ ಅದೇ ಸ್ಥಳದಲ್ಲಿ ರಾಮ ಮಂದಿರವನ್ನು ಕಟ್ಟಲು ಶಿಲಾನ್ಯಾಸಕ್ಕೆ ಅನುಮತಿ ಕೊಟ್ಟರು. ಈ ಶಿಲಾನ್ಯಾಸಕ್ಕೆ ಅನುಮತಿಯನ್ನು ಕೊಟ್ಟರು ಎನ್ನುವುದನ್ನೂ ಮರೆಯಬೇಡಿ.

ಶ್ರೀ ಸಿ. ಬೈರೇಗೌಡ: ಇನ್ನೊಂದು ಸಾರಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮಗೆ ಅರ್ಥವಾಗುವ ಹಾಗೆ ಹೇಳುತ್ತೇನೆ. ಹೇಳುವಂಥಾದ್ದು ಇನ್ನೂ 3 ದಿವಸ ಆಗುವಷ್ಟು ಇದೆ. ಅದಕ್ಕೆ ಸಮಯ ಸಿಗುವುದಿಲ್ಲವೆಂದು ಶಾರ್ಟ್ ಆಗಿ ಹೇಳುತ್ತಿದ್ದೇನೆ ಅಷ್ಟೇ. ಶ್ರೀರಾಮ ಜನ್ಮ ಸ್ಥಾನದಲ್ಲಿ ಮಂದಿರ ನಿರ್ಮಾಣ ಮಾಡಲು ಶಿಲಾನ್ಯಾಸಕ್ಕೆ ಅಂದರೆ ಶಂಖುಸ್ಥಾಪನೆಗೆ ರಾಜೀವ್ ಗಾಂಧಿಯವರ ಕಾಲದಲ್ಲಿ ಅವಕಾಶ ಕೊಟ್ಟಿದ್ದರು ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇವರಾಜ್:– 89 ರಲ್ಲಿ ರಾಜೀವ್ ಗಾಂಧಿಯವರು ಪ್ರಧಾನಿಯಾಗಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಏನು ಸ್ವಾಮಿ ಇವರಿಗೆ ಹೇಳಬೇಕು ? ಯಾವಾಗ ಇದ್ದರು ಹೇಳಿಬಿಡಿ ಹಾಗಾದರೆ ? ಇನ್ನೊಂದು ಪ್ರಾಮುಖ್ಯವಾದ ಸಂಗತಿ, ಅವತ್ತು ಯಾವ ಲಾಲ್ ಕೃಷ್ಣ ಅದ್ವಾನಿ.

ಶ್ರೀ ಆರ್.ವಿ. ದೇವರಾಜ್:– 89 ರಲ್ಲಿ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಯಾಗಿರಲಿಲ್ಲ. ಸುಮ್ಮನೆ ಸುಳ್ಳು ಸುಳ್ಳು ಏಕೆ ಹೇಳುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಅಲ್ಲವೆಂದರೆ ನಾನು ಏನು ಮಾಡುವುದಕ್ಕಾಗುತ್ತದೆ ? ಅಧ್ಯಕ್ಷಿಣಿಯವರೆ ಇನ್ನೊಂದು ಬಹಳ ಪ್ರಾಮುಖ್ಯವಾದ ಸಂಗತಿ ಎಂದರೆ ಯಾವ ಲಾಲ್ ಕೃಷ್ಣ ಆದ್ವಾನಿ, ಮುರಳಿಮನೋಹರ ಜೋಷಿಯವರನ್ನು ಬಂಧನ ಮಾಡಿದಿರಿ, ಆ ಎಫ್.ಐ.ಆರ್. ಕಾಪಿ ಇಲ್ಲಿ ನನ್ನ ಹತ್ತಿರ ಇದೆ. ಏನೆಂದು ಇದೆ ? ಯಾರು ಕೇಸ್ ಬುಕ್ ಮಾಡಿದವರು ? ಈ ಎಫ್.ಐ.ಆರ್. ಪ್ರಥಮ ವರದಿಯಲ್ಲಿ ಶ್ರೀರಾಮ ಜನ್ಮಭೂಮಿ ಪೋಲೀಸ್ ಠಾಣೆ ಎಂದು ಇದೆ. ಅಂದರೆ ನಮ್ಮ ರಾಮ ಮಂದಿರ ಜನ್ಮಸ್ಥಾನದಿಂದ 50 ಅಡಿ ದೂರದಲ್ಲಿ ಪಕ್ಕದಲ್ಲಿ ಏನು ಪೋಲೀಸ್ ಸ್ಟೇಷನ್ ಇದೆ ? ಆ ಪೋಲೀಸ್ ಸ್ಟೇಷನ್ ಹೆಸರು ರಾಮ ಜನ್ಮ ಭೂಮಿ ಪೋಲೀಸ್ ಸ್ಟೇಷನ್, ಆ ಪೋಲೀಸ್ ಸ್ಟೇಷನ್‌ಗೆ ಬೋರ್ಡ್ ಇದೆ. ಅಂದರೆ ಇವತ್ತು ಯಾವುದು ರಾಮನ ಜನ್ಮ ಸ್ಥಾನ ಅಲ್ಲವೆಂದು ಹೇಳಿ ಕೂಗುವಂಥ ಪ್ರಯತ್ನ ಈ ದೇಶದಲ್ಲಿ ನಡೆಯುತ್ತಿದೆಯೋ ಆ ಪೋಲೀಸ್ ಸ್ಟೇಷನ್‌ಗೆ ರಾಮ ಜನ್ಮ ಭೂಮಿ ಸ್ಥಾನದ ಪೋಲೀಸ್ ಸ್ಟೇಷನ್ ಎಂದು ಇದೆ. ಯಡಿಯೂರಪ್ಪ ಈ ಹೆಸರನ್ನು ಕೊಟ್ಟಿದ್ದನೆ ? ಲಾಲ್ ಕೃಷ್ಣ ಆದ್ವಾನಿಯವರು ಕೊಟ್ಟಿದ್ದರೇನು ? ಅಂದರೆ ಆ ಪೋಲೀಸ್ ಸ್ಟೇಷನ್ ಆದ ಮೇಲೆ ರಾಮ ಜನ್ಮ ಸ್ಥಾನದ ಪೋಲೀಸ್ ಸ್ಟೇಷನ್ ಎಂದು ಅವತ್ತಿನ ಕಾಂಗ್ರೆಸ್ ಸರ್ಕಾರ ಕೊಟ್ಟಿತ್ತು. ತಪ್ಪೆಂದರೆ ನಾನು ಅದಕ್ಕೆ ಜವಾಬ್ದಾರಿಯಲ್ಲ. ಇತಿಹಾಸ ಇದೆ, ಅದನ್ನು ನಾನು ಹೇಳುತ್ತಿದ್ದೇನೆ. ಇನ್ನು ತಮಗೆ ಗೊತ್ತಿದೆ ದೇಶಪಾಂಡೆಯವರು ಹೇಳಿದರು, ನಾನೂ ಅಯೋಧ್ಯೆಗೆ ಹೋಗಿ ಬಂದೆ ಎಂದು. ನಾನು ದೇಶಪಾಂಡೆಯವರನ್ನು ಪ್ರಾಮಾಣಿಕವಾಗಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ, ತಾವು ಹೇಳಿ. ನೀವು ಹೋಗಿದ್ದರಲ್ಲಾ, ಆ 3 ಗೊಮ್ಮಟ ಇತ್ತಲ್ಲಾ ? ರಾಮನ ಮೂರ್ತಿ ಇತ್ತಲ್ಲಾ ? ಎಡಕ್ಕೆ, ಬಲಕ್ಕೆ ಇನ್ನೂ ಏನಾದರೂ ಇತ್ತೇ ? ಪೂಜೆ ನಡೆಯುತ್ತಿತ್ತು. ಅದರ ಪದ್ಧತಿ ಏನೋ ಇರಬಹುದು. ಆ ಪದ್ಧತಿಯಲ್ಲಿ ಬರೀ ಕುಂಕುಮ ಕೊಡುತ್ತಿದ್ದರೋ ತೀರ್ಥ ಕೊಡುತ್ತಿದ್ದರೋ ? ಅದು ಸರಿಯೋ ? ತಪ್ಪೋ ? ನನಗೆ ಗೊತ್ತಿಲ್ಲ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ, ಆ ಸ್ಥಳದಲ್ಲಿ ಒಳಗಡೆ ಅಲ್ಲಿ ನಮಾಜು ನಡೆಯುವಂಥ ಮಸೀದಿ ಆಕಾರದ ಯಾವುದಾದರೂ ಗುರುತು ಸಿಕ್ಕಿತೇ ? ನೀವಷ್ಟೇ ಅಲ್ಲ, ಸನ್ಮಾನ್ಯ ಚೌಹಾನ್‌ರವರು ಹೋಮ್ ಮಿನಿಸ್ಟರ್ ಹೋಗಿದ್ದರು ಮೊದಲ ಬಾರಿಗೆ 1992 ಆಗಸ್ಟ್, ಬೊಮ್ಮಾಯಿಯವರು ಹೋಗಿ ಬಂದು ಆದಮೇಲೆ, ಆ ಸಮಯದಲ್ಲಿ ಒಳಗಡೆ ಹೋದರು.

ಶ್ರೀ ಆರ್.ವಿ. ದೇಶಪಾಂಡೆ:– ಮಸೀದಿ ಇತ್ತಲ್ಲವೇ ? ಮಸೀದಿ ಇಲ್ಲವೆಂದರೆ ಹೇಗೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಸ್ಟ್ರಕ್ಚರ್ ಇತ್ತು ಎಂದು ನಾನು ಹೇಳುತ್ತೇನೆ. ಅಂದರೆ,

ಶ್ರೀ ಆರ್.ವಿ. ದೇಶಪಾಂಡೆ:– 1948ರಲ್ಲಿ ಅಲ್ಲಿ ನಮಾಜು ಮಾಡುತ್ತಿದ್ದುದು ಜಗತ್ತಿಗೇ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುವುದು, ಆ ಕಟ್ಟಡವನ್ನು ನೀವು ಮಸೀದಿ ಎಂದು ಕರೆಯುವುದಾದರೆ ನಿಮ್ಮ ಅಜ್ಞಾನಕ್ಕೆ ನನ್ನ ವಿರೋಧ ಇಲ್ಲ. ಇದು ಅಜ್ಞಾನದ ಪರಮಾವಧಿ I cannot help. ಯಾವಾಗಲೂ ಬಾಯಿಂದ ಹೇಳುವುದು ಬಿಟ್ಟರೆ, ಹೃದಯಾಂತರಾಳದಿಂದ ಸತ್ಯವನ್ನು ಒಪ್ಪಿಕೊಳ್ಳುವುದು ಬೇರೆ. ಎರಡಕ್ಕೂ ವ್ಯತ್ಯಾಸ ಇದೆ ತಾನೆ? ಸನ್ಮಾನ್ಯ ಚೌಹಾನ್‌ರವರು ಸ್ಪಾಟ್ ಇನ್ಸ್‌ಪೆಕ್ಷನ್‌ಗೆ ಹೋದರು, ಎಲ್ಲಾ ಅಧಿಕಾರಿಗಳು ಜೊತೆಗೆ ಹೋದರು. ಚೌಹಾನ್‌ರವರು ಹೋದಾಗ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿತ್ತು. ತಾವೂ ನೋಡಿರಬಹುದು. ಅಧಿಕಾರಿಗಳ ಜೊತೆಗೆ ಹೋಗಿ ಆ ದೇವಸ್ಥಾನ, ರಾಮ ದರ್ಶನ ಎಲ್ಲಾ ಆಯಿತು. ಅಧಿಕಾರಿಗಳನ್ನು ಈ ದೇಶದ ಹೋಮ್ ಮಿನಿಸ್ಟರ್ ಏನು ಕೇಳುತ್ತಾರೆ? ನನ್ನನ್ನು ಬಾಬರ್ ಮಸೀದಿಗೆ ಕರೆದುಕೊಂಡು ಹೋಗಿ ಎಂದು, ಅಧಿಕಾರಿಗಳು ತಲೆ ಕೆರೆದುಕೊಂಡು ಹಿಂದು ಮುಂದು ನೋಡಿದರು.

ಶ್ರೀ ಆರ್.ವಿ. ದೇಶಪಾಂಡೆ:– ಬಿ.ಜೆ.ಪಿ.ದು ಇದೇ ಜಾಣತನ. ಚೌಹಾನ್ ನಿಮಗೆ ಹೇಳುವುದಕ್ಕೆ ಬಂದರೇ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಸ್ವಲ್ಪ ತಡೆಯಿರಿ ದೇಶಪಾಂಡೆಯವರೆ, ಒಂದು ಕೆಲಸ ಮಾಡಿ ಇವತ್ತು, ಹೋಮ್ ಮಿನಿಸ್ಟರ್ ಚೌಹಾನ್‌ರವರು ಈ ರೀತಿ ಪ್ರಶ್ನೆ ಕೇಳಿ ನಗೆಪಾಟಲಾಗಿ ಇದೇ ಮಸೀದಿ ಎಂದು ಅಧಿಕಾರಿಗಳು ಹೇಳಿದರು ಎನ್ನುವ ಪ್ರೆಸ್ ಕಟಿಂಗ್ಸ್ ನಾನು ನಿಮಗೆ ಕೊಟ್ಟರೆ will you withdraw all your charges? ಯಡಿಯೂರಪ್ಪ ಹೇಳಿದರೆ ಗೌರ್ವನಮೆಂಟ್ ರೆಕಾರ್ಡ್ ತೆಗೆಸಿ,

ಛೇರ್ಮನ್:– ಯಡಿಯೂರಪ್ಪನವರೇ ನೀವು ಅವರನ್ನು ನೋಡಿ ಮಾತನಾಡಬೇಡಿ. ದಯವಿಟ್ಟು ಈ ಕಡೆ ನೋಡಿ ಮಾತನಾಡಿದರೆ ಒಳ್ಳೆಯದು. ನೀವು ನೀವೇ ಕಾನ್‌ವರ್‌ಸೇಷನ್ ಮಾಡುವುದು ಸರಿಯಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಕಾಂಗ್ರೆಸ್‌ನವರು, ಜನತಾ ದಳದವರು, ಜನತಾ ಪಕ್ಷದವರು, ಹೀಗೆ ನೀವೆಲ್ಲರೂ ಒಂದಾದರೂ ಕೂಡ ನಮ್ಮನ್ನು ನೀವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ. ನಮ್ಮ ಈ ಒಂದು ಜಾತ್ಯಾತೀತ ಸಮಾಜ ವ್ಯವಸ್ಥೆಯ ಬಗ್ಗೆ ನಮಗೆ ಪಾಠ ಹೇಳುತ್ತಿರುವವರನ್ನು ನಾನು ಕೇಳಬಯಸುವುದೇನೆಂದರೆ, ತಾವುಗಳು ಹಿಟ್ಲರ್‌ನ ವಿಚಾರವನ್ನು ತಿಳಿದುಕೊಂಡಿದ್ದೀರಿ. ಆತನಿಗೆ ಗೊಬೆಲ್ ಎಂಬ ಒಬ್ಬ ವಾರ್ತಾ ಮಂತ್ರಿ ಇದ್ದನಂತೆ. ಅವನ ಕೆಲಸ ಅಂದರೆ ಒಂದು ಸುಳ್ಳನ್ನು ನೂರು ಬಾರಿ ಜನರಿಗೆ ಹೇಳಿ, ಅದನ್ನು ಸತ್ಯ ಎಂದು ನಂಬಿಸುವುದು. ಅದು ಅವನ ಜಾಯಮಾನ ಕೂಡ ಆಗಿತ್ತು.

(ನಗು)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇವೊತ್ತು ಬೆಳಿಗ್ಗೆ ನಾವೆಲ್ಲರೂ ವಿಧಾನ ಪರಿಷತ್‌ನಲ್ಲಿ ಪೂಜ್ಯ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಭಾಗವಹಿಸಿದ್ದಾಗ, ನಮ್ಮ ದೇಶದ ಹಿರಿಯ ಮುಖಂಡರುಗಳಾದ ಶ್ರೀಮಾನ್ ನಿಜಲಿಂಗಪ್ಪನವರು, ಡಾ: ಹೆಚ್. ನರಸಿಂಹಯ್ಯನವರು ಇದು ಸಬ್ ಕೋ ಸನ್ಮತಿ ದೇ ಭಗವಾನ್ ಎಂದು ಹೇಳಿದರು. ಮಹಾತ್ಮಾ

ಗಾಂಧೀಜಿಯವರು ಈ ದೇಶದ ಐತಿಹಾಸಿಕ ದೃಷ್ಟಿಯಿಂದ ನಮಗೆಲ್ಲರಿಗೂ ಪ್ರೇರಣೆಯನ್ನು ಕೊಡಲಿ ಎಂದು ಅವರು ಹೇಳಿದ್ದು ತಮಗೆಲ್ಲರಿಗೂ ಜ್ಞಾಪಕದಲ್ಲಿರಬಹುದೆಂದು ಅಂದುಕೊಂಡಿದ್ದೇನೆ. ಆದರೆ ಮಾನ್ಯ ಯಡಿಯೂರಪ್ಪನವರು ಮಾತ್ರ ಯಾರು ಏನು ಬೇಕಾದರೂ ಹೇಳಿಕೊಳ್ಳಲಿ ನಾವು ಮಾತ್ರ ಬದಲಾವಣೆಯಾಗುವುದಿಲ್ಲ, ನಾವು ಇರುವುದು ಹೀಗೇಯೇ, ನೀವುಗಳು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಅದನ್ನು ಕೇಳಿ ನನಗೊಂದು ವಿಚಾರ ಜ್ಞಾಪಕಕ್ಕೆ ಬರುತ್ತಾ ಇದೆ. ಮಹಾತ್ಮ ಗಾಂಧೀಜಿಯವರು ಪಕ್ಕದಲ್ಲಿ ಮೂರು ಕೋತಿಗಳನ್ನು ಇಟ್ಟು ಕೊಂಡಿದ್ದರು. ಅವುಗಳ ಪ್ರಕಾರ ಕೆಟ್ಟದ್ದನ್ನು ನಾನು ಕೇಳಲಾರೆ, ಕೆಟ್ಟದ್ದನ್ನು ನಾನು ನೋಡಲಾರೆ, ಕೆಟ್ಟದ್ದನ್ನು ನಾನು ಹೇಳಲಾರೆ ಎಂದು ಆಗುತ್ತದೆ. ಆದರೆ ಇವರು ಕೆಟ್ಟದ್ದನ್ನು ಹೇಳುವುದನ್ನು ಬಿಡಲಾರೆ, ಕೆಟ್ಟದ್ದನ್ನು ಮಾಡುವುದನ್ನು ಬಿಡಲಾರೆ, ಕೆಟ್ಟದ್ದನ್ನು ನೋಡುವುದನ್ನು ಬಿಡಲಾರೆ ಎಂಬಂತೆ ಮಾಡುತ್ತಿದ್ದಾರೆ. ಹಾಗೆ ಇವರು ಪ್ರತಿಜ್ಞೆ ಮಾಡಿದ್ದಾರೆ ಎಂದು ಕಾಣುತ್ತದೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ನಮ್ಮ ಸ್ಥಿತಿ ಏನಾಗಿದೆ ಅಂದರೆ, ನಾವು ಮೂರು ಕೋತಿಗಳನ್ನು ಒಟ್ಟಿಗೆ ನೋಡುತ್ತಾ ಇದ್ದೇವೆ. ಕಾಂಗ್ರೆಸ್, ಜನತಾ ದಳ ಮತ್ತು ಜನತಾಪಕ್ಷ ಹೀಗೆ ಮೂರು ಕೋತಿಗಳನ್ನು ಒಟ್ಟಿಗೆ ನೋಡುವ ಪರಿಸ್ಥಿತಿ ನಮಗೆ ಬಂದಿದೆ.

ಶ್ರೀ ಸಿ. ಬೈರೇಗೌಡ:– ಉಪಾಧ್ಯಕ್ಷಿಣಿಯವರೇ, ಮಾನ್ಯ ಈಶ್ವರಪ್ಪನವರು ಬಳಸಿರತಕ್ಕಂಥ ಪದವನ್ನು ದಯಮಾಡಿ ಅವರು ವಾಪಸ್ ಪಡೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:– ಇವರ ಮಧ್ಯೆ ನಮಗಂತೂ ಶಿವ ಶಿವಾ, ರಾಮ ರಾಮಾ ಸಾಕಾಗಿ ಹೋಗಿದೆ.

ಶ್ರೀ ಆರ್.ವಿ. ದೇಶಪಾಂಡೆ:– ನಿಮಗೆ ಶಿವ ಬೇಕೋ, ರಾಮ ಬೇಕೋ ....

ಶ್ರೀ ವಾಟಾಳ್ ನಾಗರಾಜ್:– ನಮಗೆ ಶಿವನೂ ಬೇಕು, ರಾಮನೂ ಬೇಕು, ಆಂಜನೇಯನೂ ಬೇಕು, ರಾವಣನೂ ಬೇಕು. 388 ಕೋಟಿ ದೇವರುಗಳೆಲ್ಲರೂ ಬೇಕು.

ಶ್ರೀ ಸಿ. ಬೈರೇಗೌಡ:– ಯಾರ್ಯಾರು ಓಟು ಕೊಡುತ್ತಾರೆ, ಅವರೆಲ್ಲರ ದೇವರುಗಳೂ ಬೇಕಲ್ಲವೆ ? ....

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸಿಂಧ್ಯರವರು ಒಂದು ಮಾತನ್ನು ಹೇಳಿದ್ದಾರೆ. ನಿಜಲಿಂಗಪ್ಪನವರ ಮಾತುಗಳು ನಾವುಗಳೆಲ್ಲರೂ ಇವೊತ್ತು ನಿಜವಾಗಿಯೂ ನಮ್ಮ ನಮ್ಮ ಮನಸ್ಸಿಗೆ ಪ್ರಶ್ನೆಗಳನ್ನು ಹಾಕಿಕೊಳ್ಳುವಂಥ ಮಾತುಗಳಾಗಿವೆ. ನಮ್ಮ ದೇಶವನ್ನು ಯಾವ ರೀತಿಯಾಗಿ ರಾಜಕೀಯವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬ ಬಗ್ಗೆ ಅವರು ಬೆಳಕನ್ನು ಚೆಲ್ಲಿದ್ದಾರೆ. ಮಹಾತ್ಮ ಗಾಂಧೀಯವರ ವಿಚಾರವನ್ನು ಯಾವ ರೀತಿಯಾಗಿ ಸಂಪೂರ್ಣವಾಗಿ ತಿಲಾಂಜಲಿ ಇಟ್ಟಿದ್ದಾರೆ ಎಂಬುದನ್ನು ಕೂಡ ಹೇಳಿದ್ದಾರೆ. ದೇಶವನ್ನು ಯಾವ ರೀತಿಯಾಗಿ ಅಧೋಗತಿಯ ಕಡೆಗೆ ತೆಗೆದುಕೊಂಡು ಹೋಗಿದ್ದಾರೆ ಎಂಬ ಬಗ್ಗೆ ಅವರು ತುಂಬಾ ಗಂಭೀರವಾಗಿ ಹೇಳಿದಂಥ ಮಾತುಗಳು ಕೇವಲ ಕಾಂಗ್ರೆಸ್‌ನವರನ್ನು ಕುರಿತು ಹೇಳಿದ ಮಾತುಗಳು ಎಂದು ನಾನಂತೂ ಭಾವಿಸುವುದಿಲ್ಲ. ಇದು ಯಾವ ಪಕ್ಷದವರಿಗೂ ಸೀಮಿತವಾದ ಮಾತುಗಳಲ್ಲ, ಇದು ಎಲ್ಲರಿಗೂ ಅನ್ವಯವಾಗುವ ಮಾತುಗಳು ಎಂದು ಭಾವಿಸುತ್ತೇನೆ. ಆದರೆ ಯಾರು ಮಹಾತ್ಮ ಗಾಂಧೀಯವರ ಅನುಯಾಯಿಗಳು ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದು, ಆ ಮಹಾನುಭಾವರ ಹೆಸರನ್ನು ಹೇಳುತ್ತಾ ಇದ್ದಾರೋ ಹಾಗೆಯೇ ಆ ಪೂಜ್ಯ ಮಹಾತ್ಮರ ಹೆಸರನ್ನು ಹೇಳುವಂಥ ನೈತಿಕ ಹಕ್ಕನ್ನು ನೀವು ಸಂಪೂರ್ಣವಾಗಿ ಕಳೆದುಕೊಂಡಿದ್ದೀರಿ ಎಂದು ಮಾನ್ಯ ನಿಜಲಿಂಗಪ್ಪನವರು ಮಾರ್ಮಿಕವಾಗಿ ಹೇಳಿದ್ದಾರೆ. ಇದನ್ನು

ತಾವುಗಳು ಅರ್ಥಮಾಡಿಕೊಳ್ಳುವ ಶಕ್ತಿ ಇದ್ದರೆ ಮಾಡಿಕೊಳ್ಳಿ. ಇಲ್ಲವಾದಲ್ಲಿ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಾನು ಕಾಂಗ್ರೆಸ್, ಜನತಾದಳದ ಸ್ನೇಹಿತರಲ್ಲಿ ಹೇಳಿಕೊಳ್ಳುವುದೇನೆಂದರೆ, ಯಾವ ರೀತಿಯಲ್ಲಿ ಗೋಬೆಲ್‌ನು ಒಂದು ಸುಳ್ಳನ್ನು ನೂರು ಬಾರಿ ಹೇಳಿ, ಅದನ್ನು ಜನರು ಸತ್ಯ ಎಂದು ನಂಬುವಂತೆ ಮಾಡಲು ಪ್ರಯತ್ನಪಟ್ಟನೋ ಅದೇ ರೀತಿಯಾಗಿ ನೀವುಗಳು ಈ ದೇಶದ ಜನರನ್ನು ನಂಬಿಸಲು ಹೊರಟಿದ್ದೀರಿ. ಸತ್ಯಕ್ಕೆ ಅಪಚಾರ ಮಾಡಿದ್ದೀರಿ. ಈ ದೇಶವನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡಿದ್ದೀರಿ. ಈ ದೇಶದಲ್ಲಿ ಹಿಂದು, ಮುಸಲ್ಮಾನ್, ಕ್ರಿಶ್ಚಿಯನ್ನರು ಸಹೋದರತ್ವದಿಂದ ಬಾಳಲಾರದ ರೀತಿಯಲ್ಲಿ ಒಂದು ವಿಚಿತ್ರ ಪರಿಸ್ಥಿತಿಯನ್ನು ತಂದಿದ್ದೀರಿ.

ಶ್ರೀ ಎಂ. ನಾರಾಯಣ ಸ್ವಾಮಿ:– ಇವರುಗಳು ಮಾತ್ರ ಸತ್ಯ ಹರಿಶ್ಚಂದ್ರನ ವಂಶದವರು ....

ಶ್ರೀ ವಾಟಾಳ್ ನಾಗರಾಜ್:– ಇದು ಹಣ್ಣು ತಿಂದವನು ನುಣುಚಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಕೊಂಡ ಎಂಬಂತಾಗಿದೆ.

ಉಪಾಧ್ಯಕ್ಷಿಣಿಯವರು:– ಅವರಿಗೆ ಮಾತನಾಡಲು ಬಿಡಿ, ಯಡಿಯೂರಪ್ಪನವರು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್:– ನಾನು ಅವರಿಗೆ ರಾಮಶಕ್ತಿಯನ್ನು ತುಂಬುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:– ನೀವು ಅವರಿಗೆ ರಾಮಶಕ್ತಿಯನ್ನು ತುಂಬುತ್ತೀರೋ ಅಥವಾ ....?

4.35 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇನ್ನು ಹಿರಿಯರಾದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ವೀರೇಂದ್ರ ಪಾಟೀಲರು ಮಾತನಾಡಿದ್ದಾರೆ. ನಾನು ಒಬ್ಬ ಬಿಜೆಪಿ ವಕ್ತಾರನಾಗಿ ಆ ಬಗ್ಗೆ ಪ್ರಸ್ತಾಪ ಮಾಡುವಂಥ ಅಗತ್ಯ ಇಲ್ಲ ಆದರೆ ಒಂದು ಮಾತಂತೂ ನಿಜ. ಉತ್ತರ ಪ್ರದೇಶದ ಸರ್ಕಾರವನ್ನು ವಜಾ ಮಾಡಿದಿರಿ, ನಿಜ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಆ ಮುಖಂಡರಿಗೆ ಅಲ್ಲಿದ್ದ ಮುಖ್ಯಮಂತ್ರಿ ನಿಮ್ಮ ದೃಷ್ಟಿಯಿಂದ ಸರಿಯಾಗಿ ನಡೆದುಕೊಳ್ಳಲಿಲ್ಲವೆಂದು ತಾವು ವಜಾ ಮಾಡಿದ್ದೀರಾ, ಜನ ತೀರ್ಮಾನ ಮಾಡಲಿ, ಅದು ಬೇರೆ ವಿಷಯ. ಆದರೆ ಪ್ರಜಾತಂತ್ರದ ವ್ಯವಸ್ಥೆಯ ಬಗ್ಗೆ ಮಾತನಾಡುವಂತಹ ನನ್ನ ಕಾಂಗ್ರೆಸಿನ ಸ್ನೇಹಿತರಲ್ಲಿ ಕೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ರಾಜಸ್ಥಾನ್–ಎಲ್ಲಿ ಕೆಲವಡೆ 3/4 ಮೆಜಾರಿಟಿ ನಮಗಿತ್ತು; ಜನರಿಂದ ಆಯ್ಕೆಯಾದ ಆ ಸರ್ಕಾರಗಳನ್ನು ತಾವು ಯಾವ ಕಾರಣದಿಂದ ವಜಾ ಮಾಡಿದಿರಿ, ಅದರಿಂದ ಮುಂದೆ ಬರುವ ದಿವಸಗಳಲ್ಲಿ ಪ್ರಜಾತಂತ್ರದ ವ್ಯವಸ್ಥೆ ಬಗ್ಗ ಮಾತನಾಡುವ ಹಕ್ಕು ನಿಮಗಿದೆಯೇ? ಈ ಕುಂಟು ನೆಪವನ್ನು ಮಾಡಿಕೊಂಡು ಯಾವ ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಬೇರೂರುತ್ತಾ ಇತ್ತು, ಮತ್ತು ಇನ್ನು 5 ವರ್ಷ ಪೂರ್ಣ ಅಧಿಕಾರದಲ್ಲಿ ಮುಂದುವರೆದರೆ ಶಾಶ್ವತವಾಗಿ ಕಾಂಗ್ರೆಸಿನ ಬೇರುಗಳು ಕಿತ್ತುಕೊಂಡು ಹೋಗುತ್ತದೆ ಎನ್ನುವ ಭಯದಿಂದ ಯಾವುದೇ ಕಾರಣ ಇಲ್ಲದೆ ಈ ಮೂರು ಸರ್ಕಾರಗಳನ್ನು ವಜಾ ಮಾಡುವಂತಹ ಪಾಪದ ಕೆಲಸ ಮಾಡಿದಿರಿ, ಪ್ರಜಾತಂತ್ರದ ಕತ್ತು ಹಿಚುಕುವಂತಹ ಕೆಲಸ ತಾವು ಮಾಡಿದಿರಿ. ಏಕೆ ಹೀಗಾಯಿತು? ಈ ದೇಶದ ಪ್ರಧಾನಿ ನರಸಿಂಹರಾಯರು ಬಲಿಪಶುಗಳಾದರು. ಅರ್ಜುನ್ ಸಿಂಗರ ಉದ್ದೇಶ, ಏನಾದರೂ ಮಾಡಿ ಈ ಮನುಷ್ಯನನ್ನು ಇಕ್ಕಟ್ಟಿನಲ್ಲಿ ಸಿಗಿಸಬೇಕು, ಏಕೆ ಕುರ್ಚಿ ಆಟ, ಎಷ್ಟು ಬೇಗ ಈ ದೇಶದ ಪ್ರಧಾನಿ ಈ ರೀತಿ ಗೊಂದಲದಲ್ಲಿ ಸಿಕ್ಕಿಕೊಂಡರೆ ನಾನೇ ಈ ದೇಶದ ರಕ್ಷಕ, ಆರ್‌ಎಸ್‌ಎಸ್, ಬಿಜೆಪಿ ವಿರೋಧಿ ಎಂದು ಹೇಳಿಕೊಂಡು ಅಧಿಕಾರದಲ್ಲಿ ಬರುವಂತಹ ಒಂದು ಷಡ್ಯಂತ್ರ ಏನಿತ್ತು ಅದಕ್ಕೆ ಈ ದೇಶದ ಪ್ರಧಾನಿಯವರು ಬಲಿಪಶುವಾದರು.

(ಗೊಂದಲ)

ಶ್ರೀ ಸಿ. ಬೈರೇಗೌಡ: ನಾನು ಆಗಲೇ ಸ್ಪಷ್ಟವಾಗಿ ಹೇಳಿದೆ. ಒಂದು ಕಡೆ ಬಿಜೆಪಿ ಒಂದು ಕಡೆ ನರಸಿಂಹರಾಯರು ಮತ್ತು ಕಾಂಗ್ರೆಸ್–ಇವರೆಲ್ಲ ಕೂಡ ಒಂದೇ ಎಂದು. ಅದನ್ನು ಸಮರ್ಥನೆ ಮಾಡುವ ರೀತಿಯಲ್ಲಿ ಮಾತಾಡುತ್ತಿದ್ದಾರೆ. ಪಾಪ ಯಡಿಯೂರಪ್ಪನವರು ನರಸಿಂಹರಾಯರ ಬಗ್ಗೆ ಸಹಾನುಭೂತಿ ತೋರದೆ ಇನ್ನಾರ ಬಗ್ಗೆ ತೋರಿಸಬೇಕು. ಪಾಪ, ಸಹಾನುಭೂತಿ ತೋರಿಸಲಿ, ನೀವೂ ಒಂದೇ ಅವರೂ ಒಂದೇ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ನಂಬಿಕೊಂಡು ಬಂದಿರೋದು ಕೇಂದ್ರದಲ್ಲಿ ಯಾವುದೇ ಸರ್ಕಾರವಿರಲಿ ಯಾವುದೇ ಪ್ರಧಾನಿಯಿರಲಿ ರಾಜ್ಯದಲ್ಲಿ ಯಾವುದೇ ಸರ್ಕಾರ ಇರಲಿ ಯಾರೇ ಮುಖ್ಯಮಂತ್ರಿ ಇರಲಿ ಅದು ನಮ್ಮದೇ ಸರ್ಕಾರ, ಜನರಿಂದ ಆಯ್ಕೆಯಾದ ಸರ್ಕಾರ. ಅವರ ಈ ಪರಿಸ್ಥಿತಿ ಈ ರೀತಿ ವಿಚಿತ್ರ ಸ್ಥಿತಿಯಲ್ಲಿ ಸಿಕ್ಕಿಕೊಂಡಾಗ ಸತ್ಯ ಹೇಳುವುದು. ಧರ್ಮ ವೀರೇಂದ್ರ ಪಾಟೀಲ್ ನಾವೂ ಒಂದೂ ಎಂದು ಹೇಳುತೀರಾ ? ರಾಮಕೃಷ್ಣ ಹೆಗಡೆಯವರು ನಾವೂ ಒಂದಾಗಿದ್ದೇವೆ ಎಂದು ಹೇಳ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ:– ಇವತ್ತು ಸತ್ಯ ಹರಿಶ್ಚಂದ್ರರಾಗಿ ಬಿಟ್ಟರು ನಾವು ಇವರಿಗೆ ಮತ್ತಾವ ಬಿರುದೂ ಇವರಿಗೆ ಕೊಡುವ ಹಾಗಿಲ್ಲ. ಸತ್ಯ ಹರಿಶ್ಚಂದ್ರರು ಅಂತ ಡಿಗ್ರಿ ಕೊಟ್ಟು ಕಳಿಸಬಹುದು ಇವರಿಗೆ.

ಶ್ರೀ ವಾಟಾಳ್ ನಾಗರಾಜ್:– ಸತ್ಯಹರಿಶ್ಚಂದ್ರ ನಾಟಕದಲ್ಲಿ ಸತ್ಯಹರಿಶ್ಚಂದ್ರ ಪಾತ್ರವನ್ನು ಶ್ರೀ ಯಡಿಯೂರಪ್ಪನವರು ಮಾಡಿದಂತೆ ಇದು ನಡೀತಿದೆ.

ಶ್ರೀ ಬಿ.ಎಚ್. ಬನ್ನಿಕೋಡ್:– ರಾಮಕೃಷ್ಣ ಹೆಗಡೆಯವರು ಹೇಳಿದ್ದುದು ನಿಮ್ಮ ಪರವಾಗಿ ಅಲ್ಲ ಅವರ ನಿಮ್ಮ ವಿಚಾರಗಳು ಒಂದೇ ಎನ್ನುವ ಭಾವನೆಯನ್ನು ನೀವು ತರ್ತಾ ಇದ್ದೀರಿ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ರಾಜಕೀಯ ಪಕ್ಷಗಳು ಸ್ವಯಂ ಪ್ರೇರಣೆಯಿಂದ ನಿರ್ಬಂಧವನ್ನು ಹಾಕಿಕೊಳ್ಳಬೇಕು, ಜಾತೀಯತೆ ಮಾಡಬಾರದೆಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಜಾತೀಯತೆ ಮಾಡುವ ರಾಜಕೀಯ ಪಕ್ಷಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ ಅವರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸತ್ಯ ಹೇಳಿದಿರಿ ನೀವು, ಜಾತೀಯತೆ ಯಾರು ಮಾಡುತ್ತಿದ್ದಾರೆ ಅಲ್ಲಿಗೆ ಇನ್ನೂ ನಾನು ಬಂದೇ ಇಲ್ಲ; ಆದರೆ ಒಂದು ಮಾತು, ಯಾವ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಬ್ಯಾನ್ ಮಾಡಿದ್ದೀರಿ ಅದರಿಂದ ವಿನಾಕಾರಣ ಈ ಬಗ್ಗೆ ನಮ್ಮ ಅನೇಕ ಕಾಂಗ್ರೆಸಿನ ಸ್ನೇಹಿತರಿಗೆ ಚರಿತ್ರೆಯಲ್ಲಿ ಆಗಿರುವ ಅನೇಕ ಘಟನೆಗಳ ಜ್ಞಾಪಕ ಇಲ್ಲ ಎಂದು ಹೇಳಲು ನಾನು ಬಯಸುತ್ತೇನೆ. ಲೋಕನಾಯಕ ಜಯಪ್ರಕಾಶನಾರಾಯಣರ ಜೊತೆಗೆ ನಾವು ಹೋರಾಟ ಮಾಡಿದೆವು. ಜೈಲಲ್ಲಿ ಕೊಳೆತೆವು. ಇದನ್ನು ನಮ್ಮ ಸ್ನೇಹಿತರು ಈ ಕಡೆ ಇರುವವರು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ಏಕೆಂದರೆ ಅವತ್ತು ನಾವು ನೀವು ಎಲ್ಲಾ ಒಂದೇ ಸರ್ಕಾರದಲ್ಲಿ ಇದ್ದೆವು. ಮೊರಾರ್ಜಿ ದೇಸಾಯಿಯವರ ಸರ್ಕಾರದಲ್ಲಿ ಇದ್ದೆವು. ಈ ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಲೋಕನಾಯಕ ಜಯಪ್ರಕಾಶ್ ನಾರಾಯಣರು ಅವರು ಸ್ವರ್ಗಸ್ಥರಾಗುವಂಥ ಒಂದು ಎರಡು–ಮೂರು ತಿಂಗಳ ಮುಂಚೆ ಪಾಟ್ನಾದಲ್ಲಿ ಒಂದು ಸಾರ್ವಜನಿಕ ಸಭೆ. ಅವರು ಅಲ್ಲಿ ಒಂದು ಮಾತನ್ನು ಹೇಳಿದರು, If R.S.S. is fascist, Jayaprakash Narayana is also fascist ಎಂದು. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ ಯಾವ ದೇಶದಲ್ಲಿ ಧರ್ಮಕ್ಕಾಗಿ, ಪ್ರಜಾತಂತ್ರದ ವ್ಯವಸ್ಥೆಯನ್ನು ಉಳಿಸುವುದಕ್ಕಾಗಿ ಯಾವ ಸಂಸ್ಥೆಗಳು ಕೆಲಸ ಮಾಡುತ್ತಿದೆಯೋ ಅಂಥ ಸಂಸ್ಥೆಗಳಿಗೆ ಕೆಟ್ಟ ಹೆಸರು ತರುವಂಥ ವ್ಯವಸ್ಥಿತವಾದ ಒಂದು ತಂತ್ರ ಏನು ನಡೆಯುತ್ತಿದೆ, ಅದನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಜವಹರಲಾಲ್ ನೆಹರು ಅವರು ಆರ್‌ಎಸ್‌ಎಸ್ ಅನ್ನು

ಬ್ಯಾನ್ ಮಾಡಿದರು, 1949 ರಲ್ಲಿ ಬೇಷರತ್ತಾಗಿ ಬ್ಯಾನನ್ನು ವಾಪಸ್ ತೆಗೆದುಕೊಂಡರು. ಏತಕ್ಕೆ? ಇತ್ತೀಚಿನ ದಿವಸದಲ್ಲಿ ಬಹಳ ದೂರ ಬೇಡಿ, ಪಂಜಾಬಿನ ಮುಖ್ಯಮಂತ್ರಿ ಬೇಹಂತಸಿಂಗ್ ಹೇಳುತ್ತಾರೆ, ವೈಕುಂಠರಾಜು ಅವರು ಮೊನ್ನೆ ವಾರಪತ್ರಿಕೆಯಲ್ಲಿ ಲಾಸ್ಟ್ ವೀಕ್ ಮ್ಯಾಗಜೈನ್‌ನಲ್ಲಿ ಹೇಳುತ್ತಾರೆ. ''ಪಂಜಾಬಿನಲ್ಲಿ ಆರ್‌ಎಸ್‌ಎಸ್ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಅಸಾಧ್ಯ ಎಂದು ಬೇಹಂತಸಿಂಗ್ ಹೇಳಿದ್ದಾರೆ. ಅದಕ್ಕೆ ಅವರು ನೀಡಿರುವ ಕಾರಣವೂ ಸಮರ್ಪಕವಾಗಿದೆ. ಪಂಜಾಬಿನಲ್ಲಿ ಪ್ರತ್ಯೇಕವಾದಿಗಳ ಹಾವಳಿಯನ್ನು ತಡೆಗಟ್ಟುವ ಕೆಲಸದಲ್ಲಿ ಆರ್‌ಎಸ್‌ಎಸ್ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತಿರುವುದರಿಂದ ಸಿಂಗ್ ಅವರು ಇಡೀ ರಾಷ್ಟ್ರದ ಗಮನಕ್ಕೆ ತಂದಿದ್ದಾರೆ. ಜಮ್ಮು ಭಾಗದಲ್ಲಿ ಆರ್‌ಎಸ್‌ಎಸ್ ಪ್ರಬಲವಾಗಿರುವುದರಿಂದ ಅಲ್ಲಿಯ ಪ್ರತ್ಯೇಕತಾವಾದಿಗಳು ಮಿತಿಮೀರಿ ಬೆಳೆಯಲು ಸಾಧ್ಯವಾಗಿಲ್ಲ. ಪಂಜಾಬಿನ ಮುಖ್ಯಮಂತ್ರಿ ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಿದ ಮೇಲೆ ಹೇಳಿರುವಂಥ ಮಾತಿದು. ಭಾರತ ಚೀನ 1963 ರಲ್ಲಿ ಯುದ್ಧವಾಯಿತು. ಅವತ್ತಿನ ಪ್ರಧಾನಿ ಜವಹರಲಾಲ್ ನೆಹರು ಅವರು ದೆಹಲಿಯ ಒಂದು ಗಣರಾಜ್ಯೋತ್ಸವ ಒಂದು ಪೆರೇಡಿನಲ್ಲಿ ಭಾಗವಹಿಸುವುದಕ್ಕೆ ರಾಷ್ಟ್ರೀಯ ಸ್ವಯಂ ಸಂಘದ ಕಾರ್ಯಕರ್ತರನ್ನು ಕರೆದರು.

ಶ್ರೀ ಎಂ. ವೀರಪ್ಪ ಮೊಯಿಲಿ:– ಬೇಹಂತಸಿಂಗ್ ಅವರು ಹೇಳಿದರಲ್ಲಾ ಅಲ್ಲಿ ಕಾಶ್ಮೀರದಲ್ಲಿ ಉಗ್ರವಾದಿಗಳನ್ನು ಹೆದರಿಸುವುದಕ್ಕೆ ಒಂದು ತರಹ ಸಮರ್ಪಣ ಮನೋಭಾವದಿಂದ ಅಲ್ಲಿ ಆರ್‌ಎಸ್‌ಎಸ್ ನವರು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಪಂಜಾಬಿನಲ್ಲಿ? ಅದೇ ಕೆಲಸ ಬಾಕಿ ಕಡೆಯಲ್ಲಿ ನೀವು ಮಾಡಿದರೆ ಎಲ್ಲರೂ ಪ್ರಸಂಶೆ ಮಾಡಬಹುದು. ಅದಕ್ಕೆ ವಿರುದ್ಧ ಮಾಡಿದರೆ ಈ ಪ್ರಶ್ನೆ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಹೇಳಿರುವ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಸರಿ ನಾನು ಹೇಳುವುದು ಇಷ್ಟೆ. ಇದನ್ನು ನೋಡುವ ದೃಷ್ಟಿ ಬೇಕು. ಆ ಹೃದಯ ವೈಶಾಲ್ಯತೆ ಬೇಕು. ಯಾವುದನ್ನು ನೀವು ಸರಿ ಎಂದು ನೋಡುತ್ತೀರೋ ಅದು ಸರಿಯಾಗಿ ಕಾಣುತ್ತದೆ. ಏನಾದರೂ ಕೊಂಕಿನಿಂದಲೇ ನೋಡಿ ಅಪರಾಧ ಸ್ಥಾನದಲ್ಲಿ ನಿಲ್ಲಿಸಬೇಕು ಎಂದು ದೃಷ್ಟಿಯಿಂದ ನೋಡಿದರೆ ನೀವಲ್ಲ, ನಿಮ್ಮ ಜನರ ಬಗ್ಗೆ, ನಿಮ್ಮ ಬಗ್ಗೆ ನನಗೆ ಗೌರವ ಇದೆ.

(ನಗು)

ಶ್ರೀ ಆರ್.ವಿ. ದೇಶಪಾಂಡೆ:– ಆಗ ನರಸಿಂಹರಾವ್ ಬಗ್ಗೆ ಹೇಳಿದರು, ನಾವು ಈಗ ಎಲ್ಲಿಗೆ ಹೋಗಬೇಕು?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳಾದ ಮೊಯಿಲಿಯವರೇ, ಇವರ ಗೌರವದ ಬಗ್ಗೆ ನೀವೇನಾದರೂ ನಂಬಿದ್ರೆ, ಕೆಟ್ಟಿರಿ ನೋಡಿ ನೀವು.

(ಗೊಂದಲ)

ಶ್ರೀ ಸಿ. ಬೈರೇಗೌಡ:– ನಾನು ಪದೇ ಪದೇ ಹೇಳುತ್ತಿದ್ದೇನೆ. ಅಲ್ಲಿ ಬಿಜೆಪಿ. ಮಾನ್ಯ ಆದ್ವಾನಿಯವರು, ಮಾನ್ಯ ಪ್ರಧಾನ ಮಂತ್ರಿಗಳು ಒಂದು. ಇಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಮೊಯಿಲಿಯವರ ಕೂಡ ಒಂದೇ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಚಂದ್ರಶೇಖರ್ ನಾವೂ ಒಂದು. ಅದನ್ನು ಹೇಳಿ.

ಶ್ರೀ ಸಿ. ಬೈರೇಗೌಡ:– ಇದು ಸ್ಪಷ್ಟವಾಗಿ ಎಂಥ ಚಿತ್ರ ಕಾಣುತ್ತಿದೆ ನೋಡಿ. ಬಹಳ ಸ್ಪಷ್ಟವಾಗಿ ಕಾಣುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ನಮ್ಮ ಹನುಮೇಗೌಡರಿಗೆ ಗೊತ್ತಿಲ್ಲ. ಚಂದ್ರಶೇಖರ್ ನಾವೂ ಒಂದು.

ಶ್ರೀ ವಾಟಾಳ್ ನಾಗರಾಜ್:- ಹನುಮೇಗೌಡ್ರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಲ್ಲ, ಬೈರೇಗೌಡ್ರು.

ಶ್ರೀ ಆರ್.ವಿ. ದೇಶಪಾಂಡೆ:- ಏನಾಗಿದೆ ಸ್ವಾಮಿ ನಿಮಗೆ ?

(ನಗು)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ಗೌಡ್ರಪ್ಪ. ಏನಾದರೂ ನೀವು ತಿಳಿದುಕೊಳ್ಳಿ.

(ನಗು)

ಛೇರ್ಮನ್:- ಮಾನ್ಯ ಯಡಿಯೂರಪ್ಪನವರಿಗೆ ವಿಷಯ ಬಿಟ್ಟು ಹೋಗುತ್ತಿರುವುದಕ್ಕೆ ಈ ರೀತಿ ಆಗುತ್ತಿರುವುದು. ಬೈರೇಗೌಡರನ್ನು ಹನುಮೇಗೌಡ ಎಂದು ಹೇಳುತ್ತೀರಾ. ಇನ್ನೊಂದು ಸಾರಿ ಇನ್ನೇನೋ ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ. ನಾನು ಇತ್ತೀಚಿನವರೆಗೂ ಕೂಗಿ ಚೀರಿ ನಾಲ್ಕೇ ಜನ ಇದ್ದೇವೆಲ್ಲಾ ಎಂದು ಮಾತನಾಡುತ್ತಿದ್ದೆ. ಇಂದು ಸ್ವಲ್ಪ ಸಂಯಮದಿಂದ ಮಾತನಾಡೋಣ. ಕೆಲವು ಸಂಗತಿಗಳನ್ನು ಹೇಳಬೇಕು ಎಂದು ಪ್ರಯತ್ನ ಮಾಡುತ್ತಿದ್ದೇನೆ.

ಇಲ್ಲಿ ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ನಮ್ಮದೂ ಸಹ ತಪ್ಪು ಇದ್ದರೆ ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಲ್ಲಿ ಚರ್ಚೆ ಆಗಬೇಕು ಎಂದು ನಾನೂ ಸಹ ಅಪೇಕ್ಷೆ ಪಡುವಂಥದ್ದು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಯಾರೋ ಕೆಲವರು ಆರ್‌ಎಸ್‌ಎಸ್ ಬಗ್ಗೆ ತಪ್ಪು ಅಭಿಪ್ರಾಯವನ್ನು ಇಟ್ಟುಕೊಂಡು ಆ ಒಂದು ಮಹಾನ್ ಸಂಸ್ಥೆಯ ಬಗ್ಗೆ ಗೂಬೆ ಕೂರಿಸುವಂತಹ ಒಂದು ಕೆಲಸವನ್ನು ಏನು ಮಾಡುತ್ತಿದ್ದಾರೆ, ಇದು ದೊಡ್ಡ ಅಕ್ಷಮ್ಯ ಅಪರಾಧ. ಗೊತ್ತಿಲ್ಲದೇ ಮಾಡುತ್ತಿದ್ದೀರಿ. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರು ಇದರ ಬಗ್ಗೆ ಏನು ಕಲ್ಪನೆ ಇಟ್ಟುಕೊಂಡಿದ್ದರು. ಇವತ್ತು ಯಾರೂ ಬೇಡ, ಶ್ರೀಮಾನ್ ಲಾಲ್ ಬಹಾದ್ದೂರ್ ಶಾಸ್ತ್ರೀಯವರ ಬಗ್ಗೆ ನಿಮಗೆಲ್ಲಾ ಹೆಮ್ಮೆ ಇದೆ. ದೇಶ ಅಂತಹ ಒಬ್ಬ ಮಹಾನ್ ಪ್ರಧಾನಿಯನ್ನು ಮತ್ತೊಮ್ಮೆ ಕಂಡಿಲ್ಲ ಎಂದು ಒಪ್ಪಿಕೊಳ್ಳುತ್ತೀರಿ. 1965 ನೇ ಇಸವಿಯ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಮೀಟಿಂಗ್‌ಗೆ ಅವತ್ತಿನ ಆರ್.ಎಸ್.ಎಸ್. ನೇತಾರ ಶ್ರೀ ಗುರೂಜೀ ಗೋಳ್ವಾರ್‌ಕರ್ ಅವರನ್ನು ಕರೆದಿದ್ದರು ಗೊತ್ತೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ನರಸಿಂಹರಾಯರೇ ಕರೆದಿದ್ದರು.

ಶ್ರೀ ಕೆ.ಎಸ್. ಈಶ್ವರಪ್ಪ:- ಅದನ್ನೇ ಈಗ ಹೇಳುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ: 5ನೇ ತಾರೀಖಿನವರೆಗೆ ತಮ್ಮನ್ನು ಪಕ್ಕದಲ್ಲಿ ಇಟ್ಟುಕೊಂಡಿದ್ದೇ ಅವರಿಗೆ ಗ್ರಹಚಾರ ಒಕ್ಕರಿಸಿಕೊಂಡಿದ್ದುದು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಯಡಿಯೂರಪ್ಪನವರೇ, ನಾನು ನಿನ್ನೆ ಹೇಳಿದೆ. ಆರ್‌ಎಸ್‌ಎಸ್, ವಿ.ಹೆಚ್.ಪಿ, ಬಜರಂಗ ದಳ್, ಆರನೇ ತಾರೀಖಿನವರೆಗೆ ಕಮ್ಯೂನಲ್ ಇರಲಿಲ್ಲ. ಆರನೇ ತಾರೀಖಿನ ನಂತರ ಕಮ್ಯೂನಲ್ ಆಯಿತು ಎಂದು ನಿನ್ನೆ ನಾನು ಹೇಳಿದೆನಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಹಾಗೆಯೇ ಮಾಡಿದಿರಲ್ಲ. ಅಧಿಕಾರದಲ್ಲಿ ನಿಮ್ಮ ಜೊತೆ ಇದ್ದಾಗ ನಮ್ಮನ್ನು ಕೇಳದೇ ಏನೂ ಮಾಡುತ್ತಿರಲಿಲ್ಲ. ಆದರೆ ನಿಮ್ಮ ಅಧಿಕಾರ ಹೋಗುವಂತಹ ಸಮಯದಲ್ಲಿ ಸೇರಿ ನಾವು ಹಾಳಾದೆವು.

ಶ್ರೀ ಆರ್.ವಿ. ದೇಶಪಾಂಡೆ:– ನಿಮ್ಮನ್ನು ಕೇಳಿ ನಾವು ಹಾಳಾದೆವು.

ಶ್ರೀ ಕೆ.ಎಸ್. ಈಶ್ವರಪ್ಪ:– ಹಾಳಂತೂ ಆದಿರಲ್ಲ, ಇನ್ನು ಹೇಳುವುದಿಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್:– ಕಾಂಗ್ರೆಸ್‌ನವರೂ, ಜನತಾ ದಳದವರೂ ನೊಣ ತಿಂದು ಜಾತಿ ಕೆಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ. ದಯಮಾಡಿ ಇದನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಇವತ್ತು ಯಾವ ಆರ್‌ಎಸ್‌ಎಸ್.ನ್ನು ಬ್ಯಾನ್ ಮಾಡಿದ್ದೀರಿ. ಇದರ ಬಗ್ಗೆ ನಮಗೆ ಏನೂ ಚಿಂತನೆ ಇಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನೂ ಸಹ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಬೆಳೆದವನು. ಇಲ್ಲಿರುವ ನಾವು ನಾಲ್ಕೂ ಜನ ಶಾಸಕರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಬೆಳೆದವರು. ಈ ಸಂಘ ಬ್ಯಾನ್ ಆಗಿದೆ. ಇಲ್ಲಿ ಮನ ಮುಟ್ಟಿ ಹೇಳಿ. ಎಷ್ಟು ಜನರು ಆರ್‌ಎಸ್‌ಎಸ್.ನ ಕಾರ್ಯಕ್ರಮಕ್ಕೆ ಬಂದು ಇಂತಹ ದೇಶಭಕ್ತ ಸಂಸ್ಥೆ ಬೇರೊಂದು ಇಲ್ಲ ಎಂದು ಹೇಳಿದ್ದನ್ನು ದಿನಾಂಕದ ಸಹಿತ ಉಲ್ಲೇಖ ಮಾಡಲೇ ? ಅಥವಾ ಆ ಕಡೆ ಕುಳಿತವರು ಅಥವಾ ಈ ಕಡೆ ಕುಳಿತವರು ಇದೇ ಗರಡಿಯಲ್ಲಿ ಬೆಳೆದು ನಾನು ಧನ್ಯನಾದೆ, ಒಳ್ಳೆಯ ಸಂಸ್ಥೆಯಲ್ಲಿ ಸೇರಿದೆ ಎಂದು ನನ್ನ ಜೊತೆ ಮಾತನಾಡಿದವರ ಹೆಸರು ಹೇಳುವುದಿಲ್ಲ, ಪಟ್ಟಿ ಕೊಡಲೇ ?

ಶ್ರೀ ವಾಟಾಳ್ ನಾಗರಾಜ್:– ಯಡಿಯೂರಪ್ಪನವರು ಮಾನ್ಯ ಸಿಂಧ್ಯರವರ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಈ ರೀತಿ ಮಾತನಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಇದು ಸಿಂಧ್ಯಾರವರ ಮೇಲೆ ಆರೋಪಣೆ ಮಾಡತಕ್ಕಂಥಹದು.

ಶ್ರೀ ಕೆ.ಎಸ್. ಈಶ್ವರಪ್ಪ:– ಇವರು ಒಬ್ಬರೇ ಅಲ್ಲ, ಬಹಳಷ್ಟು ಜನ ಇದ್ದಾರೆ. ಹೆಸರು ಬೇಕು ಎಂದರೆ ಹೇಳುತ್ತಾ ಹೋಗೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಒಂದು ಪಾಯಿಂಟ್ ಕ್ಲಾರಿಫೈ ಆಗುವುದು ಒಳ್ಳೆಯದು. ಏಕೆಂದರೆ ರೆಕಾರ್ಡ್‌ನಲ್ಲಿ ಹೋಗಿದೆ. ನಾನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯ ಒಂದು ದಿವಸವೂ ಆಗಿದ್ದಿಲ್ಲ. ನಾನು ಆರ್‌ಎಸ್‌ಎಸ್.ನ ಕಾರ್ಯಕರ್ತನಾಗಿ, ಸದಸ್ಯನಾಗಿ ಯಾವುತ್ತೂ ಆಗಿರಲಿಲ್ಲ. ಅಥವಾ ಬಿಜೆಪಿ ಅಥವಾ ಹಿಂದಿನ ಭಾರತೀಯ ಜನಸಂಘದ ಸದಸ್ಯ ಸಹಿತ ಆಗಿರಲಿಲ್ಲ. 1971 ರಲ್ಲಿ ಯಾವಾಗ ನಾವು ಸಂಸ್ಥಾ ಕಾಂಗ್ರೆಸ್, ಬಿಜೆಪಿ, ಸೋಷಲಿಸ್ಟ್ ಪಾರ್ಟಿ ನಾವೆಲ್ಲಾ ಗ್ರಾಂಡ್ ಏಲಿಯನ್ಸ್ ಮಾಡಿಕೊಂಡ ಸಂದರ್ಭದಲ್ಲಿ, ನಾವು ರಾಜಕೀಯವಾಗಿ ದುಡಿದಿರತಕ್ಕದ್ದು ನಿಜ. ಆದರೆ ಆರ್.ಎಸ್.ಎಸ್. ವಿದ್ಯಾರ್ಥಿ ಸಂಸ್ಥೆ ಅಥವಾ ಅದರಿಂದ ಸ್ಫೂರ್ತಿ ಪಡೆದಿರತಕ್ಕಂಥ ವಿದ್ಯಾರ್ಥಿ ಪರಿಷತ್ತಿನ ಸಾಮಾನ್ಯವಾದ ಕಾರ್ಯಕರ್ತನಾಗಿ ಅಲ್ಲ, ಅದರ ಅಖಿಲ ಭಾರತ ಕಾರ್ಯದರ್ಶಿಯಾಗಿ ದೇಶಾದ್ಯಂತ ಪ್ರವಾಸ ಮಾಡಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿರುವುದರ ಬಗ್ಗೆ ನಾನು ಇಲ್ಲವೆಂದು ಹೇಳಿದರು ಸುಳ್ಳು ಆಗುತ್ತದೆ. ಅದೇ ಕಾರಣದಿಂದ ನಾನು ಎರಡು ವರ್ಷ ಜೈಲು ವಾಸ ಅನುಭವಿಸಿದ್ದೇನೆ. ಆದರೆ ನಿಮಗೆ ನಾನು ಕೇಳುತ್ತಾ ಇರತಕ್ಕದ್ದು, 1974 ನೇ ಇಸವಿಯಲ್ಲಿ ಅಖಿಲ

ಭಾರತ ಕಾರ್ಯದರ್ಶಿಯಾಗಿ ಬೊಂಬಾಯಿನಲ್ಲಿ ನಡೆದಂತಹ ಸಾವಿರಾರು ಜನ ಭಾಗವಹಿಸಿದಂತಹ ಅಧಿವೇಶನದಲ್ಲಿ ನನ್ನನ್ನು ಕಾರ್ಯದರ್ಶಿ ಸ್ಥಾನದಿಂದ ನೀವು ಯಾವ ಕಾರಣಕ್ಕಾಗಿ ತೆಗೆದು ಹಾಕಿದಿರಿ ? ಅನೌಪಚಾರಿಕವಾಗಿ ಯಾವಾಗ ನೀವು ಹೇಳುತ್ತಾ ಇರತಕ್ಕ ಹಿಂದೂ ರಾಜ್ಯದ ಕಲ್ಪನೆ ಸರಿಯಾಗಿಲ್ಲ ಎಂದು ನಾನು ಹೇಳಿದೆ ಆಗ ನನ್ನನ್ನು ಒಂದೇ ರಾತ್ರಿ ಅಖಿಲ ಭಾರತ ಮಹಾ ಪ್ರಧಾನ ಕಾರ್ಯದರ್ಶಿ ಆಗಿದ್ದವನನ್ನು ಒಬ್ಬ ಸಾಮಾನ್ಯ ಸದಸ್ಯನಾಗಿ ಇಳಿಸಿದಿರಿ, ಆದರಿಂದ ನಾನು ಬಿಟ್ಟು ಬಂದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ನಾಳೆ ಯಡಿಯೂರಪ್ಪನವರಿಗೂ ಅದೇ ಗತಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ವಿರೋಧಿ ಪಕ್ಷದ ನಾಯಕರ ಜೊತೆ ಮಾತನಾಡಿದ್ದು ಈ ದಿವಸ ಇಲ್ಲಿ 2–3 ಬಿಲ್‌ಗಳನ್ನು ಆದರೂ ಚರ್ಚೆ ಮಾಡಿ ಪಾಸ್ ಮಾಡಬೇಕಾಗಿದೆ. ಏಕೆಂದರೆ ನಾಳೆ ಲೆಜಿಸ್ಲೇಟೀವ್ ಕೌನ್ಸಿಲ್‌ಗೆ ಏನೂ ಬಿಸಿನೆಸ್ ಇರುವುದಿಲ್ಲ. ಅವರ ಭಾಷಣ ಮುಗಿದ ಮೇಲೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ನಾನು ಮಾತನಾಡುತ್ತೇನೆ. ತಾವು ಒಪ್ಪುವುದಾದರೆ ನಾಳೆ ನಾನು ಮಾತನಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಇನ್ನು ಅರ್ಧ ಗಂಟೆ ತೆಗೆದುಕೊಂಡು ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್:– ನಾಳೆ ನಾವೆಲ್ಲ ಮಾತನಾಡಬೇಕಾಗಿದೆ. ರಾತ್ರಿ ಎರಡು ಗಂಟೆ ಆದರೂ ಪರವಾಗಿಲ್ಲ; ಮಾನ್ಯ ಯಡಿಯೂರಪ್ಪನವರ ಭಾಷಣ ಮುಗಿಯಲಿ. ನಾಳೆ ನಾವು ಮಾತನಾಡೋಣ.

ಛೇರ್ಮನ್:– ಯಡಿಯೂರಪ್ಪನವರು ತಮ್ಮ ಸಮಯವನ್ನು ಸ್ನೇಹಿತ ಸದಸ್ಯರ ಜೊತೆ ಹಂಚಿಕೊಳ್ಳುತ್ತಿದ್ದಾರೆ. ತಾವು ಯಾವಾಗ ಮುಗಿಸುತ್ತೀರಿ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಅವರು ಎಷ್ಟು ಮಾತನಾಡಿದರೂ ನಮ್ಮದು ಖಂಡಿತಾ ಅಡ್ಡಿಯಿಲ್ಲ. ಆದರೆ ಇಷ್ಯೂ ಏನಾಗಿದೆ, 6ನೆಯ ತಾರೀಖು ನಡೆದಂತಹ ಘಟನೆಯಲ್ಲಿ ಮಸೀದಿಯನ್ನು ಕೆಡವಿದ್ದು ಅದರ ಪರಿಣಾಮ ನಮ್ಮ ರಾಜ್ಯದಲ್ಲಿ ಏನೇನು ಆಗಿದೆ ಅಷ್ಟಕ್ಕೆ ಸೀಮಿತಗೊಳಿಸಿ ಅವರ ಸಮಸ್ತ ನಾಯಕರೂ ಕೂಡ ಇದು ಮಾಡಿದ್ದುದು ತಪ್ಪು ಎಂದು ತಲೆತಗ್ಗಿಸಿ ದೇಶದ ಕ್ಷಮಾಪಣೆ ಕೇಳಿದ್ದಾರೆ. ಅಲ್ಲಿಂದ ಮುಂದಕ್ಕೆ ಮಾತನಾಡುವುದು ಉತ್ತಮವೆಂದು ನನಗನಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– 6ನೆಯ ತಾರೀಖು ನಡೆದಂತಹ ಘಟನೆಗೆ ಸಂಪೂರ್ಣ ಜವಾಬ್ದಾರಿಯನ್ನು ಕಾಂಗ್ರೆಸ್ ಪಕ್ಷದ ಮುಖಂಡರು ನೀವು ವಹಿಸಬೇಕಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ: ಕೋತಿ ಮೊಸರು ತಿಂದು ಮೇಕೆಯ ಬಾಯಿಗೆ ಒರೆಸಿದ ಹಾಗಾಯಿತು ಇದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ವಿರೋಧಪಕ್ಷದ ನಾಯಕರು, ಈ ದೇಶದ ನಾಯಕರು ಹೇಳಿದ್ದು ನಿಜವೆಂದು ನಂಬಿದೆವಲ್ಲ ಅದು ತಪ್ಪು. ಅದಕ್ಕೋಸ್ಕರ ಹೀಗಾಯಿತು. ನಮ್ಮ ವಿರೋಧಪಕ್ಷದ ನಾಯಕರಾದಂತಹ ದೇಶಪಾಂಡೆಯವರು ಒಂದು ಮಾತು ಹೇಳುತ್ತಾರೆ, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳು ಇದಕ್ಕೆ ಸಂಪೂರ್ಣ ಬೆಂಬಲ ಕೊಡುತ್ತಾರೆ, ಕೊಡಲೇಬೇಕು. ಹಾಗೆಯೇ ವಿರೋಧ ಪಕ್ಷದ ನಾಯಕರು ಅವರು ಇಡೀ ದೇಶದಲ್ಲಿ ಹೆಸರು ಸಂಪಾದನೆ ಮಾಡಿರುವ ಅದ್ವಾನಿಯವರು ಭರವಸೆಯನ್ನು ಕೊಟ್ಟರೆ, ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಕೋರ್ಟ್

ಆರ್ಡರನ್ನು ಉಲ್ಲಂಘನೆ ಮಾಡುವುದಿಲ್ಲವೆಂದು ಬಹಿರಂಗವಾಗಿ ಹೇಳಿದ ಮೇಲೆ ನಾವು ನಂಬಿದೆವು. ಇದು ನಂಬಿಕೆ ದ್ರೋಹ. ನರಸಿಂಹರಾವ್‌ರವರನ್ನು ದೂಷಣೆ ಮಾಡಿದರೆ ಏನೂ ಪ್ರಯೋಜನವಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿದ ಮಾತನ್ನು ನರಸಿಂಹರಾಯರು ನಂಬಬೇಕಾಯಿತು. He is a gentleman. ವಿರೋಧಪಕ್ಷದ ನಾಯಕರು 130 ಜನ ಲೋಕಸಭಾ ಸದಸ್ಯರುಗಳ ಪ್ರತಿನಿಧಿಗಳು ಇವರು ಮತ್ತು ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳು ಇವರೆಲ್ಲಾ ಬಹಿರಂಗವಾಗಿ ಕೋರ್ಟ್ ಆರ್ಡರ್ ಉಲ್ಲಂಘನೆ ಮಾಡುವುದಿಲ್ಲ ನಾವು ರಕ್ಷಣೆ ಕೊಡುತ್ತೇವೆಂದು ಹೇಳಿದರು. ಇಷ್ಟೆಲ್ಲ ಕೊಟ್ಟು ಅದನ್ನು ನಂಬಿದರಲ್ಲ ನರಸಿಂಹರಾಯರು ಅದು ತಪ್ಪಾಯಿತೆಂದು ಹೇಳುತ್ತಿದ್ದಾರೆ, ನಂಬಬಾರದಾಗಿತ್ತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ವಿ.ಪಿ. ಸಿಂಗ್‌ರವರ ಮಾತು ಕೇಳಿದ್ದರೆ ಹೀಗೆ ಆಗುತ್ತಿರಲಿಲ್ಲ. ನಂಬಿ ಹಾಳಾಗಿ ಹೋದಿರಿ.

ಶ್ರೀ ಸಿ. ಬೈರೇಗೌಡ:– 6ನೆಯ ತಾರೀಖು 5–30 ಅಥವಾ 6 ಗಂಟೆಗೆ ಉತ್ತರ ಪ್ರದೇಶ ಸರ್ಕಾರ ವಜಾ ಆಯಿತಲ್ಲಾ. ಅಲ್ಲಿಂದ ಮಾರನೆಯ ದಿವಸ ಸಂಜೆಯವರೆಗೆ ದೇವಾಲಯ ಏನು ಕಟ್ಟಿದ್ದಾರೆ ಅಲ್ಲೇನು ವಿಗ್ರಹ ಇದೆಯಲ್ಲ ಆಗ ಯಾರು ಇದ್ದರು ಸ್ವಾಮಿ ? ಆಗ ಯಾರನ್ನು ನಂಬಿದ್ದಿರಿ ? ಅದ್ವಾನಿಯವರನ್ನು ನಂಬಿದ್ದಿರಾ ? ಯಾರನ್ನು ನಂಬಿದ್ದಿರಿ ? ಅಲ್ಲಿ ಯಾರು ಇದ್ದರು ?

SRI HARNAHALLI RAMASWAMY:– It is easy to become wise after the event. ಹೀಗೆಲ್ಲ ಮಾತನಾಡುತ್ತಾರೆ.

ಶ್ರೀ ಸಿ. ಬೈರೇಗೌಡ:– ಅದು ಸತ್ಯ. ಆ ಸತ್ಯವನ್ನು ಮರೆಮಾಚುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಲೋಕಸಭೆಯಲ್ಲಿ ವಿ.ಪಿ. ಸಿಂಗ್‌ರವರು ವಾರ್ನ್ ಮಾಡಿದ್ದಾರೆ. ಇದೇ ಕಲ್ಯಾಣಸಿಂಗ್‌ರವರು ರಾಜಿನಾಮೆಯನ್ನು ಕೊಟ್ಟರೆ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ನೀವು ಬೇಕಾಗಿಯೇ ಅವರಿಗೆ ಸಪೋರ್ಟ್ you have abetted the crime.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅವರ ಸಪೋರ್ಟ್‌ನಿಂದ ನಿಮ್ಮ ಸರ್ಕಾರ ಅಲ್ಲಿದ್ದಾಗ ನೀವು ಏನಾದರೂ ಮಾಡಿದಿರಾ ? ಈಗ ಜಗಳ ಆಡುತ್ತಾ ಇದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ:– ಅವರು ನಂಬಿಕಸ್ತರು ಅಲ್ಲವೆಂದು ನಿಮಗೆ ಈಗ ಅರ್ಥವಾಯಿತೇ ? ಹಾಗೆ ಇದ್ದು ನೀವು ನಂಬಿದಿರಲ್ಲಾ !

ಶ್ರೀ ಸಿ. ಬೈರೇಗೌಡ:– ತಾತ್ಕಾಲಿಕವಾಗಿರತಕ್ಕ ಕಟ್ಟಡ ಅಲ್ಲೇನು ಬಂದಿದೆ ಅಲ್ಲಿ ಪೂಜೆಗೆ ಅವಕಾಶ ಕೊಡಲಾಗಿದೆ ಅಂದರೆ, ಪ್ರಧಾನ ಮಂತ್ರಿಗಳು ಹೇಳುತ್ತಾರೆ ಅಲ್ಲಿರತಕ್ಕ ಜಿಲ್ಲಾಡಳಿತ ಏನು ಕೆಲಸ ಮಾಡಿದೆಯೆಂದು ಗೊತ್ತಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಒಂದು ಕಡೆ ಅವರನ್ನು ನಂಬಿದ್ದೆವು ಎಂದು ಹೇಳುತ್ತೀರಿ, ಒಂದು ಕಡೆ ಜಿಲ್ಲಾಡಳಿತವೆಂದು ಹೇಳುತ್ತಾರೆ.

ಛೇರ್ಮನ್:– ಮಾನ್ಯ ಯಡಿಯೂರಪ್ಪನವರೆ, ನೀವು ಮಾತನಾಡಲಿಕ್ಕೆ ಶುರು ಮಾಡಿ 60 ನಿಮಿಷ ಆಯಿತು. ಆದಷ್ಟು ಬೇಗ ಮುಗಿಸಿ. ಇನ್ನೂ ಬೇಕಾದಷ್ಟು ಜನ ಮಾತನಾಡುವವರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಇನ್ನೂ ಅರ್ಧಗಂಟೆಯಲ್ಲಿ ನನ್ನ ಭಾಷಣ ಮುಗಿಸುತ್ತೇನೆ. ನಮ್ಮ ಕಾಂಗ್ರೆಸ್ ಸ್ನೇಹಿತರಾಗಲಿ, ಈ ಕಡೆ ಕುಳಿತಿರುವ ಸ್ನೇಹಿತರಾಗಲಿ ಆತ್ಮೀಯತೆಯಿಂದ ಹೃದಯ ಬಿಚ್ಚಿ ನಮ್ಮ ಹತ್ತಿರ ವೈಯಕ್ತಿಕವಾಗಿ ಮಾತನಾಡುತ್ತಾರೆ. ಭಾವನೆಗಳನ್ನು ಸತ್ಯ ಸಂಗತಿಗಳನ್ನು ನಂಬಿರುವುದನ್ನು ಬಹಿರಂಗವಾಗಿ ಹೇಳದಿರುವುದರಿಂದ ಈ ದೇಶ ಇವತ್ತು ಈ ಸ್ಥಿತಿಗೆ ಬಂದಿದೆ. ಆ

ಪ್ರಶ್ನೆ ಇರುವುದು ಇಷ್ಟೆ, ಇವತ್ತು ಜಾತ್ಯಾತೀತ ಪಾಠ ಹೇಳುವ ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಹೇಳುತ್ತೇನೆ. ನಾನು 9ನೇ ತಾರೀಖಿನಂದು ಅಯೋಧ್ಯೆಯಿಂದ ದೆಹಲಿಗೆ ಬಂದೆ. ಏರೋಡ್ರಮ್‌ನಲ್ಲಿ 7–8 ಕಾಂಗ್ರೆಸ್ಸಿನ ಲೋಕಸಭಾ ಸದಸ್ಯರು ಒಟ್ಟಿಗೆ ಬಂದರು. ಅವರುಗಳ ಹೆಸರುಗಳನ್ನು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಏಕೆಂದರೆ, ನಾನು ಜವಾಬ್ದಾರಿ ಸ್ಥಾನದಲ್ಲಿರುವುದರಿಂದ ನಾನು ಕರ್ತವ್ಯಲೋಪವೆಸಗಿದಂತಾಗುತ್ತದೆ. ಆಗ ಅಲ್ಲಿ ಅರ್ಧ ಗಂಟೆ ಚರ್ಚೆ ನಡೆಯಿತು. ಆಗ ಅವರು ನನಗೆ ಏನು ಹೇಳಿದರೆಂದರೆ, 'ಯಡಿಯೂರಪ್ಪನವರೇ, ಇವೊತ್ತು ಆ ಘಟನೆ ನಡೆದ ನಂತರ ನಮ್ಮ ತಪ್ಪಿನಿಂದ ಪ್ರಧಾನಿ ನರಸಿಂಹರಾಯರು ತಲೆ ಮೇಲೆ ಕಲ್ಲು ಹಾಕಿಕೊಂಡರು. ನಾವೆಲ್ಲಾ ಎಲ್ಲಿಗೆ ಹೋಗುತ್ತೇವೆಯೋ ಗೊತ್ತಿಲ್ಲ. ಅಲ್ಲದೆ, ಪ್ರಧಾನಿಯವರು ನಮ್ಮನ್ನು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಎಂದು, ಮಸೀದಿಯನ್ನು ಇದ್ದ ಸ್ಥಳದಲ್ಲಿಯೇ ಕಟ್ಟುತ್ತೇವೆಂದು ಹೇಳಿದ್ದಾರೆ ಎಂದರು. ಈ ಪ್ರಶ್ನೆ ಪ್ರತಿಯೊಬ್ಬ ಕಾಂಗ್ರೆಸ್ ಸ್ನೇಹಿತರ ಮನಸ್ಸಿನ ಒಳಗಡೆ ಗೊತ್ತಿಲ್ಲದೆ ಚಿವುಟುತ್ತಿದೆ. ಅದೇ ರೀತಿ ಇವೊತ್ತು ಏನು ದೊಡ್ಡ ಅಪರಾಧ ಮಾಡುತ್ತಿದ್ದೇವೆಂದರೆ, ಯಾವ ಅಲ್ಪಸಂಖ್ಯಾತ ಬಂಧುಗಳು ಸುಮಾರು 45 ವರ್ಷಗಳಿಂದ ತಮ್ಮನ್ನು, ತಮ್ಮ ಮಾತನ್ನು ನಂಬಿಕೊಂಡು ನಿಮ್ಮ ಹಿಂದೆ ಬಂದರೋ, ಮತ್ತು ನೀವೇನು ಸುಳ್ಳು, ಅಸತ್ಯವೆಂದು ಅದನ್ನು ಬಾಬರೀ ಮಸೀದಿ ಎಂದು ಏನು ಹೇಳಿದಿರಿ ಅದನ್ನೂ ಕೂಡ ಉಳಿಸಿಕೊಡಲಾಗಲಿಲ್ಲ. ಅದೊಂದು ತಪ್ಪನ್ನು ಮಾಡಿದಿರಿ. ಈಗ ನೀವು ಅವರ ರಕ್ಷಕರು ಎಂಬ ಮಾತನ್ನಾಡಿ, ಅಲ್ಲಿಯೇ ಮಸೀದಿ ಕಟ್ಟುತ್ತೇವೆಂದು ಹೇಳಿ ಅವರನ್ನು ತ್ರಿಶಂಕು ಸ್ವರ್ಗದಲ್ಲಿಡುವ ನಿಮ್ಮ ಪ್ರಯತ್ನ ಏನಿದೆ, ಆ ಪ್ರಯತ್ನವನ್ನು ಈಗಲಾದರೂ ಕೈಬಿಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ, ಇವೊತ್ತು ನಮ್ಮನ್ನು ಜಾತಿವಾದಿಗಳೆಂದು ಹೇಳುತ್ತಿದ್ದೀರಿ. ಆದರೆ, ಇವೊತ್ತಿನ ತನಕ ನೀವೇನು ಮಾಡಿಕೊಂಡು ಬಂದಿರಿ? ನಿಮ್ಮ ನಡವಳಿಕೆ ಹೇಗಿದೆ? ನಮ್ಮನ್ನು ಜಾತಿವಾದಿಗಳೆಂದು ಹೇಳುತ್ತಿದ್ದೀರಿ? ದೇಶದ ವಿಭಜನೆಗೆ ಕಾರಣವಾದಂಥ ಮುಸ್ಲಿಂ ಲೀಗ್‌ನ ಮರಿ ಕೂಸು ಐ.ಯು.ಎಂ.ಎಲ್. ಇದೆಯೆಲ್ಲಾ, ಅವರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಕೇರಳದಲ್ಲಿ ಅಧಿಕಾರ ನಡೆಸುತ್ತಿರುವವರು ನೀವೇ ತಾನೇ? ಜಿಲ್ಲೆಗಳನ್ನು ಜಾತಿಯ ಆಧಾರದ ಮೇಲೆ ಒಡೆದು, ಕೇರಳದ ಮಲ್ಲಾಂಪುರದಲ್ಲಿ ಮತ್ತು ತಮಿಳುನಾಡಿನ ಬೇರೊಂದು ಜಿಲ್ಲೆಗಳಲ್ಲಿ ಈ ರೀತಿ ಜಾತಿಯ ಆಧಾರದ ಮೇಲೆ ಒಡೆದು ನಿರ್ಮಾಮ ಮಾಡುವುದಕ್ಕೆ ಹೊರಟಿರುವವರು ನೀವೇ ತಾನೇ? ಇವೊತ್ತು ಬೊಬ್ಬೆ ಹಾಕುತ್ತಿದ್ದೀರಲ್ಲಾ! ಜಮ್ಮು–ಕಾಶ್ಮೀರದಲ್ಲಿ ಸುಮಾರು ಎರಡೂವರೆ ಲಕ್ಷ ಜನರು ನಿರಾಶ್ರಿತರಾಗಿ ತಮ್ಮೆಲ್ಲಾ ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು, ತಮ್ಮ ಮಾನಾಪಹರಣವಾಗಿ ದೆಹಲಿಯ ಬೀದಿ–ಬೀದಿಗಳಲ್ಲಿ ತಿರುಗುತ್ತಿದ್ದಾರಲ್ಲಾ, ಅವರುಗಳ ರಕ್ಷಣೆ ಮಾಡುವಂಥ ಪ್ರಯತ್ನ ಮಾಡಿದ್ದೀರಾ? ಅದರ ಬಗ್ಗೆ ಬೊಬ್ಬೆ ಹಾಕಿದ್ದೀರಾ? ಪ್ರಜಾತಂತ್ರ ವ್ಯವಸ್ಥೆಯಿರುವಂಥ ಈ ದೇಶದ ಕಾಶ್ಮೀರದ ಒಂದು ಭಾಗದಲ್ಲಿದ್ದಂಥ ಹಿಂದೂಗಳು ತಮ್ಮ ಆಸ್ತಿ–ಪಾಸ್ತಿ ಕಳೆದುಕೊಂಡು ದೌರ್ಜನ್ಯಕ್ಕೆ ಗುರಿಯಾಗಿ ರಸ್ತೆಯಲ್ಲಿ ತಿರುಗಿದ್ದರಲ್ಲಾ ಅವರುಗಳಿಗೆ ರಕ್ಷಣೆ ಕೊಡುವಂಥ ಸಂದರ್ಭ ನಿಮಗೆ ಬಂದಿತೇ? ದೇವಸ್ಥಾನವನ್ನು ಅಲ್ಲಿ ಕಟ್ಟಿದ್ದಾರೆ. ಅಲ್ಲೊಂದು ಭವ್ಯವಾದ ಮಂದಿರ ಸ್ಥಾಪನೆಯಾಗಬೇಕು. ಆದರೆ ನೀವು ಬೇಡ ಎಂದು ಹೇಳುತ್ತಿದ್ದೀರಿ, ಏನಾಗುತ್ತದೋ ನೋಡೋಣ. ಮುಂದೆ ಬರುವ ಲೋಕಸಭಾ ಚುನಾವಣೆಗೆ ನೀವು 'ನಾವು ಅಲ್ಲಿಯೇ ಮಸೀದಿ ಕಟ್ಟುತ್ತೇವೆ' ಎಂದು ನೀವು ಹೇಳಿ, 'ನಾವು ಅಲ್ಲಿಯೇ ಮಂದಿರ ಕಟ್ಟುತ್ತೇವೆ' ಎಂದು ನಾವು ಹೇಳುತ್ತೇವೆ. ಏನೆಂಬುದು ತೀರ್ಮಾನವಾಗಲಿ ಅಥವಾ ಬೇರೆ ಯಾವ ವಿಚಾರ ಇದೆಯೋ ಅದನ್ನು ತೆಗೆದುಕೊಂಡು ಹೋಗಿ. ಅದು ಬೇರೆ ವಿಷಯ. ಆದರೆ, ನಾನು ನಿಮ್ಮನ್ನು ಕೇಳುತ್ತಿದ್ದೇನೆ: ಅನಂತನಾಗ್‌ನಲ್ಲಿ 1989ರಲ್ಲಿ 40 ಹಿಂದೂ ದೇವಾಲಯಗಳು ಧ್ವಂಸವಾಯಿತಲ್ಲ! ಆ ಸಂದರ್ಭದಲ್ಲಿ ನೀವು ಕಣ್ಣೀರು ಹಾಕಿದ್ದೀರಾ? ಬೊಬ್ಬೆ ಹಾಕಿದ್ದೀರಾ? ಈ ದೇಶದಲ್ಲಿ ಒಂದಲ್ಲ, ಎರಡಲ್ಲ ಅನೇಕ ದೇವಸ್ಥಾನಗಳನ್ನು ಈ ರೀತಿ ಧ್ವಂಸ ಮಾಡಿದ್ದರಲ್ಲಾ, ಇದು

ತಪ್ಪೆಂದು ಆ ಸಂದರ್ಭಲ್ಲಿ ನಿಮಗೆ ಅನ್ನಿಸಿತೇ? ಇರಾಕ್‌ಗೂ ಕುವೈತ್‌ಗೂ ಯುದ್ಧ ನಡೆದಂಥ ಸಂದರ್ಭದಲ್ಲಿ ಒಂದೂವರೆ ಲಕ್ಷ ಅಲ್ಪಸಂಖ್ಯಾತರನ್ನು ಭಾರತಕ್ಕೆ ಬರಮಾಡಿಕೊಳ್ಳುವುದಕ್ಕೋಸ್ಕರ ಏರ್‌ಲಿಫ್ಟ್ ಮೂಲಕ ವ್ಯವಸ್ಥೆ ಮಾಡಿದಿರಿ. ಒಬ್ಬೊಬ್ಬರಿಗೆ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದಿರಿ. ಹಣವನ್ನು ಕೊಳ್ಳೆ ಮಾಡಿದಿರಿ. ಇದು ಗಿನ್ನಿಸ್ ದಾಖಲೆಗೆ ಹೋಗುತ್ತದೆ. ಇದೇ ಔದಾರ್ಯವನ್ನು ನೀವು ಅವೊತ್ತು ಕಾಶ್ಮೀರದಲ್ಲಿ ನಿರಾಶ್ರಿತರಾಗಿ ಬೀದಿ – ಬೀದಿ ತಿರುಗುತ್ತಿದ್ದರಲ್ಲಾ, ಅವರುಗಳಿಗೆ ರಕ್ಷಣೆ ಕೊಡುವಂಥ ಈ ಔದಾರ್ಯ ಎಲ್ಲಿ ಹೋಗಿತ್ತು? ಏತಕ್ಕೆ ರಕ್ಷಣೆ ಕೊಡಲಿಲ್ಲ? ನಿಮ್ಮ ಮನಸ್ಸಿನಲ್ಲಿ ಏನಿದೆಯೆಂದರೆ, ನಾನು ನನ್ನ ಭಾಷಣದ ಪ್ರಾರಂಭದಲ್ಲಿ ಮಾತನಾಡುತ್ತಿದ್ದಾಗ ತಾವು ಗಮನಿಸಿರಬಹುದು. ಈ ಅಲ್ಪಸಂಖ್ಯಾತ ಹಿಂದೂಗಳು ಅಲ್ಪಸಂಖ್ಯಾತರಂತೆ ಬಾಳುವಂಥ ಸ್ಥಿತಿ ಬಂದಿದೆ. ಅವರಿಗೆ ನ್ಯಾಯ ಸಿಗುತ್ತಿಲ್ಲ.

(ಈ ಸಂದರ್ಭದಲ್ಲಿ ಸದನಕ್ಕೆ ಪೂರೈಕೆಯಾಗುತ್ತಿದ್ದ ವಿದ್ಯುಚ್ಛಕ್ತಿ ನಿಂತು, ವಿದ್ಯುತ್ ದೀಪಗಳೆಲ್ಲವೂ ಆರಿ ಹೋದುವು)

ಅವರ ಸ್ಥಿತಿಯೂ ಇದೇ ರೀತಿ ಅಂಧಕಾರದಲ್ಲಿದೆ. ಇದು ಆ ಭಗವಂತನ ಇಚ್ಛೆ, ರಾಮನ ಇಚ್ಛೆ ಇದು ನನಗೊಬ್ಬನಿಗೆ ಮಾತ್ರ ಅರ್ಥವಾಗುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷಿಣಿಯವರೇ, ಸನ್ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಭಾಷಣ ಮಾಡುತ್ತಿದ್ದಾರೆ. ಅವರ ಭಾಷಣ ಹಿಂದೂಗಳಿಗೂ, ಮುಸ್ಲಿಮರಿಗೂ ಪ್ರಚೋದನಕಾರಿಯಾಗುವಂಥ ರೀತಿಯಲ್ಲಿದೆ. ಇವರು ಹೇಳುತ್ತಿರುವ ಮಾತುಗಳು ಪತ್ರಿಕೆಗಳಿಗೆ ಹೋಗುವುದರಿಂದ, ಅವರು ಹೇಳಿದಂಥ ಮಾತುಗಳನ್ನು ದಾಖಲೆ, ಕಡತದಿಂದ ತೆಗೆಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರೊಬ್ಬರು:– ನಿಮ್ಮ ಬುದ್ಧಿ ಏನೆಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ನೀವು ಶಿವಮೊಗ್ಗದಲ್ಲಿ ಚುನಾವಣೆಗೆ ನಿಂತಿರಬೇಕು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ನಿಮ್ಮ ಕ್ಷೇತ್ರದ ಜನರೇ ಅದನ್ನು ತೀರ್ಮಾನ ಮಾಡಲಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ ನೀವು ಈಲ್ಡ್ ಆಗಬೇಡಿ, ಆದಷ್ಟು ಬೇಗ ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಹೇಳುವವರೆಗೂ ಮಧ್ಯದಲ್ಲಿ ಯಾರೇ ಎದ್ದರೂ ಕೂಡ ನಾನು ಮಾತ್ರ ಖಂಡಿತಾ ಕುಳಿತುಕೊಳ್ಳುವುದಿಲ್ಲ.

ಅಧ್ಯಕ್ಷರು:– ಹೇಳುವವರೆಗೆ ಕುಳಿತುಕೊಳ್ಳುವುದಿಲ್ಲವೆಂದರೆ ನಾನೇ ಕುಳಿತುಕೊಳ್ಳಿ ಎಂದು ಹೇಳಬೇಕಾಗುತ್ತದೆ. ನೀವು ವಿಷಯವನ್ನು ಬಿಟ್ಟು ಬೇರೆ ಕಡೆ ಹೋದಾಗ ಬೇರೆ ಸದಸ್ಯರು ಮಧ್ಯೆ ಪ್ರವೇಶ ಮಾಡುತ್ತಾರೆ. ಅದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಈ ದೇಶವನ್ನು ಚಿಂದಿ ಚಿಂದಿ ಮಾಡಿದರು,

5.05 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ:– 45 ವರ್ಷಗಳಿಂದ ಈ ದೇಶವನ್ನು ಹೇಗೆ ಹಾಳು ಮಾಡಿದಿರಿ ಎಂಬ ಬಗ್ಗೆ ಚರಿತ್ರೆಯ ಬೇರೆ ಪುಟಗಳನ್ನು, ಪುಸ್ತಕಗಳನ್ನು ನನ್ನ ಫೈಲ್‌ನಲ್ಲಿ ತರಬೇಕಾಗುತ್ತದೆ. ನೀವು ಏನೋ ಮೆತ್ತಗೆ, ಸ್ವಲ್ಪ ಸುಮ್ಮನೆ ಕುಳಿತಿದ್ದೀರಿ, ನಿಮಗೆ ತಪ್ಪಿನ ಅರಿವಾಗಿದೆ ಎಂದು ನಾನು ಭಾಷಣವನ್ನು ಮಾಡುತ್ತಿದ್ದೇನೆ, ಇಲ್ಲದಿದ್ದರೆ ನೀವು 45 ವರ್ಷಗಳಿಂದ ಮಾಡಿದಂಥ ಕರ್ಮಕತೆಯನ್ನು ನಾನು ಬೇರೆ ರೀತಿಯಿಂದ ಹೇಳಬೇಕಾಗುತ್ತದೆ. ಯಾವ ದೇಶದಲ್ಲಿ ಸ್ವಾಮಿ ವಿವೇಕಾನಂದರು ಹೊರದೇಶಕ್ಕೆ ಹೋಗಿ ನಾನು ಹಿಂದೂ ಎಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆಂದು ಹೇಳಿದರೆ, ಆ ದೇಶದ, ಸ್ವಾತಂತ್ರ್ಯ ಭಾರತದಲ್ಲಿ ನಾನು ಹಿಂದೂ ಎಂದು ಹೇಳಿಕೊಳ್ಳುವುದು ಅಪಮಾನವೆಂದು ಹೇಳಿಕೊಳ್ಳತಕ್ಕಂಥ ಜನ ಅಧಿಕಾರಕ್ಕೆ ಬಂದ ಕಾರಣಕ್ಕೋಸ್ಕರ ಈ ವಿನಾಶದತ್ತ ನಾವು ಹೋಗುತ್ತಿದ್ದೇವೆ. ಆದುದರಿಂದ ಈವತ್ತು ನಾವು ಮಾತನಾಡಬೇಕಾದರೆ ಏನು ಮಾತನಾಡುತ್ತಿದ್ದೇವೆ ಈ ಮಾತಿನಿಂದ ಏನು ಪರಿಣಾಮವಾಗುತ್ತದೆ, ಅದರ ಅರಿವು ಇಲ್ಲದೆ ಮಾತನಾಡುವುದರಿಂದ, ಅದರ ಅರಿವು ಇಲ್ಲದೆ ದೇಶವನ್ನು ಕಟ್ಟುವುದರಿಂದ, ಅದರ ಅರಿವಿಲ್ಲದೆ ದೇಶವನ್ನಾಳುವುದರಿಂದ ಎಲ್ಲಾ ರಂಗಗಳಲ್ಲಿಯೂ ವೈಫಲ್ಯತೆಯನ್ನು ಕಾಣುತ್ತಿದ್ದೇವೆ. ಈ ದೇಶದಲ್ಲಿ ಹಿಂದು ಮತ್ತು ಮುಸಲ್ಮಾನರಿಗೆ ಒಂದೇ ರೀತಿಯಾದಂಥ ಕಾನೂನು ಇರಬೇಕು. ಕಾಮನ್ ಸಿವಿಲ್ ಕೋಡ್ ಇರಬೇಕೆಂದು ಭಾರತೀಯ ಜನತಾ ಪಾರ್ಟಿ ಹೇಳುತ್ತದೆ. ಅದಕ್ಕೆ ನಮ್ಮನ್ನು ಜಾತಿವಾದಿಗಳೆಂದು ಕರೆಯುತ್ತೀರಿ. ಇಂದು ಬೆಳಿಗ್ಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಮಾತನ್ನು ಹೇಳಿದರು, ನಿಜಲಿಂಗಪ್ಪನವರು ಈ ಮಾತನ್ನು ಹೇಳಿದರು, ಆದರೆ ಏಕೆ ಅದನ್ನು ಮಾಡಲಿಲ್ಲ. ಸ್ವಾತಂತ್ರ್ಯ ಬಂದು 45 ವರ್ಷಗಳಾಯಿತು, ಅಂದಿನಿಂದಲೂ ತಾವು ಅಧಿಕಾರದಲ್ಲಿದ್ದೀರಿ, ಈ ದೇಶದಲ್ಲಿ ಹಿಂದು, ಮುಸ್ಲಿಮ್, ಕ್ರೈಸ್ತರುಗಳು ಅಣ್ಣ ತಮ್ಮಂದಿರಂತೆ ಬಾಳಬೇಕು, ಬದುಕಬೇಕು ಎನ್ನತಕ್ಕ ಕಳಕಳಿ ನಿಮ್ಮಲ್ಲಿ ಪ್ರಾಮಾಣಿಕವಾಗಿ ಇದ್ದಿದ್ದರೆ, ಎಲ್ಲಾರೂ ಒಂದಾಗಿ ಬಾಳಬೇಕೆಂಬ ಕಳಕಳಿ ನಿಮಗೆ ಇದ್ದರೆ ಕಾಮನ್ ಸಿವಿಲ್ ಕೋಡನ್ನು ಏಕೆ ಜಾರಿಗೆ ತರಲಿಲ್ಲ? ಅದನ್ನು ತಂದಿದ್ದರೆ ದೇಶಕ್ಕೆ ಈ ಸ್ಥಿತಿ ಬರುತ್ತಿತ್ತೆ? ನನ್ನ ಸ್ನೇಹಿತರಾದ ಕಾನೂನಿನ ಸಚಿವರಾದ ಹಾರನಳ್ಳಿ ರಾಮಸ್ವಾಮಿಯವರು ಕೋರ್ಟಿನ ಬಗ್ಗೆ ಒಂದು ಮಾತನ್ನು ಹೇಳಿದರು, ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಯಾವ ಶಹಬಾನು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಮುಸ್ಲಿಮ್ ಹೆಣ್ಣುಮಗಳಿಗೆ ಸ್ವಾತಂತ್ರ್ಯ ಸಿಗಬೇಕೆಂದು ಐತಿಹಾಸಿಕ ತೀರ್ಪನ್ನು ಕೊಟ್ಟಿತೋ ಆ ತೀರ್ಪನ್ನು ಕೊಟ್ಟಂಥ ಜಡ್ಜ್‌ಗಳ ಫೋಟೊವನ್ನು ಸುಟ್ಟು ಹಾಕಿದರು. ನೀವು ಆ ಒಂದು ತೀರ್ಪಿನ ವಿರುದ್ಧ ಆ ಮುಸ್ಲಿಮ್ ಹೆಣ್ಣುಮಗಳಿಗೆ ಅನ್ಯಾಯ ಮಾಡತಕ್ಕ ಒಂದು ಶಹಬಾನುವಿನ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಮನ್ನಣೆಯನ್ನು ಕೊಟ್ಟಿರಿ, ನೀವು ಮಾಡಿದಂಥದ್ದು ತಪ್ಪು ಎಂದು ಹೇಳಿ ತಿದ್ದಿಕೊಂಡು ನಿಮಗೆ ಮಾರ್ಗದರ್ಶನ ಮಾಡಿದಾಗ ಅದಕ್ಕೆ ನೀವು ತಲೆಬಾಗಿದಿರಾ? ಇಲ್ಲ, ಏಕೆಂದರೆ ನೀವು ಅವರನ್ನು ತೃಪ್ತಿಪಡಿಸಬೇಕಾಗಿತ್ತು, ಈ ಒಂದು ನೀತಿಯಿಂದಲೆ, ಈ ಒಂದು ಕಂಟಕ ಸ್ಥಿತಿಗೆ ನಮ್ಮ ದೇಶ ಬರುವುದಕ್ಕೆ ಕಾರಣವಾಯಿತು. ಈ ರೀತಿಯ ನಿಲುವನ್ನು ಸ್ವಾತಂತ್ರ್ಯ ಬಂದು 45 ವರ್ಷಗಳಿಂದಲೂ ನಮ್ಮ ಕಾಂಗ್ರೆಸ್ ಸ್ನೇಹಿತರು ತಮಗೆ ಅರಿವಿಲ್ಲದೆ ತೆಗೆದುಕೊಂಡು ಬಂದಿರುವುದರಿಂದ ದೇಶದಲ್ಲಿ ಈ ರೀತಿಯ ಅನೇಕ ಅನಾಹುತಗಳಾದುವು. ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ, ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಇಷ್ಟೊಂದು ದೊಡ್ಡದಾದ ಪಕ್ಷದಲ್ಲಿ ದೇಶಕ್ಕೆ ಹೋರಾಟ ಮಾಡಿದರು, ಅದೆಲ್ಲವನ್ನೂ ನಾವೇ ಎಂದು ಕೊಂಡುಬಿಟ್ಟಿರಿ ನೀವು. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂಥ ಕಾಂಗ್ರೆಸ್ ಪಕ್ಷ ರಾಜಕೀಯ ಪಕ್ಷವಾಗಿರಲಿಲ್ಲ. ಅದು ಸ್ವಾತಂತ್ರ್ಯ ಸಂಗ್ರಾಮಕ್ಕೋಸ್ಕರವಾಗಿ ಇತ್ತು, ಎಲ್ಲಾರೂ ಸಹ ಅದರಲ್ಲಿ ಹೋರಾಟ ಮಾಡಿದರು. ನೀವು ಮಾಡಲಿಲ್ಲ. ಆದರೆ ಅವರು ಹೇಳಿದಂಥ

ವಿಚಾರವನ್ನೂ ಕೂಡ ನೀವು ವಿಸರ್ಜನೆ ಮಾಡಿದಿರಿ ಎಂದು ಮಾನ್ಯ ನಿಜಲಿಂಗಪ್ಪನವರು ಹೇಳಿದರು. ಈ ಮಾತನ್ನು ಯಡಿಯೂರಪ್ಪ ಹೇಳುತ್ತಿಲ್ಲ. ಇದರಿಂದ ಇವತ್ತು ಈ ದೇಶದ ಅನಾಹುತವಾಗುತ್ತಿದೆ. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಅವರ ಅಂಗರಕ್ಷಕನೇ ಗುಂಡಿಕ್ಕಿ ಕೊಂದ. ಆ ಇಂದಿರಾ ಗಾಂಧಿಯವರ ರಕ್ಷಣೆ ಮಾಡಲಿಕ್ಕೆ ನಿಮ್ಮಿಂದಾಗಲಿಲ್ಲ. ಅದೇ ರೀತಿ ಪ್ರಧಾನಿ ರಾಜೀವ್ ಗಾಂಧಿಯವರನ್ನು ನೀವು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ. ನಿಮ್ಮಂಥವರಿಂದ ಈ ದೇಶದ ಜನರ ರಕ್ಷಣೆಯಾಗುತ್ತದೆಯೇ? ಈ ಪ್ರಶ್ನೆಗೆ ನೀವು ಉತ್ತರ ಕೊಡಬೇಕಾಗುತ್ತದೆ. ಇಂದಿರಾ ಗಾಂಧಿಯವರು ಆ ರೀತಿ ದುರ್ಮರಣಕ್ಕೆ ಈಡಾದಾಗ ಅವತ್ತು ಅವರ ಒಂದು ಅಪೇಕ್ಷೆ ಇತ್ತು. ಯಾವುದೋ ಒಂದು ಕಾರಣಕ್ಕೆ ಯಾರೋ ಒಂದು ತಪ್ಪು ಮಾಡಿದರೆ 5–6 ಸಾವಿರ ಜನ ಸಿಖ್ ಸಹೋದರರ ಕಗ್ಗೊಲೆ ಆದಾಗ ಆ ಸಂದರ್ಭದಲ್ಲಿ ನೀವು ಕಣ್ಣೀರು ಹಾಕಿದಿರಿ. ಲೋಕಸಭೆಯಲ್ಲಿ ರೆಸಲ್ಯೂಷನ್ ಮಾಡಿದಿರಿ. ಇವತ್ತು ನೀವು ಬೊಬ್ಬೆ ಹೊಡೆಯುತ್ತಿದ್ದೀರಿ. ಇದು ತಪ್ಪು. ನೀವು ಯಾವ ರೀತಿ ನಡೆದುಕೊಂಡು ಬಂದಿರಿ ಎಂಬುದನ್ನೂ ನಾನು ಹೇಳುತ್ತಿದ್ದೇನೆ. ರಾಷ್ಟ್ರಧ್ವಜದ ಬಗ್ಗೆ ನಮಗೆ ಗೌರವ ಇದೆ. ಪ್ರಾಣದ ಹಂಗನ್ನು ತೊರೆದು ನಾನು ಕಾಶ್ಮೀರದ ಶ್ರೀನಗರಕ್ಕೆ ಹೋಗಿ ಬಂದೆ. ಅಲ್ಲಿ ಲಾಲ್ ಚೌಕದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಂಥ ಪ್ರಶ್ನೆ ಬಂದಾಗ ....

ಶ್ರೀ ಆರ್.ವಿ. ದೇಶಪಾಂಡೆ:– ಆಗಲೂ ನರಸಿಂಹರಾಯರು ಹೆಲಿಕ್ಯಾಪ್ಟರ್‌ನ್ನು ತೆಗೆದುಕೊಂಡು ಹೋದರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮದನ್ನೂ ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಕೇವಲ ಅದರದ್ದೇ ಹೇಳುತ್ತಿದ್ದೇನೆಂದು ನೀವು ತಿಳಿದುಕೊಳ್ಳಬೇಡಿ. ವಿ.ಪಿ.ಸಿಂಗರು ಹಿಂದೆ ಪ್ರಧಾನಿಯಾಗಿದ್ದರು. ಸುಮಾರು 30–40 ಸಾವಿರ ವಿದ್ಯಾರ್ಥಿ ಯುವಕರು, ಯುವತಿಯರು ದೇಶಾದ್ಯಂತ ಲಾಲ್ ಚೌಕದಲ್ಲಿ ರಾಷ್ಟ್ರಧ್ವಜ ಹಾರಿಸುತ್ತೇವೆಂದು ಹೇಳಿದರು. ಅಲ್ಲಿ ಏನಾದರೂ ಅಹಿತಕರ ಘಟನೆ ನಡೆಯಬಹುದೆಂದು ಸರ್ಕಾರದವರು ಅವರನ್ನು ಬಂಧಿಸಿ ದೆಹಲಿಗೆ ಕರೆದುಕೊಂಡು ಬಂದರು. ವಿ.ಪಿ. ಸಿಂಗ್‌ರವರು ಅವರನ್ನು ಭೇಟಿ ಮಾಡಿದರು. ವಿದ್ಯಾರ್ಥಿ ಪರಿಷತ್ತಿನ ಹೆಣ್ಣುಮಕ್ಕಳು ತಮ್ಮ ಬಳೆಗಳನ್ನು ಅವರ ಟೇಬಲ್‌ನ ಮೇಲಿಟ್ಟು ನಾವು ನಮ್ಮ ಪ್ರಾಣವನ್ನು ಕೊಡುವುದಕ್ಕೂ ಸಿದ್ಧರಾಗಿದ್ದೇವೆ, ರಾಷ್ಟ್ರಧ್ವಜವನ್ನು ಹಾರಿಸುವುದನ್ನು ನಮಗೆ ಬಿಡಿ; ಇಲ್ಲದಿದ್ದರೆ ನೀವು ಹೋಗಿ ಹಾರಿಸಿ ಎಂದು ಹೇಳಿದರು. ಇದು ಪತ್ರಿಕೆಗಳ ಮುಖಪುಟಗಳಲ್ಲಿ ಬಂತು. ವಿ.ಪಿ.ಸಿಂಗರು ಹೇಳಿದರು ಇನ್ನು ಒಂದು ವಾರದೊಳಗೆ ನಿಮ್ಮನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಲಾಲ್ ಚೌಕದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುತ್ತೇನೆ ಎಂದು. ವರ್ಷಗಳೇ ಉರುಳಿ ಹೋದುವು. ಆದರೆ ಆ ಕೆಲಸ ಆಗಲಿಲ್ಲ. ಅವರು ಆ ಕೆಲಸವನ್ನು ಮಾಡಲಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೇ ತಾವು ಹೋಮ್ ಮಿನಿಸ್ಟರ್ ಆಗಿದ್ದಿರಿ. ನೀವು ಬಹಳ ದೂರ ಹೋಗಬೇಡಿ. ಈ ದೇಶದಲ್ಲಿ ಆಗಸ್ಟ್ 15ನೇ ತಾರೀಖು, ಜನವರಿ 26ನೇ ತಾರೀಖು ಗಣರಾಜ್ಯ ದಿನದಂದು ಯಾರು ಎಲ್ಲಿ ಬೇಕಾದರೂ ನಮ್ಮ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಸ್ವಾತಂತ್ರ್ಯ ಇದೆ ಅಲ್ಲವೇ? ಶ್ರೀನಗರದ ಲಾಲ್ ಚೌಕದಲ್ಲಿ ನಾವು ರಾಷ್ಟ್ರಧ್ವಜವನ್ನು ಹಾರಿಸುವಂಥ ಸಂದರ್ಭದಲ್ಲಿ ನಾವು ದೇಶದ ರಾಷ್ಟ್ರಧ್ವಜಕ್ಕೆ ಗೌರವ ಕೊಟ್ಟು ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಹೇಳಿದೆವು. ಹುಬ್ಬಳ್ಳಿಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಹೋದಂಥ ಜನರನ್ನು ಬಂಧಿಸಿದವರು ನಿಮ್ಮ ಕಾಂಗ್ರೆಸ್‌ನವರು ಅಲ್ಲವೆ? ನಿಮ್ಮ ಸರ್ಕಾರ

ಇದ್ದಾಗ ಅಲ್ಲವೆ ? ಇದು ಒಂದು ಅಕ್ಷಮ್ಯ ಅಪರಾಧ ಅಲ್ಲವೆ ? ಈಗಲಾದರೂ ನೀವು ಒಂದು ದಿಟ್ಟ ನಿಲುವು ತೆಗೆದುಕೊಳ್ಳಿ. ಮಸೀದಿಯ ಮೇಲೆ, ದೇವಸ್ಥಾನದ ಮೇಲೆ ಮನೆ ಮನೆಗಳಲ್ಲಿ ಆಗಸ್ಟ್ 15ನೇ ತಾರೀಖು, ಜನವರಿ 26ನೇ ತಾರೀಖು ನಮ್ಮ ರಾಷ್ಟ್ರಧ್ವಜವನ್ನು ಹಾರಿಸಬಹುದೆನ್ನುವ ಒಂದು ಪರಿಪಾಟವನ್ನು ನೀವು ನಿರ್ಮಾಣ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಜನವರಿ 26ನೇ ತಾರೀಖು ಬಿ.ಜೆ.ಪಿ. ಬಾವುಟವನ್ನು ಹಾರಿಸಿ ಎಂದು ನಾನು ಹೇಳಲಿಲ್ಲ. ಕಾಂಗ್ರೆಸ್ ಪಕ್ಷದ ಬಾವುಟವನ್ನು ಹಾರಿಸಿ ಎಂದು ನಾನು ಹೇಳಲಿಲ್ಲ. ಜನತಾ ದಳದ ಬಾವುಟವನ್ನು ಹಾರಿಸಿ ಎಂದು ನಾನು ಹೇಳಲಿಲ್ಲ. ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜ ಹಾರಿಸುವುದಕ್ಕೆ ಹೋದಂಥ ಸುಮಾರು 60–70 ಸಾವಿರ ಜನರನ್ನು ನಿಮ್ಮ ಪೋಲೀಸರು ಬಂದೂಕು ಹಿಡಿದುಕೊಂಡು ಹೆದರಿಸಿ ಓಡಿಸಿದ್ದಾರೆ ....

(ಗೊಂದಲ)

ಛೇರ್ಮನ್:– ಹಿಂಡಸ್ಗೇರಿಯವರೇ, ಮಾನ್ಯ ಯಡಿಯೂರಪ್ಪನವರು ಈಲ್ಡ್ ಆಗಿಲ್ಲ. ಅವರು ಮಾತನಾಡುತ್ತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮಗೆ ಏತಕ್ಕೆ ಉರಿಯುತ್ತದೆ ? ನೀವು ಮಾಡಿದಂಥ ದ್ರೋಹಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ದೇಶದ ಜನರಿಗೆ ನೀವು ದ್ರೋಹ ಮಾಡಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಂಥ ಬೇಜವಾಬ್ದಾರಿ ಮಾತುಗಳನ್ನು ಆಡಿ, ಆಡಿ ....

(ಗೊಂದಲ)

ಛೇರ್ಮನ್:– ನೀವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ.ಎಂ. ಹಿಂಡಸ್ಗೇರಿ:– ರಾಷ್ಟ್ರಧ್ವಜವನ್ನು ಹಾರಿಸಬಾರದೆಂದು ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಏನೋ ಮಾಡನಾಡುತ್ತಿದ್ದಾರೆ. ಅವರು ಇನ್ನೂ ಯಾವುದೋ ಜಮಾನಾದಲ್ಲಿದ್ದಾರೆ. ನಾನು ಹೇಳುತ್ತಿರುವುದು ಮೊನ್ನೆ ಜನವರಿ 26ನೇ ತಾರೀಖು ಆದಂಥಾದ್ದು. ಧರ್ಮಸಿಂಗ್‌ರವರೇ ನಾಳೆ ನೀವು ಏನು ಹೇಳುತ್ತೀರಿ ? ಇನ್ನುಳಿದಿರುವವರು ಬಿ.ಜೆ.ಪಿಯವರು, ಆರ್‌ಎಸ್‌ಎಸ್ ನವರು ತಾನೇ ? ನಾಳೆ ಜನವರಿ 26ನೇ ತಾರೀಖು ನಾನು ಹುಬ್ಬಳ್ಳಿಗೆ ಹೋಗುತ್ತಿದ್ದೇನೆ. ಆಗ ಯಡಿಯೂರಪ್ಪನವರು ಜಾತಿ ವಿಷಬೀಜವನ್ನು ಬಿತ್ತುವುದಕ್ಕೆ ಹೋದರು ಎಂದು ಹೇಳುತ್ತೀರಾ ? ನಿಮ್ಮನ್ನು ನಾನು ಏರೋಡ್ರಂನಲ್ಲಿ ಭೇಟಿಮಾಡಿದ್ದೆ. ಮೂರು ಸಾವಿರ ಮಠದ ಸ್ವಾಮಿಗಳನ್ನು ಅಲ್ಲಿ ಕಳುಹಿಸಿ ರಾಷ್ಟ್ರಧ್ವಜವನ್ನು ಹಾರಿಸಿ ಈ ಬೆಂಕಿ ಹಚ್ಚುವುದಕ್ಕೆ ಬಿಡಬೇಡಿ ಎಂದು ನಾನು ಹೇಳಿದ್ದೆ. ಆಗಲಿ ಎಂದು ನೀವೂ ಕೂಡ ಒಪ್ಪಿಕೊಂಡಿರಿ. ಇದರ ಬಗ್ಗೆ ಮಾತನಾಡೋಣ ಯಡಿಯೂರಪ್ಪನವರೇ ಎಂದೂ ಹೇಳಿದಿರಿ. ಇದಕ್ಕೆ ಬೇರೆ ಕಾರಣ ಇರಬಹುದು. ಅವತ್ತು 60–70 ಸಾವಿರ ಜನರನ್ನು ಹೊಡೆದಂಥ ಪೋಲಿಸ್

ಅಧಿಕಾರಿಗಳನ್ನು ನಾನು ಕೇಳಬಯಸುತ್ತೇನೆ. ಆ ಜನರನ್ನು ನೀವು ತಡೆದಿರಲ್ಲಾ. ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಕರೆಕೊಟ್ಟರು. ಅವನು ಅಧಿಕಾರಿ ಇರಬಹುದು, ರಾಜಕಾರಣಿ ಇರಬಹುದು, ಅಥವಾ ಬೇರೆ ಯಾರೇ ಇರಬಹುದು. ಅವರು ಕಾನೂನು ಬಾಹಿರ ಕೆಲಸವನ್ನು ಏನಾದರೂ ಮಾಡಿದರೆ ಅದನ್ನು ಧಿಕ್ಕರಿಸಬೇಕೆಂದು ಕರೆಕೊಟ್ಟರು. ಈಗ ತಾಕತ್ತು ಬಂತು. ರಾಷ್ಟ್ರಧ್ವಜ ಹಾರಿಸುವುದನ್ನು ನೀವು ತಡೆಹಿಡಿಯಿರಿ ನಾವು ನಿಮಗೆ ರಕ್ಷಣೆ ಕೊಡುತ್ತೇವೆಂದು ಅಧಿಕಾರಿಗಳಿಗೆ ನೀವು ಹೇಳಿದಿರಿ. ಕುರ್ಚಿಗೋಸ್ಕರ, ಸ್ವಾರ್ಥಕ್ಕೋಸ್ಕರ, ಅಧಿಕಾರಕ್ಕೋಸ್ಕರ ರಾಜಕಾರಣಿಗಳು ಮಾಡುವಂಥ ಪಾಪದಲ್ಲಿ ಪಾಲುಗಾರರಾಗಿರುವಂಥ ಈ ಒಂದು ಪ್ರವೃತ್ತಿ ಏನಿದೆ ಇದು ಕೊನೆಯಾಗಬೇಕು. ಇದಕ್ಕಾಗಿ ಜನರು ಸತ್ತರು.ಈ ದೇಶದಲ್ಲಿ ಹೋರಾಟ ಮಾಡಿದರು. ಈ ದೇಶದಲ್ಲಿ ವಂದೇಮಾತರಂ ಹೇಳಿದರೆ ಅಪರಾಧವಾಗುತ್ತದೆ. ಲೋಕಸಭೆ ಒಳಗೆ ವಂದೇಮಾತರಂ ಹಾಡುವುದಕ್ಕೆ ಅವಕಾಶವಾಯಿತು, ಯಾವ ವಂದೇಮಾತರಂ ಗೀತೆಯೊಂದಿಗೆ ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಜನರು ನಗುನಗುತ್ತಾ ಪ್ರಾಣ ಕೊಟ್ಟರೋ ಆ ವಂದೇಮಾತರಂ ಹೇಳಿದರೆ ಈ ದೇಶದಲ್ಲಿ ಅಪರಾಧವಾಗುತ್ತದೆ.

ಲೋಕಸಭೆಯಲ್ಲಿ ಪ್ರಾರಂಭದಲ್ಲಿ ಇದನ್ನು ಹಾಡಬೇಕೆಂದಾಯಿತು. ಯಾರೋ ಒಬ್ಬ ಅಲ್ಪಸಂಖ್ಯಾತ, ಒಬ್ಬಿಬ್ಬ ಲೋಕಸಭಾ ಸದಸ್ಯರು ಅದನ್ನು ವಿರೋಧ ಮಾಡಿದರು ಎಂದು ಹೇಳಿ ಅದನ್ನು ವಾಪಸ್ ತೆಗೆದುಕೊಂಡಿರಿ. ನೀವು ದೇಶ ಆಳುತ್ತೀರಿ ನೀವು ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡುತ್ತೀರಿ. ನಾನು 6ನೇ ತಾರೀಖಿಗೆ ಇನ್ನೂ ಬಂದಿಲ್ಲ.

ಶ್ರೀ ಎಸ್. ರಮೇಶ್:– ತಾವು ಸಂಬಂಧಪಟ್ಟ ವಿಚಾರವನ್ನು ಮಾತ್ರ ಹೇಳಿ.

ಶ್ರೀ ಎ.ಎಂ. ಹಿಂಡಸ್ಗೇರಿ:– ಈ ವಿಚಾರಕ್ಕೆ ಸಂಬಂಧಪಡದ ವಿಷಯವನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವಕಾಶವೇ ಇದಲ್ಲವೇ ? 6ನೇ ತಾರೀಖಿಗೆ ಬಂದು ಬೇಗನೆ ಮುಗಿಸುತ್ತೇನೆ. ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ನಾನೊಬ್ಬನೇ ಬಹಳ ಹೊತ್ತು ಮಾತನಾಡುವ ಅಗತ್ಯ ಇಲ್ಲ.

ಛೇರ್ಮನ್:– ಒಂದೂವರೆ ಗಂಟೆಯಾಯಿತು ಇನ್ನೂ ನೀವು 6ನೇ ತಾರೀಖಿಗೆ ಬಂದಿಲ್ಲ. 6ನೇ ತಾರೀಖಿಗೆ ಬೇಗ ಬಂದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಯಾರೇ ಆಗಲಿ ಅಧಿಕಾರದಲ್ಲಿರುವ ಸ್ನೇಹಿತರಿಗೆ ನಾನು ಪ್ರಾರ್ಥನೆ ಮಾಡುತ್ತೇನೆ. ಯಾರೇ ಆಗಲೀ ಹಿಂದೂ, ಮುಸ್ಲಿಂ ಕ್ರಿಶ್ಚಿಯನ್ ಹೆಸರಿನಲ್ಲಿ ರಾಜಕಾರಣ ಮಾಡಬಾರದು ಆ ರೀತಿ ಮಾಡಬೇಕೆಂದು ಯಾರಿಗೂ ಅಪೇಕ್ಷೆ ಇಲ್ಲ ಮತ್ತು ಯಾರಿಗೂ ಇದು ಇರಬಾರದು. ಎಲ್ಲರೂ ಒಂದಾಗಿ ಬದುಕಿ ಬಾಳಬೇಕು. ಅದಕ್ಕೆ ಬೇಕಾದಂತಹ ನ್ಯಾಯ ಒದಗಿಸತಕ್ಕಂತಹ ಪ್ರಾಮಾಣಿಕ ಪ್ರಯತ್ನ ನಮ್ಮಿಂದ ಆಗಬೇಕಾಗಿದೆ. ಅವರಿಗೆ ಸತ್ಯ ಹೇಳಿ. ಮುಸ್ಲಿಂ ಬಂಧುಗಳು ನಮ್ಮ ಜೊತೆಯಲ್ಲಿ ಗೌರವದಿಂದ ಬಾಳುತ್ತಿದ್ದಾರೆ ಅವರದ್ದೇನೂ ತಪ್ಪಿಲ್ಲ. ಇಲ್ಲಿ ಪ್ರಶ್ನೆ ಇರುವಂಥಾದ್ದು ಮಹಾತ್ಮಾ ಗಾಂಧೀಜಿಯವರ ರಾಮರಾಜ್ಯ ಕಲ್ಪನೆ ಇಟ್ಟುಕೊಂಡು ಹೋರಾಟ ಮಾಡಿದಂತಹವರಿಗೆ ನ್ಯಾಯ ಸಿಗಬೇಕಾಗಿದೆ. ಇಮಾಮ್ ರಾಜ್ಯ ಮಾಡುವುದಕ್ಕೆ ಹೊರಟಿದ್ದೀರಿ. ಅದು ಇಲ್ಲಿ ತಪ್ಪಾಗಿರುವಂಥಾದ್ದು. ಇಲ್ಲಿ ಪ್ರಶ್ನೆ ಇರುವಂಥಾದ್ದೇನೂ ಇಲ್ಲ. ಅಲ್ಪಸಂಖ್ಯಾತರಿಗೆ ಸತ್ಯ ಸಂಗತಿಯನ್ನು ಹೇಳಿ ನೋಡಪ್ಪ 40ವರ್ಷಗಳಿಂದ ಅಲ್ಲಿ ಹಿಂದೂಗಳು ಪೂಜೆ ಮಾಡುತ್ತಿದ್ದಾರೆ, ಪ್ರಭು ಶ್ರೀರಾಮನ ಜನ್ಮ ಸ್ಥಾನದಲ್ಲಿ ಪೂಜೆ ನಡೆಯುತ್ತಿದೆ. ಯಾರೋ ಒಬ್ಬ ಅಕ್ರಮಣಕಾರ ಬಾಬರ್‌ಗೂ

ನಿಮಗೂ ಏನೂ ಸಂಬಂಧ ಇಲ್ಲ ನೀವು ಬೇರೆ ಕಡೆ ನಮಾಜು ಮಾಡುವುದಕ್ಕೆ 4-6 ಭವ್ಯ ಮಸೀದಿಯನ್ನು ಕಟ್ಟಿ ಕೊಡುತ್ತೇವೆಂದು ಹೇಳಬೇಕಿತ್ತು. ಅಕಸ್ಮಾತ್ ನೀವು ಆ ರೀತಿ ಯೋಚನೆ ಮಾಡುವುದರಿಂದ ಕೊನೆಯ ಪಕ್ಷ ಏನೂ ಆಗದಿದ್ದರೂ ಕೂಡ ಈ ರೀತಿ ಯೋಚನೆ ಮಾಡುವುದರಿಂದ ಬಿಜೆಪಿ, ಆರ್‌ಎಸ್‌ಎಸ್. ನವರು ಬೆಳೆಯುತ್ತಾರೆ ಎಂದು ಕನ್ವಿನ್ಸ್ ಮಾಡಿ. ಭವ್ಯ ಮಂದಿರವನ್ನು ಕಟ್ಟಬಹುದಿತ್ತು. ನಿಮ್ಮ ಪರಿಸ್ಥಿತಿ ಎಲ್ಲಿಗೆ ಬಂತು ಎಂಬುದನ್ನು ವಿಚಾರ ಮಾಡಿ. ಈ ದೇಶದ ಪ್ರಧಾನಿಯವರು ಮೊನ್ನೆ ಬೆಂಗಳೂರಿಗೆ ಬಂದಾಗ ಅಲ್ಲಿ ಶ್ರೀರಾಮನ ದರ್ಶನಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಪ್ರಶ್ನೆಗೆ ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಅವರು ಇಲ್ಲ ಎಂದು ತಿಳಿದು ಬಂತು. ಬೆಳಿಗ್ಗೆ ಪತ್ರಿಕೆಯಲ್ಲಿ ದರ್ಶನಕ್ಕೆ ಅವಕಾಶವಾಯಿತು ಎಂದು ಬರುತ್ತದೆ, ಜನ ಹೋದರು. ಮತ್ತೆ ಮಾರನೆಯ ದಿನ ಬೆಳಿಗ್ಗೆ ಬರುತ್ತದೆ ದರ್ಶನಕ್ಕೆ ಅವಕಾಶ ಇಲ್ಲ ಎಂದು ಪತ್ರಿಕೆಯಲ್ಲಿ ಬರುತ್ತದೆ. ಬೆಳಿಗ್ಗೆ ಒಂದು ಸಂಜೆ ಒಂದು ಏನು ಹೇಳುತ್ತೀರಿ ಏನು ಮಾಡುತ್ತೀರಿ ಇದರ ಗೊಂದಲ ಈ ದೇಶದಲ್ಲಿ ಬೆಂಕಿ ಹಚ್ಚುವುದಕ್ಕೆ ನೀವು ಕಾರಣವಾದಿರಿ. ಆ ಕಡೆ ಈ ಕಡೆ ಕುಳಿತಿರುವ ಸ್ನೇಹಿತರಿಗೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ, ಏನು ಪ್ರಾರ್ಥನೆ ಮಾಡುವುದಕ್ಕೆ ಹೊರಟಿದ್ದೇನೆಂದರೆ ಅಯೋಧ್ಯೆಯಲ್ಲಿ 6ನೇ ತಾರೀಖು ಅಲ್ಲಿದ್ದಂತಹ ಯುವಕರ, ಜನರ ಭಾವನೆಗಳು ಏನು ಇದೆ ಇದು ಕಿಡಿಯಾಯಿತು ಇದು ಹೆಚ್ಚಾಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇನ್ನಾದರೂ ಸತ್ಯ ಹೇಳಿ ಅಲ್ಲಿ ಭವ್ಯ ಮಂದಿರ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ. ಮುಸ್ಲಿಂ ಬಂಧುಗಳು ಸಹೋದರರಂತೆ. ಇದು ಬೇರೆಯಾಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. 11 ಪರ್ಸೆಂಟ್ ಓಟು ಬ್ಯಾಂಕ್ ನಿಮಗೆ ಉಳಿಯಬೇಕೆಂದು ಆಸೆ ಇದೆಯೇ ಹೊರತು ಮುಸ್ಲಿಂರವರು ಬಂದು ನಿಮ್ಮ ಕಾಲದಲ್ಲಿ ಗೌರವದಿಂದ ಜೀವನ ಮಾಡುವಂಥಹ ಸ್ಥಿತಿ ಸುಧಾರಣೆ ಆಗಿದೆಯೇ, ಆರ್ಥಿಕ ಸ್ಥಿತಿ ಸುಧಾರಣೆಯಾಗಿದೆಯೇ ಇಲ್ಲ. ಮೂಲೆಯಲ್ಲಿ ಬಡತನದ ಬೇಗೆಯಲ್ಲಿ ಸತ್ತು ಹೋಗುತ್ತಿದ್ದಾರೆ. ಅವರ ಸುಧಾರಣೆ ನಿಮಗೆ ಬೇಡ ಅವರ ಓಟು ಮಾತ್ರ ನಿಮಗೆ ಬೇಕು ಅವರ ಹಿತ ಬೇಡ. ಹರಿಜನ ಗಿರಿಜನರ ಸ್ಥಿತಿಯೂ ಇದೇ ಆಯಿತು. ಊರ ಹೊರಗಡೆ ಹರಿಜನರ ಕಾಲೋನಿಗಳನ್ನು ಕೇರಿಗಳನ್ನು ಮಾಡಿದಿರಿ. ಹರಿಜನರ ಉದ್ಧಾರಕರು ನಾವು, ಅಲ್ಪಸಂಖ್ಯಾತರ ಉದ್ಧಾರಕರು ನಾವು ಎಂದು ಹೇಳುತ್ತಾ ಈ ದೇಶವನ್ನು ವಿನಾಶದತ್ತ ತೆಗೆದುಕೊಂಡು ಹೋದಂತಹ ಕಾಲ ಮುಗಿಯಿತು. ಕೊನೆಯದಾಗಿ ಇಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿ ಲೋಕಸಭೆಯನ್ನು ವಿಸರ್ಜನೆ ಮಾಡಿ ಈ ದೇಶದ ಜನರ ಮುಂದೆ ಹೋಗಿ ಈ ದೇಶದ ಜನಕ್ಕೆ ನಾವು ಹೇಳುತ್ತಿರುವಂಥಾದ್ದು ಸತ್ಯವೋ ನೀವು ಹೇಳುತ್ತಿರುವಂಥಾದ್ದು ಸತ್ಯವೋ ತೀರ್ಮಾನವಾಗಲಿ.

ಶ್ರೀ ಎಸ್.ರಮೇಶ್:- ಮಾನ್ಯ ಅಧ್ಯಕ್ಷರೇ, ಇವರು ಹೇಳು ....

(ಗೊಂದಲ)

ಶ್ರೀ ಬಿ.ಎಸ್. ಯಡ್ಡಿಯೂರಪ್ಪ:- ನಿಮ್ಮ ಸರ್ಟಿಫಿಕೇಟ್ ನಮಗೆ ಬೇಡ. ಈ ದೇಶದ ಜನರ ಸರ್ಟಿಫಿಕೇಟ್ ನಮಗೆ ಬೇಕಾಗಿದೆ. ನೀವೇನು ನಮಗೆ ಸರ್ಟಿಫಿಕೇಟನ್ನು ಕೊಡಬಲ್ಲಿರಿ ? 45 ವರ್ಷಗಳಲ್ಲಿ ನಿಮ್ಮನ್ನು ನಂಬಿದಂತಹ ಜನಕ್ಕೆ 2 ಹೊತ್ತು ಊಟ ಕೊಡುವುದಕ್ಕೆ ಆಗದೇ ಇರುವಂತಹವರು ನೀವು. ಇವತ್ತು ಸರ್ಕಾರದ ಬೊಕ್ಕಸ ಲೂಟಿ ಮಾಡಿ ಮಹಲ್ ಕಟ್ಟಿಕೊಂಡು ಈ ದೇಶದ ಜನಕ್ಕೆ ದ್ರೋಹ ಮಾಡುತ್ತಿರುವಂಥ ರಾಜಕಾರಣಿಗಳಿಂದ ಈ ದೇಶದ ಜನ ನಿಮ್ಮಿಂದ ಏನನ್ನು ನಿರೀಕ್ಷೆ ಮಾಡುತ್ತಾರೆ ? ಇದು ಬಿಜೆಪಿಯ ಕಾಲ, ಆರ್‌ಎಸ್‌ಎಸ್ ಗಳ ಕಾಲ. ನಮ್ಮ ಕಾಲ ಬರುತ್ತದೆ. ಕಣ್ಣು ಬಿಡಿ ಈಗಲಾದರೂ, ಜನರ ಮನಸ್ಸಿನ ಭಾವನೆಗಳನ್ನು ಅರ್ಥಮಾಡಿಕೊಂಡು ನಿಮ್ಮ ತಪ್ಪನ್ನು ತಿದ್ದಿಕೊಂಡು 6ನೇ ತಾರೀಖು ನಡೆದಂಥ ಘಟನೆಗಳು ಪುನರಾವರ್ತನೆಯಾಗಬಾರದೆಂದಿದ್ದರೆ ನಾಳೆ

ಜನವರಿ 26ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೇ ಒಂದು ಪ್ರಾರ್ಥನೆ, ನಾಳೆ ಹುಬ್ಬಳ್ಳಿಯಲ್ಲಿ ಜನವರಿ 26ನೇ ತಾರೀಖು ರಾಷ್ಟ್ರಧ್ವಜವನ್ನು ಹಾರಿಸುವಂಥ ಒಂದು ಕಾರ್ಯಕ್ರಮ, ಹೋದ ಸಾರಿ ಹೋದಾಗ ಅದನ್ನು ತಡೆಯುವಂಥ ಪ್ರಯತ್ನ ಮಾಡಿದರು ಹುಬ್ಬಳ್ಳಿಯಲ್ಲಿ ಅದು ಸುಗಮವಾಗುವಂತೆ ನೋಡಿಕೊಳ್ಳಿ. ಕಿತ್ತೂರು ರಾಣಿ ಚೆನ್ನಮ್ಮ ಮೈದಾನ ಏನು ಇದೆ ಅದಕ್ಕೆ ನಾನು ಹೋಗಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು:– ಶ್ರೀರಾಮ ಮೈದಾನ ಎಂದು ಕರೆಯುವುದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದನ್ನೇ ಕರೆದುಕೊಳ್ಳಿ, ನೀವು ಯಾವಾಗಲೂ ಏನೇನೋ ಕರೆಯುತ್ತೀರಿ, ಅದು ನಿಮ್ಮ ಜಾಯಮಾನಕ್ಕೆ ಬಂದುದು. ನಾನೇನು ಮಾಡುವುದಕ್ಕಾಗುತ್ತದೆ. ನಾನು ಹೇಳುತ್ತೇನೆ ಕಿತ್ತೂರು ರಾಣಿ ಚೆನ್ನಮ್ಮ ಎಂದು, ಬ್ರಾಕೆಟ್‌ನಲ್ಲಿ ಈದಗಾ ಮೈದಾನವೆಂದರೆ ಏನು ತಪ್ಪು. ಮಸೀದಿ ಮೇಲೆ ಇರಬಹುದು. ದೇವಸ್ಥಾನದ ಮೇಲೆ ಇರಬಹುದು, ಎಲ್ಲೇ ಇರಲಿ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಏನು ತಪ್ಪು ?

ಶ್ರೀ ಎಸ್. ರಮೇಶ್:– ಕರ್ನಾಟಕದಲ್ಲಿ ಬೆಂಕಿ ಹಚ್ಚಲು ಹೋಗುತ್ತಿದ್ದಾರಷ್ಟೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮಗೆ ಬೆಂಕಿ ಹಚ್ಚಿಬಿಡುತ್ತಾರಷ್ಟೆ. ಬೆಂಕಿಯೇ ಅದು, ರಾಷ್ಟ್ರಧ್ವಜವನ್ನು ಆರಿಸುವುದು. ನಿಮಗೆ ಬೆಂಕಿ ಹಚ್ಚಿಬಿಡುತ್ತಾರೆ ಈ ಮಾತನ್ನು ಹೇಳಿದರೆ.

(ಗೊಂದಲ)

ಛೇರ್ಮನ್:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆದ್ದರಿಂದ ನಾನು ನನ್ನ ಮಾತನ್ನು ....

(ಗೊಂದಲ)

ಶ್ರೀ ಕೆ. ಹರ್ಷಕುಮಾರ ಗೌಡ:– ಅಲ್ಪಸಂಖ್ಯಾತರ ಮತ ಅವರಿಗೆ ಬೇಡವೆಂದು ಹೇಳಲಿ. ಆದರೆ ನಮಗೆ ಏತಕ್ಕೆ ಓಟಿನ ಹಕ್ಕು ಬೇಡವೆಂದು ಹೇಳುವುದು. ಅವರು ಒಂದು ಪರ್ಸೆಂಟ್ ಇರಬಹುದು, ಎರಡು ಪರ್ಸೆಂಟ್ ಇರಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಮಾತನಾಡಲಿಕ್ಕೆ ಬಹಳಷ್ಟು ಅವಕಾಶವಿದೆ. ಇನ್ನು ಮೂರು ದಿವಸ ಬೇಕಾದರೆ ಚರ್ಚೆ ಮಾಡೋಣ. ಏನೂ ಚಿಂತೆ ಮಾಡಬೇಕಾಗಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ನಿನ್ನೆ ಅದನ್ನೇ ಅಪ್ಪಣೆ ಕೊಡಿಸಿದ್ದುದು. ದೇಶ ಇಂಥ ಒಂದು ಸಂದಿಗ್ಧ ಪರಿಸ್ಥಿಯಲ್ಲಿರಬೇಕಾದರೆ ನಿರ್ವಿವಾದದ ಚರ್ಚೆಯಾಗಬೇಕು. ವಿಚಾರ ಮಂಥನವಾಗಬೇಕು. ಸರಿ ತಪ್ಪು ಎಂದು ತೀರ್ಮಾನ ಮಾಡುವಂಥ ಅವಕಾಶ ಈ ವೇದಿಕೆಯಲ್ಲಿ ಆಗಬೇಕಾಗಿದೆ. ಏತಕ್ಕೆ ಗಂಟಲು ಹರಿದುಕೊಳ್ಳುತ್ತೀರಿ ? ಏನಾಗಿದೆ ನಿಮ್ಮ ಪರಿಸ್ಥಿತಿ ? ನಿಮ್ಮನ್ನು ನಂಬಿದಂಥ ರಾಷ್ಟ್ರದ ಜನ ಯಾವ ಪರಿಸ್ಥಿತಿಗೆ ಬಂದಿರುತ್ತಾರೆ.

(ಗೊಂದಲ)

ಛೇರ್ಮನ್:– ಮಾನ್ಯ ಇಂಡಸ್ಗೇರಿಯವರೆ ಅವರು ಮಾತನಾಡುತ್ತಿರುವಾಗ ನೀವು ಮಧ್ಯೆ ಮಧ್ಯೆ ಮಾತನಾಡುತ್ತಿದ್ದರೆ ತಿವರು ಮುಗಿಸುವುದಾದರೂ ಹೇಗೆ ? ನಿಮಗೆಲ್ಲ ಮಾತನಾಡಲಿಕ್ಕೆ ಅವಕಾಶವಿದೆ.

ಅವರು ಏನು ಹೇಳುತ್ತಾರೋ ಕೇಳಿಕೊಳ್ಳಿ, ನಂತರ ತಾವು ಏನು ಹೇಳಬೇಕೋ ಅದನ್ನು ಹೇಳಿ. ಇಲ್ಲವಾದರೆ ಈ ದಿವಸವೆಲ್ಲ ಅವರದೇ ಆಗಿಬಿಡುತ್ತದೆ ಮಾತನಾಡಲಿಕ್ಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಕೊನೆಯದಾಗಿ ಮಾನ್ಯ ಅಧ್ಯಕ್ಷಿಣಿಯವರೆ ....

(ಗೊಂದಲ)

ಶ್ರೀ ಕೆ. ಹರ್ಷಕುಮಾರಗೌಡ:– ಮಾನ್ಯ ಅಧ್ಯಕ್ಷಿಣಿಯವರೇ ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಛೇರ್ಮನ್:– ಅವರು ಇಲ್ಡ್ ಆಗಲಿಲ್ಲ. ನೀವು ಹೇಗೆ ಪಾಯಿಂಟ್ ಆಫ್ ಆರ್ಡರ್ ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಕೊನೆಯದಾಗಿ ಇಷ್ಟೇ ....

ಶ್ರೀ ಕೆ. ಹರ್ಷಕುಮಾರಗೌಡ:– ರಾಜ್ಯದಲ್ಲಿ ಶಾಂತಿಯಾಗಿದೆ, ಇಡೀ ಸರ್ಕಾರ ಮತ್ತು ಜನ ಶಾಂತಿಯನ್ನು ಬಯಸುತ್ತಿದ್ದಾರೆ. ರಾಜ್ಯದ ಇಡೀ ಪೋಲೀಸ್ ವ್ಯವಸ್ಥೆ ಕಷ್ಟಪಟ್ಟು ಶಾಂತಿಯನ್ನು ಮಾಡಿದ್ದಾರೆ. ಇಲ್ಲಿ ನಾವು ಭಾಷಣ ಮಾಡುತ್ತೇವೆ, ಅವರೂ ಭಾಷಣ ಮಾಡುತ್ತಾರೆ. ಅವರು ತಮ್ಮ ವಿಚಾರವನ್ನು ಹೇಳಬಹುದು, ಆದರೆ ರಾಜ್ಯದಲ್ಲಿ ಭಾಷಣ ಮಾಡಿಕೊಂಡು ಮತ್ತೊಮ್ಮೆ ಪ್ರಚೋದನೆಗಳಿಗೆ ಅವಕಾಶ ಕೊಡಬಾರದು. ಇಂಥವರ ಭಾಷಣದಿಂದ ನಮ್ಮ ನಮ್ಮ ಕ್ಷೇತ್ರಗಳಲ್ಲಿ 500 ರಿಂದ 1000 ಜನ ಸಾಯುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾವು ಕೂಡ ಸೆಕ್ಯುಲರ್ಸ್. ನಾವು ಹಿಂದುಗಳೇ, ನಾವೇನು ಬಾಡಿಗೆ ಹಿಂದುಗಳಲ್ಲ. ಹಿಂದುಗಳೆಂದು ಹೇಳಿಕೊಂಡು ನಾವು ಬದುಕುತ್ತಿಲ್ಲ. ನಾನು ಪ್ರಾರ್ಥನೆ ಮಾಡಿಕೊಂಡು ಹೇಳುತ್ತೇನೆ ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮ ಸನ್ಮಾನ್ಯ ರಮೇಶ್‌ರವರ ಭಾವನೆ, ಮಾನ್ಯ ಹರ್ಷಕುಮಾರ ಗೌಡರ ಭಾವನೆ ನನಗೆ ಅರ್ಥವಾಗಿದೆ. ಅವರಿಗೆ ಏನಾಗಿದೆ ಎಂದರೆ 6ನೇ ತಾರೀಖಿನ ಘಟನೆಯಾದ ಮೇಲೆ ಅವರ ಹಳ್ಳಿಗಳಿಗೆ ಹೋಗಿ ಮಸೀದಿ ಕಟ್ಟುತ್ತೇವೆಂದು ಪ್ರಧಾನಿಯವರು ಹೇಳಿದ ಮೇಲೆ ಜನರು ಅಟ್ಟಿಸಿಕೊಂಡು ಬರುತ್ತಿದ್ದಾರೆ. ಉರಿ ಹತ್ತಿಕೊಂಡಿದೆ, ಮುಂದೇನು ನಮ್ಮ ಗತಿ ಎಂದು ಅವರ ಭವಿಷ್ಯದ ಬಗ್ಗೆ ಚಿಂತೆಯಾಗಿದೆ. ಕಾಂಗ್ರೆಸ್ಸಿನ ಅವಸಾನದ ಕಾಲ ಹತ್ತಿರ ಬರುತ್ತಿದೆಯಲ್ಲವೆಂದು ಚಿಂತನೆಯಾಗುತ್ತಿದೆ. ಇದು ಪ್ರಶ್ನೆ ಇರುವಂಥದ್ದು.

(ಗೊಂದಲ)

ಛೇರ್ಮನ್:– ಮಾನ್ಯ ಯಡಿಯೂರಪ್ಪನವರೇ ನೀವು ಪ್ರಚೋದನೆಯ ಮಾತನಾಡಬೇಡಿ. ಈಗ ಮಾನ್ಯ ಸದಸ್ಯರಿಗೆ ಪ್ರಚೋದನೆಯ ಮಾತನಾಡಿದರೆ ಅವರು ಮಾತಿಗೆ ಅಡ್ಡಿ ಬರುತ್ತಾರೆ. ಮಾನ್ಯ ರಮೇಶ್‌ರವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ ಗೌಡ:– ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ನಾವು ಭಿಕ್ಷೆ ಬೇಡುವುದಿಲ್ಲ.

(ಗದ್ದಲ)

ಛೇರ್ಮನ್:– ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಹರ್ಷಕುಮಾರ ಗೌಡ:– ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಛೇರ್ಮನ್:– ಒಟ್ಟಿಗೆ ಎಲ್ಲರೂ ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ. ಹರ್ಷಕುಮಾರ ಗೌಡ:– ರಾಮನ ಹೆಸರು ಇಟ್ಟುಕೊಂಡು ಭಿಕ್ಷೆ ಬೇಡುವವರು ....

ಛೇರ್ಮನ್:– ಹರ್ಷಕುಮಾರ ಗೌಡರು ದಯವಿಟ್ಟು ಕುಳಿತುಕೊಳ್ಳಬೇಕು. ಮಿನಿಮಂ ಡಿಸಿಪ್ಲೀನ್ ಆದರೂ ಕಾಪಾಡಿಕೊಂಡು ಹೋಗದಿದ್ದರೆ ಹೇಗೆ?

ಶ್ರೀ ಕೆ. ಹರ್ಷಕುಮಾರ ಗೌಡ:– ರಾಮನ ಹೆಸರು ಹೇಳಿಕೊಂಡು ಭಿಕ್ಷೆ ಬೇಡುತ್ತೇವೆಯೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅಧ್ಯಕ್ಷರು ನಿಂತಾಗ ಯಾರೂ ಎದ್ದು ನಿಲ್ಲಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನ್ನ ಮಾತನ್ನು ಮುಗಿಸುತ್ತಿದ್ದೇನೆ. ತಾವು ನನಗೆ ಸಾಕಷ್ಟು ಸಮಯ ಕೊಟ್ಟಿದ್ದೀರಿ. ಆ ಕಡೆ ಕುಳಿತಿರತಕ್ಕ ಸ್ನೇಹಿತರಿಗೆ ಪ್ರಾರ್ಥನೆ, ಇದಕ್ಕೆ ಪರಿಹಾರ ಅಂದರೆ ದಯವಿಟ್ಟು ಈಗಲಾದರೂ ರಾಜ್ಯದಲ್ಲಿ, ದೇಶದಲ್ಲಿ ಶಾಂತಿ ಸುವ್ಯವಸ್ಥೆ ತರುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ನೀವು ಎಲ್ಲಾ ಸೇರಿ ಮಾಡೋಣ. ಇದಕ್ಕೆ ಸರಿಯಾದ ಸಮಾನ ಕಾನೂನು ಜಾರಿಗೆ ತರುವ ದೃಷ್ಟಿಯಿಂದ ಕಾಮನ್ ಸಿವಿಲ್ ಕೋಡ್ ಜಾರಿಗೆ ತರುವ ಪ್ರಯತ್ನ ಮಾಡಿ. 370 ನೇ ವಿಧಿಯನ್ನು ಸಂಪೂರ್ಣ ರದ್ದು ಮಾಡುವಂತೆ ಈಗಲಾದರೂ ಪ್ರಯತ್ನ ಮಾಡಿ. ಆರ್ಟಿಕಲ್ 29–30ನ್ನು ರದ್ದು ಮಾಡಿ. ಆಗ ಅಣ್ಣ ತಮ್ಮಂದಿರಂತೆ ಬಾಳುವಂತೆ, ಅವಕಾಶ ಆಗುತ್ತದೆ. ರಾವಣನ ವಂಶದವರಾಗ ಬೇಡಿ, ರಾಮನ ವಂಶದವರಾಗಿ. 6ನೇ ತಾರೀಖಿನ ಘಟನೆ ಪುನರಾವರ್ತನೆ ಆಗದಿರಲಿ. ಒಳ್ಳೆಯ ಕೆಲಸ ಮಾಡಿ ಪುಣ್ಯ ತಂದುಕೊಳ್ಳುವಂಥ ಶಕ್ತಿಯನ್ನು ಮಹಾತ್ಮ ಗಾಂಧಿ, ಶ್ರೀರಾಮಚಂದ್ರ ಕೊಡಲಿ. ಜೈ ಶ್ರೀ ರಾಮ. ನಮಸ್ಕಾರ.

(ಮಾನ್ಯ ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷಿಣಿಯವರು:– ಈ ಚರ್ಚೆಯನ್ನು ನಾಳೆ ತೆಗೆದುಕೊಳ್ಳೋಣ. ಮಾನ್ಯ ಮಂತ್ರಿಗಳು ಎರಡು ಬಿಲ್ಲುಗಳನ್ನು ಪಾಸ್ ಮಾಡಿಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಮುಖ್ಯ ಮಂತ್ರಿಗಳು ಬರಲಿ ಎಂದು ಬೆಳಿಗ್ಗೆ ಹೇಳಿದ್ದಿರಿ. ಬೆಳಗಾವಿ ಮೇಯರ್ ....

ಉಪಾಧ್ಯಕ್ಷಿಣಿಯವರು:– ಆಯಿತು. ಮೊದಲು ಮಸೂದೆಗಳನ್ನು ಮುಗಿಸಿ ಆಮೇಲೆ ಅದಕ್ಕೆ ಬರೋಣ.

ಶಾಸನ ರಚನಾ ಕಾರ್ಯಕಲಾಪಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ (ಅಮೆಂಡ್‌ಮೆಂಟ್) ಬಿಲ್ ಈಗಾಗಲೇ ಇಂಟ್ರಡ್ಯೂಸ್ ಆಗಿದೆ. ನಂತರ,

KARNATAKA COURT–FEES AND SUITS VALUATION (AMENDMENT) BILL, 1992